ಕ್ಷಿಪ್ತಃ ಪಶ್ಚಾತ್ ಸಲೀಲಂ ಶತಮತುಲ-ಮತೇ ಯೋಜನಾನಾಂ ಸ ಉಚ್ಚಃ
ತಾವದ್ ವಿಸ್ತಾರವಾಂಶ್ಚಾಪ್ಯುಪಲ-ಲವ ಇವ ವ್ಯಗ್ರ-ಬುದ್ಧ್ಯಾತ್ವಯಾಽತಃ ।
ಸ್ವಸ್ವ-ಸ್ಥಾನ-ಸ್ಥಿತಾತಿ-ಸ್ಥಿರ-ಶಕಲ-ಶಿಲಾ-ಜಾಲ-ಸಂಶ್ಲೇಷ-ನಷ್ಟ
ಚ್ಛೇದಾಂಕಃ ಪ್ರಾಗಿವಾಭೂತ್ ಕಪಿ-ವರ-ವಪುಷಸ್ತೇ ನಮಃ ಕೌಶಲಾಯ ॥೧೯॥

ದೃಷ್ಟ್ವಾ ದುಷ್ಟಾಧಿಪೋರಃ ಸ್ಫುಟಿತ-ಕನಕ-ಸದ್-ವರ್ಮ ಘೃಷ್ಟಾಸ್ಥಿ-ಕೂಟಂ
ನಿಷ್ಪಿಷ್ಟಂ ಹಾಟಕಾದ್ರಿ-ಪ್ರಕಟ-ತಟ-ತಟಾಕಾತಿ-ಶಂಕೋ ಜನೋಽಭೂತ್ ।
ಯೇನಾಽಜೌ ರಾವಣಾರಿ-ಪ್ರಿಯ-ನಟನ-ಪಟುರ್ಮುಷ್ಟಿರಿಷ್ಟಂ ಪ್ರದೇಷ್ಟುಂ
ಕಿಂ ನೇಷ್ಟೇ ಮೇ ಸ ತೇಽಷ್ಟಾಪದ-ಕಟಕ-ತಟಿತ್-ಕೋಟಿ-
ಭಾಮೃಷ್ಟಕಾಷ್ಠಃ ॥ ೨೦ ॥

ದೇವ್ಯಾದೇಶ-ಪ್ರಣೀತಿ-ದ್ರುಹಿಣ-ಹರ-ವರಾವಧ್ಯ-ರಕ್ಷೋ-ವಿಘಾತಾ-
ದ್ಯಾಸೇವೋದ್ಯದ್-ದಯಾರ್ದ್ರಃ ಸಹಭುಜಮಕರೋದ್ ರಾಮ-ನಾಮಾ
ಮುಕುಂದಃ ।
ದುಷ್ಪ್ರಾಪೇ ಪಾರಮೇಷ್ಠ್ಯೇ ಕರತಲಮತುಲಂ ಮೂರ್ಧ್ನಿ ವಿನ್ಯಸ್ಯ ಧನ್ಯಂ
ತನ್ವನ್ ಭೂಯಃ ಪ್ರಭೂತ-ಪ್ರಣಯ-
ವಿಕಸಿತಾಬ್ಜೇಕ್ಷಣಸ್ತ್ವೇಕ್ಷಮಾಣಃ ॥ ೨೧ ॥

ಜಘ್ನೋ ನಿಘ್ನೇನ ವಿಘ್ನೋ ಬಹುಲ-ಬಲ-ಬಕ-ಧ್ವಂಸನಾದ್ ಯೇನ
ಶೋಚದ್-
ವಿಪ್ರಾನುಕ್ರೋಶ-ಪಾಶೈರಸು-ವಿಧೃತಿ-ಸುಖಸ್ಯೈಕಚಕ್ರಾ-ಜನಾನಾಮ್ ।
ತಸ್ಮೈ ತೇ ದೇವ ಕುರ್ಮಃ ಕುರುಕುಲ-ಪತಯೇ ಕರ್ಮಣಾ ಚ ಪ್ರಣಾಮಾನ್
ಕಿರ್ಮೀರಂ ದುರ್ಮತೀನಾಂ ಪ್ರಥಮಮಥ ಚ ಯೋ ನರ್ಮಣಾ
ನಿರ್ಮಮಾಥ ॥ ೨೨ ॥

ನಿರ್ಮೃದ್ನನ್ನತ್ಯಯತ್ನಂ ವಿಜರ-ವರ ಜರಾಸಂಧ-ಕಾಯಾಸ್ಥಿ ಸಂಧೀನ್
ಯುದ್ಧೇ ತ್ವಂ ಸ್ವಧ್ವರೇ ವಾ ಪಶುಮಿವ ದಮಯನ್ ವಿಷ್ಣುಪಕ್ಷದ್ವಿಡೀಶಮ್।
ಯಾವತ್ ಪ್ರತ್ಯಕ್ಷ-ಭೂತಂ ನಿಖಿಲ-ಮಖ-ಭುಜಂ ತರ್ಪಯಾಮಾಸಿಥಾಸೌ
ತಾವತ್ಯಾಽಯೋಜಿ ತೃಪ್ತ್ಯಾ ಕಿಮು ವದ ಭಗವನ್
ರಾಜಸೂಯಾಶ್ವಮೇಧೇ ॥ ೨೩ ॥

ಕ್ಷ್ವೇಲಾಕ್ಷೀಣಾಟ್ಟಹಾಸಂ ತವ ರಣಮರಿಹನ್ನುದ್ ಗದೋದ್ದಾಮ-ಬಾಹೋಃ
ಬಹ್ವಕ್ಷೋಹಿಣ್ಯ-ನೀಕ-ಕ್ಷಪಣ-ಸುನಿಪುಣಂ ಯಸ್ಯ-ಸರ್ವೋತ್ತಮಸ್ಯ ।
ಶುಶ್ರೂಷಾರ್ಥಂ ಚಕರ್ಥ ಸ್ವಯಮಯಮಿಹ ಸಂವಕ್ತುಮಾನಂದತೀರ್ಥ-
ಶ್ರೀಮನ್ನಾಮನ್ ಸಮರ್ಥಸ್ತ್ವಮಪಿ ಹಿ ಯುವಯೋಃ ಪಾದ-ಪದ್ಮಂ
ಪ್ರಪದ್ಯೇ ॥ ೨೪ ॥

ದ್ರುಹ್ಯಂತೀಂ ಹೃದ್-ರುಹಂ ಮಾಂ ದ್ರುತಮನಿಲ ಬಲಾದ್
ದ್ರಾವಯಂತೀಮವಿದ್ಯಾ
ನಿದ್ರಾಂ ವಿದ್ರಾವ್ಯ ಸದ್ಯೋ-ರಚನ-ಪಟುಮಥಾಽಪಾದ್ಯ ವಿದ್ಯಾ-ಸಮುದ್ರ ।
ವಾಗ್ದೇವೀ ಸಾ ಸುವಿದ್ಯಾ-ದ್ರವಿಣ-ದ ವಿದಿತಾ ದ್ರೌಪದೀ ರುದ್ರ್ಯ-ಪತ್ನ್ಯ-
ದ್ಯುದ್ರಿಕ್ತಾ ದ್ರಾಗಭದ್ರಾದ್ ರಹಯತು ದಯಿತಾ ಪೂರ್ವಭೀಮಾಜ್ಞಯಾ
ತೇ ॥ ೨೫ ॥

ಯಾಭ್ಯಾಂ ಶುಶ್ರೂಷುರಾಸೀಃ ಕುರು-ಕುಲ-ಜನನೇ ಕ್ಷತ್ರ ವಿಪ್ರೋದಿತಾಭ್ಯಾಂ
ಬ್ರಹ್ಮಭ್ಯಾಂ ಬೃಂಹಿತಾಭ್ಯಾಂ ಚಿತಿ-ಸುಖ-ವಪುಷಾ
ಕೃಷ್ಣ-ನಾಮಾಸ್ಪದಾಭ್ಯಾಮ್ ।
ನಿರ್ಭೇದಾಭ್ಯಾಂ ವಿಶೇಷಾದ್ ದ್ವಿ-ವಚನ-
ವಿಷಯಾಭ್ಯಾಮಮೂಭ್ಯಾಮುಭಾಭ್ಯಾಂ
ತುಭ್ಯಂ ಚ ಕ್ಷೇಮದೇಭ್ಯಃ ಸರಸಿಜವಿಲಸಲ್ಲೋಚನೇಭ್ಯೋ
ನಮೋಽಸ್ತು ॥ ೨೬ ॥

ಗಚ್ಛನ್ ಸೌಗಂಧಿಕಾರ್ಥಂ ಪಥಿ ಸ ಹನುಮತಃ ಪುಚ್ಛಮಚ್ಛಸ್ಯ ಭೀಮಃ
ಪ್ರೋದ್ಧರ್ತುಂ ನಾಶಕತ್ ಸ ತ್ವಮುಮುರು-ವಪುಷಾ ಭೀಷಯಾಮಾಸ ಚೇತಿ ।
ಪೂರ್ಣ-ಜ್ಞಾನೌಜಸೋಸ್ತೇ ಗುರುತಮ ವಪುಷೋಃ ಶ್ರೀಮದಾನಂದತೀರ್ಥ
ಕ್ರೀಡಾ-ಮಾತ್ರಂ ತದೇತತ್ ಪ್ರಮದ-ದ ಸುಧಿಯಾಂ ಮೋಹಕ
ದ್ವೇಷಭಾಜಾಮ್ ॥ ೨೭ ॥

ಬಹ್ವೀಃ ಕೋಟೀರಟೀಕಃ ಕುಟಿಲಕಟುಮತೀನುತ್ಕಟಾಟೋಪಕೋಪಾನ್
ದ್ರಾಕ್ ಚ ತ್ವಂ ಸತ್ವರತ್ವಾಚ್ಛರಣದ ಗದಯಾ ಪೋಥಯಾಮಾಸಿಥಾರೀನ್ ।
ಉನ್ಮಥ್ಯಾತಥ್ಯ-ಮಿಥ್ಯಾತ್ವ-ವಚನ-ವಚನಾನುತ್ಪಥ-ಸ್ಥಾಂಸ್ತಥಾಽನ್ಯಾನ್
ಪ್ರಾಯಚ್ಛಃ ಸ್ವ-ಪ್ರಿಯಾಯ್ಯೈ ಪ್ರಿಯತಮ-ಕುಸುಮಂ ಪ್ರಾಣ ತಸ್ಮೈ
ನಮಸ್ತೇ ॥ ೨೮ ॥

ದೇಹಾದುತ್ಕ್ರಾಮಿತಾನಾಮಧಿಪತಿ ರಸತಾಮಕ್ರಮಾದ್ ವಕ್ರ-ಬುದ್ಧಿಃ
ಕ್ರುದ್ಧಃ ಕ್ರೋಧೈಕ-ವಶ್ಯಃ ಕ್ರಿಮಿರಿವ ಮಣಿಮಾನ್ ದುಷ್ಕೃತೀ
ನಿಷ್ಕ್ರಿಯಾರ್ಥಮ್ ।
ಚಕ್ರೇ ಭೂಚಕ್ರಮೇತ್ಯ ಕ್ರಕಚಮಿವ -ಸತಾಂ ಚೇತಸಃ ಕಷ್ಟಶಾಸ್ತ್ರಂ
ದುಸ್ತರ್ಕಂ ಚಕ್ರಪಾಣೇರ್ಗುಣ-ಗಣ-ವಿರಹಂ ಜೀವತಾಂ ಚಾಧಿಕೃತ್ಯ ॥ ೨೯ ॥

ತದ್-ದುಷ್ಪ್ರೇಕ್ಷಾನುಸಾರಾತ್ ಕತಿಪಯ-ಕುನರೈರಾದೃತೋಽನ್ಯೈರ್ವಿಸೃಷ್ಟೋ
ಬ್ರಹ್ಮಾಹಂ ನಿರ್ಗುಣೋಽಹಂ ವಿತಥಮಿದಮಿತಿ ಹ್ಯೇಷ ಪಾಷಂಡ-ವಾದಃ ।
ತದ್-ಯುಕ್ತ್ಯಾಭಾಸ-ಜಾಲ-ಪ್ರಸರ-ವಿಷ-ತರೂದ್ದಾಹ-ದಕ್ಷ-ಪ್ರಮಾಣ-
ಜ್ವಾಲಾ-ಮಾಲಾ-ಧರಾಗ್ನಿಃ ಪವನ ವಿಜಯತೇ ತೇಽವತಾರಸ್ತೃತೀಯಃ ॥ ೩೦ ॥

ಆಕ್ರೋಶಂತೋ ನಿರಾಶಾ ಭಯ-ಭರ-ವಿವಶ-ಸ್ವಾಶಯಾಶ್ಛಿನ್ನದರ್ಪಾಃ
ವಾಶಂತೋ ದೇಶ-ನಾಶಸ್ತ್ವಿತಿ ಬತ ಕುಧಿಯಾಂ ನಾಶಮಾಶಾದಶಾಽಶು ।
ಧಾವಂತೋಽಶ್ಲೀಲ-ಶೀಲಾ ವಿತಥ-ಶಪಥ-ಶಾಪಾಶಿವಾಃ ಶಾಂತ-ಶೌರ್ಯಾಃ
ತ್ವದ್-ವ್ಯಾಖ್ಯಾ-ಸಿಂಹನಾದೇ ಸಪದಿ ದದೃಶಿರೇ
ಮಾಯಿಗೋಮಾಯವಸ್ತೇ ॥ ೩೧ ॥

ತ್ರಿಷ್ವಪ್ಯೇವಾವತಾರೇಷ್ವರಿಭಿರಪಘೃಣಂ ಹಿಂಸಿತೋ ನಿರ್ವಿಕಾರಃ
ಸರ್ವಜ್ಞಃ ಸರ್ವಶಕ್ತಿಃ ಸಕಲ-ಗುಣ-ಗಣಾಪೂರ್ಣ-ರೂಪ-ಪ್ರಗಲ್ಭಃ ।
ಸ್ವಚ್ಛಃ ಸ್ವಚ್ಛಂದ-ಮೃತ್ಯುಃ ಸುಖಯಸಿ ಸುಜನಂ ದೇವ ಕಿಂ ಚಿತ್ರಮತ್ರ
ತ್ರಾತಾ ಯಸ್ಯ ತ್ರಿಧಾಮಾ ಜಗದುತ ವಶಗಂ ಕಿಂಕರಾಃ ಶಂಕರಾದ್ಯಾಃ ॥ ೩೨ ॥

ಉದ್ಯನ್ಮಂದ-ಸ್ಮಿತಶ್ರೀ-ಮೃದು ಮಧು-ಮಧುರಾಲಾಪ-ಪೀಯೂಷ-ಧಾರಾ-
ಪೂರಾಸೇಕೋಪಶಾಂತಾಸುಖ-ಸುಜನ-ಮನೋ-ಲೋಚನಾಪೀಯಮಾನಮ್ ।
ಸಂದ್ರಕ್ಷ್ಯೇ ಸುಂದರಂ ಸಂದುಹದಿಹ ಮಹದಾನಂದಮಾನಂದತೀರ್ಥ
ಶ್ರೀಮದ್-ವಕ್ತ್ರೇಂದು-ಬಿಂಬಂ ದುರಿತ-ನುದುದಿತಂ ನಿತ್ಯದಾಽಹಂ ಕದಾ
ನು॥ ೩೩ ॥

ಪ್ರಾಚೀನಾಚೀರ್ಣ-ಪುಣ್ಯೋಚ್ಚಯ-ಚತುರ-ತರಾಚಾರತಶ್ಚಾರು-ಚಿತ್ತಾನ್
ಅತ್ಯುಚ್ಚಾಂ ರೋಚಯಂತೀಂ ಶ್ರುತಿ-ಚಿತ-ವಚನಾಂ ಶ್ರಾವಕಾಂಶ್ಚೋದ್ಯ
ಚುಂಚೂನ್ ।
ವ್ಯಾಖ್ಯಾಮುತ್ಖಾತ-ದುಃಖಾಂ ಚಿರಮುಚಿತ-ಮಹಾಚಾರ್ಯ ಚಿಂತಾರತಾಂಸ್ತೇ
ಚಿತ್ರಾಂ ಸಚ್ಛಾಸ್ತ್ರ-ಕರ್ತಶ್ಚರಣ-ಪರಿಚರಾಂಛ್ರಾವಯಾಸ್ಮಾಂಶ್ಚ ಕಿಂಚಿತ್ ॥೩೪॥

ಪೀಠೇ ರತ್ನೋಪಕ್ಲುಪ್ತೇ ರುಚಿರ-ರುಚಿ-ಮಣಿ-ಜ್ಯೋತಿಷಾ ಸನ್ನಿಷಣ್ಣಂ
ಬ್ರಹ್ಮಾಣಂ ಭಾವಿನಂ ತ್ವಾಂ ಜ್ವಲತಿ ನಿಜಪದೇ ವೈದಿಕಾದ್ಯಾ ಹಿ ವಿದ್ಯಾಃ ।
ಸೇವಂತೇ ಮೂರ್ತಿಮತ್ಯಃ ಸುಚರಿತ ಚರಿತಂ ಭಾತಿ ಗಂಧರ್ವ-ಗೀತಂ
ಪ್ರತ್ಯೇಕಂ ದೇವ-ಸಂಸತ್ಸ್ವಪಿ ತವ ಭಗವನ್ ನರ್ತಿತ-ದ್ಯೋ-ವಧೂಷು ॥ ೩೫ ॥

ಸಾನುಕ್ರೋಶೈರಜಸ್ರಂ ಜನಿ-ಮೃತಿ-ನಿರಯಾದ್ಯೂರ್ಮಿ-ಮಾಲಾಕುಲೇಽಸ್ಮಿನ್
ಸಂಸಾರಾಬ್ಧೌ ನಿಮಗ್ನಾಂಛರಣಮಶರಣಾನಿಚ್ಛತೋ ವೀಕ್ಷ್ಯ ಜಂತೂನ್ ।
ಯುಷ್ಮಾಭಿಃ ಪ್ರಾರ್ಥಿತಃ ಸನ್ ಜಲನಿಧಿ-ಶಯನಃ ಸತ್ಯವತ್ಯಾಂ ಮಹರ್ಷೇಃ
ವ್ಯಕ್ತಶ್ಚಿನ್ಮಾತ್ರ-ಮೂರ್ತಿರ್ನ ಖಲು ಭಗವತಃ ಪ್ರಾಕೃತೋ ಜಾತು ದೇಹಃ ॥೩೬॥

ಅಸ್ತ-ವ್ಯಸ್ತಂ ಸಮಸ್ತ-ಶ್ರುತಿ-ಗತಮಧಮೈ ರತ್ನ-ಪೂಗಂ ಯಥಾಂಽಧೈಃ
ಅರ್ಥಂ ಲೋಕೋಪಕೃತ್ಯೈ ಗುಣ-ಗಣ-ನಿಲಯಃ ಸೂತ್ರಯಾಮಾಸ ಕೃತ್ಸ್ನಮ್ ।
ಯೋಽಸೌ ವ್ಯಾಸಾಭಿದಾನ ಸ್ತಮಹಮಹರಹರ್ಭಕ್ತಿತಸ್ತತ್-ಪ್ರಸಾದಾತ್
ಸದ್ಯೋ ವಿದ್ಯೋಪಲಬ್ಧ್ಯೈ ಗುರುತಮಮಗುರುಂ ದೇವದೇವಂ ನಮಾಮಿ॥ ೩೭ ॥

ಆಜ್ಞಾಮನ್ಯೈರಧಾರ್ಯಾಂ ಶಿರಸಿ ಪರಿಸರದ್-ರಶ್ಮಿ-ಕೋಟೀರ-ಕೋಟೌ
ಕೃಷ್ಣಸ್ಯಾಕ್ಲಿಷ್ಟ-ಕರ್ಮಾ ದಧದನು-ಸರಣಾದರ್ಥಿತೋ ದೇವ-ಸಂಘೈಃ ।
ಭೂಮಾವಾಗತ್ಯ ಭೂಮನ್ನಸುಕರಮಕರೋರ್ಬ್ರಹ್ಮಸೂತ್ರಸ್ಯ ಭಾಷ್ಯಂ
ದುರ್ಭಾಷ್ಯಂ ವ್ಯಸ್ಯ ದಸ್ಯೋರ್ಮಣಿಮತ ಉದಿತಂ
ವೇದ-ಸದ್-ಯುಕ್ತಿಭಿಸ್ತ್ವಮ್ ॥ ೩೮ ॥

ಭೂತ್ವಾಕ್ಷೇತ್ರೇ ವಿಶುದ್ಧೇ ದ್ವಿಜ-ಗಣ-ನಿಲಯೇ ರೂಪ್ಯಪೀಠಾಭಿಧಾನೇ
ತತ್ರಾಪಿ ಬ್ರಹ್ಮಜಾತಿಸ್ತ್ರಿಭುವನ-ವಿಶದೇ ಮಧ್ಯಗೇಹಾಖ್ಯ-ಗೇಹೇ ।
ಪಾರಿವ್ರಾಜ್ಯಾಧಿರಾಜಃ ಪುನರಪಿ ಬದರೀಂ ಪ್ರಾಪ್ಯ ಕೃಷ್ಣಂ ಚ ನತ್ವಾ
ಕೃತ್ವಾ ಭಾಷ್ಯಾಣಿ ಸಮ್ಯಗ್ ವ್ಯತನುತ ಚ ಭವಾನ್
ಭಾರತಾರ್ಥಪ್ರಕಾಶಮ್ ॥ ೩೯ ॥

ವಂದೇ ತಂ ತ್ವಾ ಸುಪೂರ್ಣಪ್ರಮತಿ ಮನುದಿನಾ ಸೇವಿತಂ ದೇವವೃಂದೈಃ
ವಂದೇ ವಂದಾರುಮೀಶೇ ಶ್ರಿಯ ಉತ ನಿಯತಂ ಶ್ರೀಮದಾನಂದತೀರ್ಥಮ್।
ವಂದೇ ಮಂದಾಕಿನೀ-ಸತ್-ಸರಿದಮಲ-ಜಲಾಸೇಕ-ಸಾಧಿಕ್ಯ-ಸಂಗಂ
ವಂದೇಽಹಂ ದೇವ ಭಕ್ತ್ಯಾ ಭವ-ಭಯ-ದಹನಂ ಸಜ್ಜನಾನ್
ಮೋದಯಂತಮ್ ॥ ೪೦ ॥

ಸುಬ್ರಹ್ಮಣ್ಯಾಖ್ಯ-ಸೂರೇಃ ಸುತ ಇತಿ ಸುಭೃಶಂ ಕೇಶವಾನಂದತೀರ್ಥ
ಶ್ರೀಮತ್-ಪಾದಾಬ್ಜ-ಭಕ್ತಃ ಸ್ತುತಿಮಕೃತ ಹರೇರ್ವಾಯುದೇವಸ್ಯ ಚಾಸ್ಯ ।
ತತ್ಪಾದಾರ್ಚಾದರೇಣ ಗ್ರಥಿತ-ಪದ-ಲಸನ್ಮಾಲಯಾ ತ್ವೇತಯಾ ಯೇ
ಸಂರಾಧ್ಯಾಮೂ ನಮಂತಿ ಪ್ರತತ-ಮತಿ-ಗುಣಾ ಮುಕ್ತಿಮೇತೇ ವ್ರಜಂತಿ ॥ ೪೧ ॥

ಇತಿ ಶ್ರೀ ತ್ರಿವಿಕ್ರಮಪಂಡಿತಾಚಾರ್ಯ ವಿರಚಿತ ವಾಯುಸ್ತುತಿಃ ಸಂಪೂರ್ಣಮ್

ಶ್ರೀ ವ್ಯಾಸರಾಜಯತಿ ವಿರಚಿತ

ಯಂತ್ರೋದ್ಧಾರಕ ಹನೂಮತ್ ಸ್ತೋತ್ರಮ್

ನಮಾಮಿ ದೂತಂ ರಾಮಸ್ಯ ಸುಖದಂ ಚ ಸುರದ್ರುಮಮ್ ।
ಪೀನವೃತ್ತಮಹಾಬಾಹುಂ ಸರ್ವಶತ್ರುನಿವಾರಣಮ್ ॥ ೧ ॥

ಸುಖಕರನೂ, ಕಲ್ಪವೃಕ್ಷಸ್ವರೂಪಿಯೂ, ದೃಢಕಾಯನೂ, ಬಲಿಷ್ಠನೂ, ಶತ್ರುನಾಶಕನೂ ಆದ ಶ್ರೀರಾಮಭಂಟನಾದ ಹನುಮಂತನನ್ನು ನಮಸ್ಕರಿಸುತ್ತೇನೆ.

ನಾನಾರತ್ನಸಮಾಯುಕ್ತಕುಂಡಲಾದಿವಿರಾಜಿತಮ್ ।
ಸರ್ವದಾಭೀಷ್ಟದಾತಾರಂ ಸತಾಂ ವೈ ದೃಢಮಾಹವೇ ॥ ೨ ॥

ರತ್ನಖಚಿತವಾದ ಕುಂಡಲ, ವಲಯ, ಕೇಯೂರ ಮುಂತಾದ ವಿವಿಧಾಭರಣಗಳಿಂದ ಅಲಂಕೃತನೂ, ಸದಾ ಸಜ್ಜನರ ಸಕಲಾಭೀಷ್ಟಗಳನ್ನು ಪೂರೈಸುವವನೂ, ಯುದ್ಧದಲ್ಲಿ ನಿಶ್ಚಲನೂ ಆದ....

ವಾಸಿನಂ ಚಕ್ರತೀರ್ಥಸ್ಯ ದಕ್ಷಿಣಸ್ಥೇ ಗಿರೌ ಸದಾ ।
ತುಂಗಾಂಭೋಧಿತರಂಗಸ್ಯ ವಾತೇನ ಪರಿಶೋಭಿತೇ ॥ ೩ ॥

ತುಂಗಭದ್ರಾನದಿಯ ನೀರಿನ ಅಲೆಗಳಿಂದ ಸ್ಪೃಷ್ಟವಾದ ಗಾಳಿಯಿಂದ ಅತ್ಯಂತವಾಗಿ ವಿರಾಜಿತವಾಗಿರುವ ಚಕ್ರತೀರ್ಥದ ದಕ್ಷಿಣ ದಿಕ್ಕಿನಲ್ಲಿರುವ ಗುಡ್ಡದಲ್ಲಿ ಯಾವಾಗಲೂ ಸನ್ನಿಹಿತನಾಗಿರುವ.....

ನಾನಾದೇಶಗತೈಃ ಸದ್ಭಿಃ ಸೇವ್ಯಮಾನಂ ನೃಪೋತ್ತಮೈಃ ।
ಧೂಪದೀಪಾದಿನೈವೇದ್ಯೈಃ ಪಂಚಖಾದ್ಯೈಶ್ಚ ಶಕ್ತಿತಃ ॥ ೪ ॥

ಅನೇಕ ದೇಶಗಳಿಂದ ಬಂದಿರುವ ಸಜ್ಜನರು ಮತ್ತು ರಾಜಶ್ರೇಷ್ಠರಿಂದ ಅವರ ಶಕ್ತ್ಯನುಸಾರವಾಗಿ ಪಂಚಕಜ್ಜಾಯಗಳಿಂದಲೂ, ಧೂಪದೀಪ ನೈವೇದ್ಯಗಳಿಂದಲೂ ಸೇವಿತನಾದ....

ಭಜಾಮಿ ಶ್ರೀಹನೂಮಂತಂ ಹೇಮಕಾಂತಿಸಮಪ್ರಭಮ್ ।
ವ್ಯಾಸತೀರ್ಥಯತೀಂದ್ರೇಣ ಪೂಜಿತಂ ಚ ವಿಧಾನತಃ ॥ ೫ ॥

ಅಪರಂಜಿ ಚಿನ್ನದ ಕಾಂತಿಗೆ ಸಮಾನವಾದ ಕಾಂತಿಯುಳ್ಳ, ಶ್ರೀವ್ಯಾಸರಾಜ ಯತಿಶ್ರೇಷ್ಠರಿಂದ, ತಂತ್ರಸಾರೋಕ್ತ ವಿಧಿಗಳಿಂದ, ಪೂಜಿತನಾಗಿರುವ ಶ್ರೀಹನುಮಂತನನ್ನು ಸೇವಿಸುತ್ತೇನೆ.

ತ್ರಿವಾರಂ ಯಃ ಪಠೇನ್ನಿತ್ಯಂ ಸ್ತೋತ್ರಂ ಭಕ್ತ್ಯಾ ದ್ವಿಜೋತ್ತಮಃ ।
ವಾಂಛಿತಂ ಲಭತೇಽಭೀಷ್ಟಂ ಷಣ್ಮಾಸಾನಂತರಂ ಖಲು ॥ ೬ ॥

ಬ್ರಾಹ್ಮಣೋತ್ತಮನು ಭಕ್ತಿಪುರಸ್ಸರವಾಗಿ ಪ್ರತಿದಿನವೂ ಮೂರುಸಲ ಈ ಸ್ತೋತ್ರವನ್ನು ಜಪಿಸಿದರೆ, ಆರು ತಿಂಗಳ ನಂತರ ಅಪೇಕ್ಷಿಸಿದ ಫಲವನ್ನು ಖಂಡಿತವಾಗಿಯೂ ಪಡೆಯುತ್ತಾನೆ.

ಪುತ್ರಾರ್ಥೀ ಲಭತೇ ಪುತ್ರಂ ಯಶೋಽರ್ಥೀ ಲಭತೇ ಯಶಃ ।
ವಿದ್ಯಾರ್ಥೀ ಲಭತೇ ವಿದ್ಯಾಂ ಧನಾರ್ಥೀ ಲಭತೇ ಧನಮ್ ॥ ೭ ॥

ಪುತ್ರಕಾಮಿಯು ಮಗನನ್ನು ಪಡೆಯುತ್ತಾನೆ. ಕೀರ್ತಿಕಾಮಿಯು ಕೀರ್ತಿಯನ್ನು ಹೊಂದುತ್ತಾನೆ. ವಿದ್ಯಾಕಾಮಿಯು ವಿದ್ಯೆಯನ್ನು ಪಡೆಯುತ್ತಾನೆ. ಐಶ್ವರ್ಯಕಾಮಿಯು ಐಶ್ವರ್ಯವನ್ನು ಹೊಂದುತ್ತಾನೆ.

ಸರ್ವಥಾ ಮಾಸ್ತು ಸಂದೇಹೋ ಹರಿಃ ಸಾಕ್ಷೀ ಜಗತ್ಪತಿಃ ।
ಯಃ ಕರೋತ್ಯತ್ರ ಸಂದೇಹಂ ಸ ಯಾತಿ ನರಕಂ ಧ್ರುವಮ್ ॥ ೮ ॥

ಇತಿ ಶ್ರೀವ್ಯಾಸರಾಜಯತಿವಿರಚಿತ
ಯಂತ್ರೋದ್ಧಾರಕ ಹನೂಮತ್ ಸ್ತೋತ್ರಂ ಸಂಪೂರ್ಣಮ್.

ಜಗದೀಶ್ವರನಾದ ಶ್ರೀಹರಿಯೇ ಸಾಕ್ಷಿಯಾಗಿರೋಣದರಿಂದ ಈ ವಿಷಯ ದಲ್ಲಿ ಅನುಮಾನಪಡಲೇಬಾರದು. ಹೀಗಿದ್ದರೂ ಸಂದೇಹಪಟ್ಟವವನು ಖಂಡಿತ ವಾಗಿಯೂ ನರಕಕ್ಕೆ ಹೋಗುತ್ತಾನೆ.

ಹೀಗೆ ಶ್ರೀ ವ್ಯಾಸರಾಜರಿಂದ ರಚಿತವಾದ ಯಂತ್ರೋದ್ಧಾರಕ
ಪ್ರಾಣದೇವರ ಸ್ತೋತ್ರವು ಪೂರ್ಣವಾಯಿತು.

ಶ್ರೀ ನಾರಾಯಣಪಂಡಿತಾಚಾರ್ಯ ವಿರಚಿತ

ಶಿವಸ್ತುತಿಃ

ಸ್ಫುಟಂ ಸ್ಫಟಿಕ-ಸಪ್ರಭಂ ಸ್ಫುಟಿತ-ಹಾಟಕ-ಶ್ರೀ-ಜಟಂ
ಶಶಾಂಕ-ದಲ-ಶೇಖರಂ ಕಪಿಲ-ಫುಲ್ಲ-ನೇತ್ರ-ತ್ರಯಮ್ ।
ತರಕ್ಷು-ವರ-ಕೃತ್ತಿಮದ್ ಭುಜಗ-ಭೂಷಣಂ ಭೂತಿಮತ್
ಕದಾ ನು ಶಿತಿ-ಕಂಠ ತೇ ವಪುರವೇಕ್ಷತೇ ವೀಕ್ಷಣಮ್ ॥ ೧ ॥

ತ್ರಿ-ಲೋಚನ ವಿಲೋಚನೇ ಲಸತಿ ತೇ ಲಲಾಮಾಯಿತೇ
ಸ್ಮರೋ ನಿಯಮ-ಘಸ್ಮರೋ ನಿಯಮಿನಾಮಭೂದ್ ಭಸ್ಮಸಾತ್ ।
ಸ್ವ-ಭಕ್ತಿ-ಲತಯಾ ವಶೀಕೃತವತೀ ಸತೀಯಂ ಸತೀ
ಸ್ವ-ಭಕ್ತ-ವಶಗೋ ಭವಾನಪಿ ವಶೀ ಪ್ರಸೀದ ಪ್ರಭೋ ॥ ೨ ॥

ಮಹೇಶ ಮಹಿತೋಽಸಿ ತತ್ಪುರುಷ ಪೂರುಷಾಗ್ರ್ಯೋ ಭವಾನ್
ಅಘೋರ ರಿಪು-ಘೋರ ತೇಽನವಮ ವಾಮ-ದೇವಾಂಜಲಿಃ ।
ನಮಃ ಸಪದಿ-ಜಾತ ತೇ ತ್ವಮಿತಿ ಪಂಚ-ರೂಪೋಽಂಚಿತಃ
ಪ್ರಪಂಚಯ ಚ ಪಂಚ-ವೃನ್ಮಮ ಮನಸ್ತಮಸ್ತಾಡಯ ॥ ೩ ॥

ರಸಾ-ಘನರಸಾನಲಾನಿಲ-ವಿಯದ್-ವಿವಸ್ವದ್-ವಿಧು-
ಪ್ರಯಷ್ಟೃಷು ನಿವಿಷ್ಟಮಿತ್ಯಜ ಭಜಾಮಿ ಮೂರ್ತ್ಯಷ್ಟಕಮ್ ।
ಪ್ರಶಾಂತಮುತ ಭೀಷಣಂ ಭುವನ-ಮೋಹನಂ ಚೇತ್ಯಹೋ
ವಪೂಂಷಿ ಗುಣ-ಪುಂಷಿ ತೇಽಹಮಹಮಾತ್ಮನೋಽಹಂ-ಭಿದೇ ॥ ೪ ॥

ವಿಮುಕ್ತಿ-ಪರಮಾಧ್ವನಾಂ ತವ ಷಡಧ್ವನಾಮಾಸ್ಪದಂ
ಪದಂ ನಿಗಮ-ವೇದಿನೋ ಜಗತಿ ವಾಮದೇವಾದಯಃ ।
ಕಥಂಚಿದುಪ-ಶಿಕ್ಷಿತಾ ಭಗವತೈವ ಸಂವಿದ್ರತೇ
ವಯಂ ತು ವಿರಳಾಂತರಾಃ ಕಥಮುಮೇಶ ತನ್ಮನ್ಮಹೇ ॥ ೫ ॥

ಕಠೋರಿತ-ಕುಠಾರಯಾ ಲಲಿತ-ಶೂಲಯಾ ಬಾಹಯಾ
ರಣಡ್ಡಮರಯಾ ಸ್ಫುರದ್ಧರಿಣಯಾ ಸಖಟ್ವಾಂಗಯಾ ।
ಚಲಾಭಿರಚಲಾಭಿರಪ್ಯಗಣಿತಾಭಿರುನ್ನೃತ್ಯತಃ
ಚತುರ್ದಶ ಜಗಂತಿ ತೇ ಜಯ-ಜಯೇತ್ಯಯುರ್ವಿಸ್ಮಯಮ್ ॥ ೬ ॥

ಪುರು-ತ್ರಿಪುರ-ರಂಧನಂ ವಿವಿಧ-ದೈತ್ಯ-ವಿಧ್ವಂಸನಂ
ಪರಾಕ್ರಮ-ಪರಂಪರಾ ಅಪಿ ಪರಾ ನ ತೇ ವಿಸ್ಮಯಃ ।
ಅಮರ್ಷ-ಬಲ-ಹರ್ಷಿತ-ಕ್ಷುಭಿತ-ವೃತ್ತ-ನೇತ್ರೋಜ್ಜ್ವಲ
ಜ್ವಲಜ್ಜ್ವಲನ-ಹೇಲಯಾ ಶಲಭಿತಂ ಹಿ ಲೋಕ-ತ್ರಯಮ್ ॥ ೭ ॥

ಸಹಸ್ರ-ನಯನೋ ಗುಹಃ ಸಹ-ಸಹಸ್ರ-ರಶ್ಮಿರ್ವಿಧುಃ
ಬೃಹಸ್ಪತಿರುತಾಪ್ಪತಿಃ ಸ-ಸುರ-ಸಿದ್ಧ-ವಿದ್ಯಾಧರಾಃ ।
ಭವತ್-ಪದ-ಪರಾಯಣಾಃ ಶ್ರಿಯಮಿಮಾಮಗುಃ ಪ್ರಾರ್ಥಿನಾಂ
ಭವಾನ್ ಸುರ-ತರುರ್ದೃಶಂ ದಿಶ ಶಿವಾಂ ಶಿವಾ-ವಲ್ಲಭ ॥ ೮ ॥

ತವ ಪ್ರಿಯ-ತಮಾದತಿ-ಪ್ರಿಯ-ತಮಂ ಸದೈವಾಂತರಂ
ಪಯಸ್ಯುಪಹಿತಂ ಘೃತಂ ಸ್ವಯಮಿವ ಶ್ರಿಯೋ ವಲ್ಲಭಮ್ ।
ವಿಭಿದ್ಯ ಲಘು-ಬುದ್ಧಯಃ ಸ್ವ-ಪರ-ಪಕ್ಷ-ಲಕ್ಷಾಯಿತಂ
ಪಠಂತಿ ಹಿ ಲುಠಂತಿ ತೇ ಶಠ-ಹೃದಃ ಶುಚಾ ಶುಂಠಿತಾಃ ॥ ೯ ॥

ವಿಲಾಸ-ನಿಲಯಶ್ಚಿತಾ ತವ ಶಿರಸ್ತತಿರ್ಮಾಲಿಕಾ
ಕಪಾಲಮಪಿ ತೇ ಕರೇ ತ್ವಮಶಿವೋಽಸ್ಯನಂತರ್ಧಿಯಾಮ್ ।
ತಥಾಽಪಿ ಭವತಃ ಪದಂ ಶಿವ-ಶಿವೇತ್ಯದೋ ಜಲ್ಪತಾಂ
ಅಕಿಂಚನ ನ ಕಿಂಚನ ವೃಜಿನಮಸ್ತ್ಯಭಸ್ಮೀಭವತ್ ॥ ೧೦ ॥

ತ್ವಮೇವ ಕಿಲ ಕಾಮ-ಧುಕ್ ಸಕಲ-ಕಾಮಮಾ-ಪೂರಯನ್
ಅಪಿ ತ್ರಿ-ನಯನಃ ಸದಾ ವಹಸಿ ಚಾತ್ರಿ-ನೇತ್ರೋದ್ಭವಮ್ ।
ವಿಷಂ ವಿಷ-ಧರಾನ್ ದಧತ್ ಪಿಬಸಿ ತೇನ ಚಾಽನಂದವಾನ್
ವಿರುದ್ಧ-ಚರಿತೋಚಿತಾ ಜಗದಧೀಶ ತೇ ಭಿಕ್ಷುತಾ ॥ ೧೧ ॥

ನಮಃ ಶಿವ-ಶಿವಾಶಿವಾಶಿವ ಶಿವಾರ್ಧ ಕೃಂತಾಶಿವಂ
ನಮೋ ಹರ-ಹರಾಽಹರಾಹರ ಹರಾಂತರೀಂ ಮೇ ದೃಶಮ್ ।
ನಮೋ ಭವ ಭವಾಭವ ಪ್ರಭವ ಭೂತಯೇ ಸಂಪದಾಂ
ನಮೋ ಮೃಡ ನಮೋ-ನಮೋ ನಮ ಉಮೇಶ ತುಭ್ಯಂ ನಮಃ ॥ ೧೨ ॥

ಸತಾಂ ಶ್ರವಣಪದ್ಧತಿಂ ಸರತು ಸನ್ನತೋಕ್ತೇತ್ಯಸೌ
ಶಿವಸ್ಯ ಕರುಣಾಂಕುರಾತ್ ಪ್ರತಿ-ಕೃತಾತ್ ಸದಾ ಸೋದಿತಾ ।
ಇತಿ ಪ್ರಥಿತ-ಮಾನಸೋ ವ್ಯಥಿತ ನಾಮ ನಾರಾಯಣಃ
ಶಿವ-ಸ್ತುತಿಮಿಮಾಂ ಶಿವಾಂ ಲಿಕುಚ-ಸೂರಿ-ಸೂನುಃ ಸುಧೀಃ ॥ ೧೩ ॥

ಇತಿ ಶ್ರೀ ನಾರಾಯಣಪಂಡಿತಾಚಾರ್ಯ ವಿರಚಿತ ಶಿವಸ್ತುತಿಃ ಸಂಪೂರ್ಣಮ್

ಶ್ರೀ ಗುರುಭ್ಯೋ ನಮಃ

ಪಂಚಸ್ತುತಿಃ

ದ್ವಿತೀಯ ಭಾಗ

ಪಂಚಯತಿ ಸ್ತುತಿಃ

ಶ್ರೀ ಬ್ರಹ್ಮಣ್ಯತೀರ್ಥಚರಿತ್ರ ಸಂಗ್ರಹಃ

ಜಾತೋ ಭಾಸ್ಕರ ಏವ ಪೂಗವನಜಾದ್ ರಾಮಾನ್ನೃಸಿಂಹಾಖ್ಯಯಾ
ಸೋಽಪಿ ಶ್ರೀಪುರುಷೋತ್ತಮಾದ್ಯತಿರಭೂದ್ ಬ್ರಹ್ಮಣ್ಯತೀರ್ಥಾಭಿಧಃ ।
ಕರ್ಣಾಟಂ ಸ ಸುವೃಷ್ಟಿಭಿರ್ಮೃತಮಥೋಜ್ಜೀವ್ಯ ದ್ವಿಜಂ ಷಾಷ್ಠಿಕಂ
ಕೃತ್ವಾ ವ್ಯಾಸಮುನಿಂ ತತೋಽಸ್ಯ ಸುತಕಂ ಲೇಭೇ ವನೇ ವಿಟ್ಠಲಮ್ ॥

ಪೂಗವನ (ಅಡಿಕೆಯ ತೋಟ)ವೆಂಬ ವಂಶದಲ್ಲಿ ಜನಿಸಿದ ರಾಮಾಚಾರ್ಯರಿಂದ ಸೂರ್ಯದೇವನೇ ನರಸಿಂಹನೆಂಬ ನಾಮದಿಂದ ಜನಿಸಿ, ಆತನೇ, ಶ್ರೀಪುರುಷೋತ್ತಮತೀರ್ಥರಿಂದ ಸಂನ್ಯಾಸವನ್ನು ಸ್ವೀಕರಿಸಿ 'ಬ್ರಹ್ಮಣ್ಯತೀರ್ಥ' ಎಂಬ ಹೆಸರು ಪಡೆದನು. ಆ ಬ್ರಹ್ಮಣ್ಯತೀರ್ಥರು, ಅನಾವೃಷ್ಟಿಯ ನಿಮಿತ್ತ ಮೃತಪ್ರಾಯವಾಗಿದ್ದ ಕರ್ಣಾಟದೇಶವನ್ನು, ಚೆನ್ನಾಗಿ ಮಳೆಯಿಂದ ಉಜ್ಜೀವನಗೊಳಿಸಿದರು. ಹಾಗೂ ಮೃತನಾಗಿದ್ದ ಷಾಷ್ಠಿಕ ಕುಲೋತ್ಪನ್ನನಾದ ದ್ವಿಜನನ್ನು ಬದುಕಿಸಿ, ನಂತರ ಆತನ ಸುತನನ್ನು "ವ್ಯಾಸತೀರ್ಥ" ಮುನಿಯನ್ನಾಗಿಸಿದರು. ಹಾಗೂ ವನದಲ್ಲಿ ವಿಟ್ಠಲಮೂರ್ತಿವಿಗ್ರಹವನ್ನು ಪಡೆದರು.

★★★

ಶ್ರೀ ನರಸಿಂಹ ವಿರಚಿತ

ಶ್ರೀ ಬ್ರಹ್ಮಣ್ಯತೀರ್ಥ ಸ್ತುತಿಃ

ಶ್ರೀಪೂರ್ಣಬೋಧಸುಮತಾಬ್ಧಿಸುಧಾಕರಾಯ ।
ಶ್ರೀವ್ಯಾಸರಾಜಗುರವೇ ಯತಿಪುಂಗವಾಯ ॥
ಶ್ರೀ ವಿಟ್ಠಲಾಂಘ್ರಿಸರಸೀರುಹಬಂಭರಾಯ ।
ಬ್ರಹ್ಮಣ್ಯತೀರ್ಥಗುರವೇಽಸ್ತು ನಮಃ ಶುಭಾಯ ॥ ೧ ॥

ಶ್ರೀಪೂರ್ಣಬೋಧರ ಸುಮತವೆಂಬ ಸಮುದ್ರದ ಅಭಿವೃದ್ಧಿಗೆ ಚಂದ್ರನಂತಿರುವ, ಶ್ರೀವ್ಯಾಸರಾಜರಿಗೆ ಗುರುಗಳಾದ ಯತಿಪುಂಗವರೂ, ಶ್ರೀವಿಟ್ಠಲನ ಪಾದಕಮಲಗಳಲ್ಲಿ ಭ್ರಮರರೂ, ಮಂಗಳಕರರೂ ಆದ, ಬ್ರಹ್ಮಣ್ಯತೀರ್ಥ ಗುರುಗಳಿಗೆ ನಮಸ್ಕಾರವು.

ಶ್ರೀಮನ್ನೃಸಿಂಹಪದಪದ್ಮಗುಹಾಶ್ರಯಾಯ ।
ವ್ಯಾಖ್ಯಾಘನಸ್ವನವಿದಾರಿತದುರ್ಮದಾಯ ॥
ದುರ್ಮಾಯಿದಂತಿದಲನೈಕಮೃಗಾಧಿಪಾಯ ।
ಬ್ರಹ್ಮಣ್ಯತೀರ್ಥಗುರವೇಽಸ್ತು ನಮೋಽಮಲಾಯ ॥ ೨ ॥

ಶ್ರೀಮನ್ನೃಸಿಂಹದೇವರ ಪಾದಕಮಲವೆಂಬ ಗುಹೆಯನ್ನು ಆಶ್ರಯಿಸಿದ, ವ್ಯಾಖ್ಯಾನದ ಘನಗರ್ಜನೆಯಿಂದ ದುಷ್ಟರ ಮದವನ್ನು ಸೀಳಿದ, ದೋಷಪೂರಿತ ಮಾಯಾವಾದಿಗಳೆಂಬ ಆನೆಗಳನ್ನು ಭೇದಿಸುವುದರಲ್ಲಿ ಸಿಂಹನಂತಿರುವ, ದೋಷ ರಹಿತರಾದ (ಶುದ್ಧ ಸ್ವಭಾವದ) ಶ್ರೀಬ್ರಹ್ಮಣ್ಯತೀರ್ಥಗುರುಗಳಿಗೆ ನಮಸ್ಕಾರವು.

ಬ್ರಹ್ಮಣ್ಯತೀರ್ಥಃ ಕಮನೀಯಗಾತ್ರಃ ಶರತ್ಸುಧಾಂಶೂಪಮಚಾರುವಕ್ತ್ರಃ ।
ಜಗದ್ವಿಚಿತ್ರಾಮಲಸಚ್ಚರಿತ್ರೋ ಗುರುಃ ಸ ಮಾಂ ಪಾತು ರಮೇಶಭಕ್ತಃ ॥ ೩ ॥

ಮನೋಹರವಾದ ಆಕೃತಿಯುಳ್ಳ, ಶರಚ್ಚಂದ್ರನಂತಿರುವ ಸುಂದರ ವದನವುಳ್ಳ, ಜಗತ್ತಿನಲ್ಲಿ ಆಶ್ಚರ್ಯಕರವಾದ ಅಮಲಸಚ್ಚಾರಿತ್ರ್ಯವುಳ್ಳ, ರಮೇಶ ಭಕ್ತರಾದ ಆ ಬ್ರಹ್ಮಣ್ಯತೀರ್ಥಗುರುಗಳು, ನನ್ನನ್ನು ರಕ್ಷಿಸಲಿ.

ಬ್ರಹ್ಮಣ್ಯತೀರ್ಥೋ ಭಗವತ್ಪ್ರಸಾದಾದವಾಪ್ತಸಂಪತ್ಪ್ರಕರಃಸುಧೀಂದ್ರಃ ।
ವಿಧೂತಪಾಪೋ ವಿಜಿತಾರಿವರ್ಗಃ ಸಂಸೇವ್ಯಮಾನಾಖಿಲಕಾಮದಶ್ಚ ॥ ೪ ॥

ಬ್ರಹ್ಮಣ್ಯತೀರ್ಥರು ಭಗವದನುಗ್ರಹದಿಂದ ಪಡೆದ ಸಂಪತ್‌ಸಮೂಹವುಳ್ಳವರು, ಜ್ಞಾನಿಶ್ರೇಷ್ಠರು, ಪಾಪರಹಿತರು, ಅರಿಷಡ್ವರ್ಗಗಳನ್ನು ಜೈಸಿದವರು, ಸಂಸೇವಿಸುವವರಿಗೆ ಅಖಿಲಕಾಮಪ್ರದರೂ ಅಹುದು.

ಸಜ್ಞಾನಸದ್ಭಕ್ತಿವಿರಕ್ತಿಸಂಪತ್‌ಬುದ್ಧ್ಯಾಯುರಾರೋಗ್ಯಬಲಾನಿ ದತ್ವಾ ।
ಅಜ್ಞಾನರೋಗಾದ್ಯಖಿಲಾಶುಭಾನಿ ಹತ್ವಾವತಾನ್ನೋಽಭವತು ಪ್ರಸನ್ನಃ ॥ ೫ ॥

ಸಮೀಚೀನ ಜ್ಞಾನ, ಭಕ್ತಿ, ವಿರಕ್ತಿ, ಸಂಪತ್ತು, ಬುದ್ಧಿ, ಆಯುರಾರೋಗ್ಯ ಬಲಗಳನ್ನು ಕೊಟ್ಟು, ಅಜ್ಞಾನರೋಗಾದ್ಯಖಿಲ ಅಶುಭಗಳನ್ನು ನಾಶಮಾಡಿ, ಗುರುವರ್ಯರು ನಮ್ಮನ್ನು ರಕ್ಷಿಸಲು-ನಮಗೆ ಪ್ರಸನ್ನರಾಗಲಿ.

ಕಣ್ವಾಪಗಾತೀರವರಾಧಿವಾಸಃ ಸಂಸೇವಿತಾಘೋರಗಪಕ್ಷ್ಯಧೀಶಃ ।
ಸಲ್ಲೋಕಚಿತ್ರಾಕ್ಷಿಮಹೋತ್ಸವೋಽಯಂ ವಾಕ್ಪಾಟವಂ
ಸಂದಿಶತಾದ್ಗುರುರ್ಮೇ ॥ ೬ ॥

ಕಣ್ವನದಿಯ ಪವಿತ್ರತೀರದಲ್ಲಿ ವಾಸಮಾಡಿರುವ, ಸಂಸೇವಿತರ ಪಾಪಗಳೆಂಬ ಉರಗಕ್ಕೆ ಗರುಡಪಕ್ಷಿಯಂತಿರುವ, ಸಜ್ಜನವೃಂದಕ್ಕೆ ಆಶ್ಚರ್ಯಕರವಾದ ರೀತಿಯಲ್ಲಿ ಕಣ್ಣಿಗೆ ಹಬ್ಬ(ಉತ್ಸವ)ವಾಗಿರುವ, ಗುರುಗಳು ನನಗೆ ವಾಕ್ಪಟುತ್ವವನ್ನು ಕೊಡಲಿ.

ಯದ್ವೃಂದಾವನಸೇವಯಾ ಭುವಿ ಜನಃ ಪ್ರಾಪ್ನೋತಿ ಸೌಖ್ಯಂ ಮಹ-
ದ್ಯತ್ಪಾದಾಂಬುನಿಷೇವಣಂ ಸಕಲಸತ್ತೀರ್ಥಾಲಿಪುಣ್ಯಾವಹಮ್ ।
ಯತ್ಸಂದರ್ಶನಮಾತ್ರತೋ ನಿಜಮಹಾಪಾಪಾಲಿನಾಶೋ ಭವೇ-
ತ್ತಂ ವಂದೇ ತಪನೀಯವರ್ಣವಪುಷಂ ಬ್ರಹ್ಮಣ್ಯತೀರ್ಥಂ ಗುರುಮ್ ॥ ೭ ॥

ಯಾರ ವೃಂದಾವನಸೇವೆಯಿಂದ ಭೂಮಿಯಲ್ಲಿ ಜನರು ಮಹತ್ಸೌಖ್ಯವನ್ನು ಹೊಂದುವರೋ, ಯಾರ ಪಾದೋದಕಪ್ರಾಶನವು ಸಕಲತೀರ್ಥಸಮೂಹಗಳ ಪುಣ್ಯವನ್ನು ತಂದುಕೊಡುವುದೋ, ಯಾರ ಸಂದರ್ಶನಮಾತ್ರದಿಂದ ಭಕ್ತರ ಮಹಾಪಾಪಾವಳಿಯ ನಾಶವಾಗುವುದೋ, ಅಂತಹ ಬಂಗಾರದಂತೆ ಹೊಳೆಯುವ ಶರೀರವುಳ್ಳ ಬ್ರಹ್ಮಣ್ಯತೀರ್ಥಗುರುಗಳನ್ನು (ನಾನು) ವಂದಿಸುತ್ತೇನೆ.

ಯತ್ಪುಣ್ಯಕೀರ್ತನಸುಧಾರಸತೃಪ್ತಚಿತ್ತಾ
ಯತ್ಪಾದಪಂಕಜನಿಷೇವಣಲಬ್ಧಪುಣ್ಯಾಃ ।
ಯತ್ಪ್ರೇಮಪೂರ್ಣವಿಲಸತ್ಸುಕಟಾಕ್ಷಪಾತ್ರಾ-
ಸ್ತದ್ದರ್ಶನಂ ಕಲಿಮಲಾಚಲವಜ್ರಭೂತಮ್ ॥ ೮ ॥

ಯಾರ (ಪುಣ್ಯ) ಮಹಿಮಾಕೀರ್ತನವೆಂಬ ಸುಧಾರಸದಿಂದ ತೃಪ್ತವಾದ ಮನಸ್ಸುಳ್ಳವರು ಯಾರೋ, ಯಾರ ಪಾದಪಂಕಜದ ವಿಶೇಷಸೇವೆಯಿಂದ ಪುಣ್ಯ ಗಳಿಕೆಯುಳ್ಳವರು ಯಾರೋ, ಯಾರ ಪ್ರೇಮಪೂರ್ಣವಾದ ಪ್ರಕಾಶಮಾನವಾದ ಕಟಾಕ್ಷವೀಕ್ಷಣಕ್ಕೆ ಪಾತ್ರರು ಯಾರೋ, ಅಂತಹವರ (ಬ್ರಹ್ಮಣ್ಯ ತೀರ್ಥರ ಭಕ್ತರ) ದರ್ಶನವೂ, ಕಲಿಕಲ್ಮಷವೆಂಬ ಪರ್ವತಭೇದನವಿಷಯದಲ್ಲಿ ವಜ್ರಾಯುಧ ಸದೃಶವಾದುದು.

ಆಸೇತುಹಿಮಶ್ಶೈಲಾಂತಂ ತೀರ್ಥಕ್ಷೇತ್ರಾಣಿ ಯೇನ ವೈ ।
ಚರಿತಾನಿ ಮನಶ್ಶುದ್ಧಿಂ ಸ ಮೇ ಯಚ್ಛತು ಸೂರಿರಾಟ್ ॥ ೯ ॥

ರಾಮೇಶ್ವರದಿಂದ ಪ್ರಾರಂಭಿಸಿ ಹಿಮಾಚಲದವರೆಗೂ ಇರುವ ತೀರ್ಥಕ್ಷೇತ್ರ ಗಳು ಯಾರಿಂದ ಸಂದರ್ಶಿಸಲ್ಪಟ್ಟಿರುವುವೋ, ಅಂತಹ ಜ್ಞಾನಿವರರಾದ ಬ್ರಹ್ಮಣ್ಯ ತೀರ್ಥರು ನನ್ನನ್ನು ಶುದ್ಧಮನಸ್ಕನನ್ನಾಗಿಸಲಿ.

ಶ್ರೀಪಾದರಾಜೋ ಜನನೀಸ್ವಸ್ರೀಯೋ ಯಸ್ಯ ಯೋಗಿರಾಟ್ ।
ವಿದ್ಯಾಗುರುರ್ವ್ಯಾಸಮುನೇಸ್ತಂ ವಂದೇಽಹಮಹರ್ನಿಶಮ್ ॥ ೧೦ ॥

ವ್ಯಾಸಮುನಿಗಳಿಗೆ ವಿದ್ಯಾಗುರುಗಳಾದ, ಯೋಗಿಶ್ರೇಷ್ಠರಾದ ಶ್ರೀಪಾದರಾಜ ಯತಿಗಳು, ಯಾರ ಚಿಕ್ಕಮ್ಮನ ಮಗನೋ, ಅಂತಹ ಬ್ರಹ್ಮಣ್ಯತೀರ್ಥರನ್ನು ನಾನು ಹಗಲು ರಾತ್ರಿಗಳಲ್ಲೂ ವಂದಿಸುವೆ.

ಬ್ರಹ್ಮಣ್ಯಾರ್ಯಸ್ಯ ಶಿಷ್ಯೋಽನ್ಯೋ ನೈವಾತೋ ವ್ಯಾಸಯೋಗಿನೇ ।
ವಿಟ್ಠಲಾರ್ಚಾಂ ನೃಸಿಂಹಾರ್ಚಾಂ ಪ್ರಸನ್ನಃ ಪ್ರದದೌ ಗುರುಃ ॥ ೧೧ ॥

ಬ್ರಹ್ಮಣ್ಯತೀರ್ಥರಿಗೆ (ವ್ಯಾಸಯೋಗಿಗಳಂತಹ) ಶಿಷ್ಯರು ಮತ್ತೊಬ್ಬರಿ ರಲಿಲ್ಲ; ಆದ್ದರಿಂದ ಗುರುಗಳಾದ ಬ್ರಹ್ಮಣ್ಯತೀರ್ಥರು ವ್ಯಾಸಯೋಗಿಗಳಿಗೆ ಪ್ರಸನ್ನರಾಗಿ ವಿಟ್ಠಲನ ಮೂರ್ತಿಯನ್ನೂ, ನೃಸಿಂಹದೇವರ ಮೂರ್ತಿಯನ್ನೂ ಕೊಟ್ಟರು.

ಮಾಧವಸ್ಯಾ ಸಿತೇ ಪಕ್ಷೇ ಸಹಸ್ರಾಂಶುತಿಥೌ ಗುರುಃ ।
ಬ್ರಹ್ಮಣ್ಯತೀರ್ಥಃ ಸ್ವರ್ಲೋಕಂ ಗತ್ವಾ ಸಪ್ತಾಶ್ವಮಾವಿಶತ್ ॥ ೧೨ ॥

ವೈಶಾಖಮಾಸದ, ಕೃಷ್ಣಪಕ್ಷದ, ಭಾನುವಾರ ಶುಭತಿಥಿಯಲ್ಲಿ, ಬ್ರಹ್ಮಣ್ಯ ತೀರ್ಥ ಗುರುಗಳು, ಸ್ವರ್ಗಲೋಕವನ್ನು ಹೊಂದಿ, ತಮ್ಮ ಮೂಲ ರೂಪವಾದ (ಸಪ್ತಾಶ್ವ) ಸೂರ್ಯನನ್ನು ಪ್ರವೇಶಿಸಿದರು.

***ಸೂರ್ಯಾಂಶತ್ವಾದಯಂ* ಸಾಕ್ಷಾದ್ಗ್ರಾಮೇಽಬ್ಬೂರುವರಾಭಿಧೇ ।**
ವೃಂದಾವನಂ ಪ್ರವಿಶ್ಯೈವ ಸ್ಥಿತೋಽದ್ಯಾಪಿ ವಿರಾಜತೇ ॥ ೧೩ ॥

ಹೀಗೆ ಸೂರ್ಯಾಂಶರಾದ ಕಾರಣ, ಬ್ರಹ್ಮಣ್ಯತೀರ್ಥರು ಅಬ್ಬೂರು ಎಂಬ ಶ್ರೇಷ್ಠನಾಮವುಳ್ಳ ಗ್ರಾಮದಲ್ಲಿ, ವೃಂದಾವನವನ್ನು ಪ್ರವೇಶ ಮಾಡಿ ಅದ್ಯಾಪಿ ವಿರಾಜಮಾನರಾಗಿದ್ದಾರೆ.

ಶ್ರೀವಿಟ್ಠಲದಯಾಪಾತ್ರಂ ಜ್ಞಾನವಿಜ್ಞಾನಶಾಲಿನಮ್ ।
ಶ್ರೀಮದ್ಬ್ರಹ್ಮಣ್ಯತೀರ್ಥಾರ್ಯಂ ವಂದೇ ವಾಂಛಿತದಾಯಕಮ್ ॥ ೧೪ ॥

ಶ್ರೀವಿಟ್ಠಲನ ದಯಾಪಾತ್ರರಾದ, ಜ್ಞಾನವಿಜ್ಞಾನಶಾಲಿಗಳಾದ, ಅಭೀಷ್ಟಪ್ರದರಾದ, ಶ್ರೀಬ್ರಹ್ಮಣ್ಯತೀರ್ಥಾರ್ಯರನ್ನು ನಾನು ಅಭಿವಂದಿಸುತ್ತೇನೆ.

ಶ್ರೀಮತೇ ಯೋಗಿವರ್ಯಾಯ ಸಜ್ಜನಾಂಭೋನಿಧೀಂದವೇ ।
ಬ್ರಹ್ಮಣ್ಯತೀರ್ಥಗುರವೇ ಕರುಣಾಸಿಂಧವೇ ನಮಃ ॥ ೧೫ ॥

ಸಂಪದ್ಯುಕ್ತರಾದ, ಯೋಗಿವರ್ಯರಾದ, ಸಜ್ಜನರೆಂಬ ಸಮುದ್ರಕ್ಕೆ ಚಂದ್ರನಂತಿರುವ, ಕರುಣಾಸಿಂಧುಗಳಾದ, ಬ್ರಹ್ಮಣ್ಯತೀರ್ಥಗುರುಗಳಿಗೆ ನಮಸ್ಕಾರ.

ಬ್ರಹ್ಮಣ್ಯಾರ್ಯಪದಾಂಭೋಜಪಾಂಸವಃ ಪಾವಯಂತು ನಃ ।
ಕಾಮಿತಾಶೇಷಕಲ್ಯಾಣಕಲನೇ ಕಾಮಧೇನವಃ ॥ ೧೬ ॥

ಕಾಮಿತವಾದ ಸಮಸ್ತಮಂಗಳಗಳನ್ನು ಹೊಂದಿಸಿಕೊಡುವುದರಲ್ಲಿ ಕಾಮಧೇನುವಿಗೆ ಸದೃಶವಾಗಿರತಕ್ಕ ಬ್ರಹ್ಮಣ್ಯಾರ್ಯರ ಪಾದಕಮಲರೇಣುಗಳು ನಮ್ಮನ್ನು ದೋಷರಹಿತರನ್ನಾಗಿಸಲಿ.

ಧೃತಕಾಷಾಯದಂಡೋಽಯಂ ಪ್ರತಿವಾದಿಗಜಾಂಕುಶಃ ।
ಯತಿರಾಜಾಗ್ರಣೀಃ ಶ್ರೀಮಾನ್ ವಿತನೋತು ಮಮ ಶ್ರಿಯಮ್ ॥ ೧೭ ॥

ಕಾಷಾಯವಸ್ತ್ರ ಮತ್ತು ದಂಡಗಳನ್ನು ಧರಿಸಿದ, ಪ್ರತಿವಾದಿಗಳೆಂಬ ಗಜಕ್ಕೆ ಅಂಕುಶಪ್ರಾಯರಾದ, ಯತಿರಾಜಾಗ್ರಣಿಗಳಾದ, ಜ್ಞಾನಭಕ್ತಿ ವೈರಾಗ್ಯಾದಿ ಐಶ್ವರ್ಯಸಮೇತರಾದ, ಬ್ರಹ್ಮಣ್ಯತೀರ್ಥರು ನನಗೆ (ಜ್ಞಾನಾದಿ) ಸಂಪತ್ತನ್ನು ಕರುಣಿಸಲಿ.

ಪಾಠಾಂತರ:

* **ಸೂರ್ಯಾಂಶೋಽಯಂ ಗುರುವರೋ ಗ್ರಾಮೇಽಬ್ಬೂರುವರಾಭಿಧೇ ॥** — ಸೂರ್ಯಾಂಶರಾದ ಗುರುಶ್ರೇಷ್ಠರಾದ ಈ ಬ್ರಹ್ಮಣ್ಯತೀರ್ಥರು ಶ್ರೇಷ್ಠಗ್ರಾಮವಾದ ಅಬ್ಬೂರಿನಲ್ಲಿ.

ಬ್ರಹ್ಮಣ್ಯತೀರ್ಥಗುರುವರ್ಯದಯಾಪಯೋಧೇ
ಭಕ್ತಿಂ ಪ್ರದೇಹಿ ಸುದೃಢಾಂ ಹರಿಪಾದಪದ್ಮೇ ।
ಜ್ಞಾನಂ ಶುಭಂ ಚ ವಿಷಯೇಷು ವಿರಕ್ತಿಮಗ್ರ್ಯಾಂ
ಸ್ವಾಮಿನ್ ದಯಾಂ ಕುರು ದಯಾಂ ಕುರು ಮಯ್ಯನಾಥೇ ॥ ೧೮ ॥

ದಯಾಸಮುದ್ರರಾದ ಬ್ರಹ್ಮಣ್ಯತೀರ್ಥಗುರುವರ್ಯರೇ! ನನಗೆ ಹರಿಪಾದ ಪದ್ಮಗಳಲ್ಲಿ ಸುದೃಢವಾದ ಭಕ್ತಿಯನ್ನೂ ಹಾಗೂ ಶುಭವಾದ ಜ್ಞಾನವನ್ನೂ, ವಿಷಯಗಳಲ್ಲಿ ಶ್ರೇಷ್ಠವಾದ ವಿರಕ್ತಿಯನ್ನೂ ಕೊಡಿ. ಹೇ ಸ್ವಾಮಿಗಳೇ! ಅನಾಥನಾದ ನನ್ನಲ್ಲಿ ಕರುಣೆ ಮಾಡಿರಿ; ಕರುಣೆ ಮಾಡಿರಿ.

ಇತಿ ಬ್ರಹ್ಮಣ್ಯತೀರ್ಥಾರ್ಯಗುರುಸ್ತೋತ್ರಂ ಸುಭಕ್ತಿತಃ ।
ನರಸಿಂಹಾಭಿಧಾನೇನ ಕೃತಂ ವಿಟ್ಠಲತುಷ್ಟಯೇ ॥ ೧೯ ॥

ಇತಿ ಶ್ರೀಮದ್ವ್ಯಾಸರಾಜಗುರು ಶ್ರೀಬ್ರಹ್ಮಣ್ಯತೀರ್ಥ
ಗುರುರಾಜಸ್ತುತಿಸ್ಸಮಾಪ್ತಾ ॥

ಈ ಪ್ರಕಾರ ಭಕ್ತಿಪುರಸ್ಸರವಾಗಿ, ಬ್ರಹ್ಮಣ್ಯತೀರ್ಥಾರ್ಯಗುರು ಸ್ತೋತ್ರವು "ನರಸಿಂಹ" ಎಂಬ ಹೆಸರುಳ್ಳ ವ್ಯಕ್ತಿಯಿಂದ, ವಿಟ್ಠಲನ ಪ್ರೀತಿಗೋಸ್ಕರ ರಚಿತವಾಯ್ತು.

ಹೀಗೆ, ಶ್ರೀ ವ್ಯಾಸರಾಜರಿಗೆ ಗುರುಗಳಾದ ಶ್ರೀ ಬ್ರಹ್ಮಣ್ಯತೀರ್ಥಗುರುರಾಜರ
ಸ್ತುತಿಯು ಮುಗಿಯಿತು.

ಶ್ರೀ ಶ್ರೀನಿವಾಸತೀರ್ಥ ವಿರಚಿತ

ಶ್ರೀ ಬ್ರಹ್ಮಣ್ಯತೀರ್ಥ ವಿಜಯಃ

ಸಮಚರಣಸರೋಜಂ ಸಾಂದ್ರನೀಲಾಂಬುದಾಭಂ
ಜಘನನಿಹಿತಪಾಣಿಂ ಮಂಡನಂ ಮಂಡನಾನಾಮ್ ।
ತರುಣತುಲಸಿಮಾಲಾಕಂಧರಂ ಕಂಜನೇತ್ರಂ
ಸದಯಧವಲಹಾಸಂ ವಿಟ್ಠಲಂ ಚಿಂತಯಾಮಿ ॥

ಸಮವಾದ (ಸೌಂದರ್ಯದಲ್ಲಿ ಪರಸ್ಪರ ಹೋಲುವ) ಪಾದಕಮಲಗಳುಳ್ಳ, ನಿಬಿಡವಾದ ನೀಲಮೇಘದಂತೆ ಕಾಂತಿಯುಳ್ಳ, ಕಟಿಪ್ರದೇಶದ ಮೇಲೆ ಕೈ ಇಟ್ಟಿರುವ, ಅಲಂಕಾರಗಳಿಗೆ ಅಲಂಕಾರಪ್ರಿಯನಾದ, ಕಂಠದಲ್ಲಿ ಎಳೆಯ ತುಳಸೀಮಾಲೆಯನ್ನು ಧರಿಸಿರುವ, ಕಮಲನೇತ್ರನೂ, ದಯಾವಿಶಿಷ್ಟವಾದ ಶುಭ್ರಮಂದಹಾಸವುಳ್ಳವನೂ ಆದ, ಶ್ರೀ ವಿಟ್ಠಲನನ್ನು ಚಿಂತಿಸುತ್ತೇನೆ.

★ ★ ★

ಶ್ರೀಲೋಲಂ ವಿಟ್ಠಲಂ ನತ್ವಾ ಶ್ರೀಮಧ್ವಮುನಿಪಾನಪಿ
ಬ್ರಹ್ಮಣ್ಯಗುರುರಾಜಂ ಚ ವ್ಯಾಸರಾಜಂ ಚ ನೌಮ್ಯಹಮ್ ॥ ೧ ॥

ಲಕ್ಷ್ಮಿಯೊಡನೆ ವಿನೋದವುಳ್ಳ ವಿಟ್ಠಲನನ್ನೂ ಹಾಗೂ ಶ್ರೀ ಮಧ್ವಮುನಿವರ್ಯರನ್ನೂ, ನಮಸ್ಕರಿಸಿ, ನಂತರ ಬ್ರಹ್ಮಣ್ಯತೀರ್ಥಗುರುರಾಜರನ್ನೂ ಹಾಗೂ ವ್ಯಾಸರಾಜರನ್ನೂ ಸ್ತೋತ್ರಮಾಡುತ್ತೇನೆ—ನಮಸ್ಕರಿಸುತ್ತೇನೆ.

ಬ್ರಹ್ಮಣ್ಯಗುರುರಾಜಸ್ಯ ವಿಜಯಂ ತತ್ಕೃಪಾಬಲಾತ್ ।
ರಚಯಾಮಿ ಮನಶ್ಶುದ್ಧ್ಯೈ ಸತಾಂ ಪ್ರೀತ್ಯೈ ಗುರೋರ್ಮುದೇ ॥ ೨ ॥

ಬ್ರಹ್ಮಣ್ಯತೀರ್ಥಗುರುರಾಜರ ವಿಜಯವನ್ನು ಅವರ ಕೃಪಾಬಲದಿಂದ, ನನ್ನ ಮನಶ್ಶುದ್ಧಿಗೋಸ್ಕರವೂ, ಸಜ್ಜನರ ಪ್ರೀತಿಗೋಸ್ಕರವೂ, ಗುರುಗಳ ಸಂತೋಷಕ್ಕೋಸ್ಕರವೂ, ರಚಿಸುತ್ತೇನೆ.

ಅಲ್ಪಜ್ಞೇನಾಪಿ ಕುತುಕಾದ್ವರ್ಣಿತಂ ಚರಿತಂ ಗುರೋಃ ।
ತನ್ಮಹಿಮ್ನೈವ ಕೃತಿನಾಂ ಕಂಠಮಾಲ್ಯಂ ಭವೇದ್ಧ್ರುವಮ್ ॥ ೩ ॥

(ನಾನು) ಅಲ್ಪಜ್ಞನಾದರೂ, ಕುತೂಹಲದಿಂದ ವರ್ಣಿತವಾದ ಬ್ರಹ್ಮಣ್ಯತೀರ್ಥಗುರುಚರಿತೆಯು, ಅವರ ಮಹಿಮೆಯಿಂದಲೇ, ವಿದ್ವಾಂಸರ ಕಂಠಮಾಲೆಯಾಗುವುದು; ಇದು ನಿಶ್ಚಯ.

ಭೂಮೌ ಭಾರತಖಂಡೇಽತ್ರ ಚೋಲಭೂಜನನೀ ಧುನೀ ।
ಮರುದ್ವೃಧಾಭಿಧಾ ಭಾತಿ ಸ್ವರ್ಧುನೀವಾಘನಾಶಿನೀ ॥ ೪ ॥

ಈ ಭೂಮಿಯಲ್ಲಿ, ಭರತಖಂಡದಲ್ಲಿ ಚೋಲಭೂಮಾತೆಯಾದ, (ಒಳ್ಳೆಯ ತಂಗಾಳಿಯಿಂದಲೇ ಅಭಿವೃದ್ಧಿ ಹೊಂದಿ, ಜನರಿಗಾನಂದ ಕೊಡುವ ಕಾರಣದಿಂದ) ಮರುದ್ವೃಧಾ ಎಂಬ ಹೆಸರಿನ, ಕಾವೇರೀನದಿಯು, ಗಂಗೆಯಂತೆ ಪಾಪವನ್ನು ಪರಿಹರಿಸುತ್ತಾ ಶೋಭಿಸುತ್ತಿದೆ.

ತತ್ತೀರೇ ನೃಹರೇಃಕ್ಷೇತ್ರೇ ನೃಸಿಂಹಸ್ಸದ್ರುಮಂ ದ್ವಿಜಃ ।
ಪಾದಪ್ರಪನ್ನದೇಯೇಷ್ಟಫಲಭಾರನತಂ ಶ್ರಿತಃ ॥ ೫ ॥

ಆ ಕಾವೇರಿಯ ತೀರದಲ್ಲಿ ನೃಹರಿಕ್ಷೇತ್ರದಲ್ಲಿ, ತನ್ನ ಪಾದಾಶ್ರಿತರಿಗೆ ಅಭೀಷ್ಟ ಪ್ರದಾನರೂಪಫಲಭಾರದಿಂದ ಬಗ್ಗಿರುವ "ಶ್ರೀನೃಸಿಂಹದೇವ"ರೆಂಬ ಕಲ್ಪವೃಕ್ಷ ವನ್ನು ಒಬ್ಬ ಬ್ರಾಹ್ಮಣನು ಆಶ್ರಯಿಸಿದ್ದನು.

ಸ ತು ರಾಮಾಚಾರ್ಯನಾಮಾ ಪೂಗಾರಾಮಕುಲೋದ್ಭವಃ ।
ಶ್ರೀನೃಸಿಂಹಪ್ರಸಾದೇನ ಸಭಾರ್ಯೋಽಲಭತಾತ್ಮಜಮ್ ॥ ೬ ॥

ಆ ಬ್ರಾಹ್ಮಣನ ಹೆಸರು ರಾಮಾಚಾರ್ಯನೆಂಬುದಾಗಿ— ಆತನು ಪೂಗಾರಾಮ (ಅಡಿಕೆಯ ತೋಟ) ಎಂಬ ಕುಲದಲ್ಲಿ ಜನಿಸಿದವನು. ತನ್ನ ಭಾರ್ಯೆಯಿಂದ ಸಹಿತನಾದ ಆ ದ್ವಿಜನು ಶ್ರೀನೃಸಿಂಹಪ್ರಸಾದದಿಂದ ಒಬ್ಬ ಪುತ್ರನನ್ನು ಪಡೆದನು.

ಭಾಸ್ವಂತಮಿವ ಭಾಂತಂ ತಂ ಭಾಸ್ಕರಾಂಶಂ ಶುಭಾಕೃತಿಮ್ ।
ನೃಸಿಂಹವರಲಬ್ಧಂ ಶ್ರೀನೃಸಿಂಹಾಖ್ಯಂ ಪಿತಾಽಕರೋತ್ ॥ ೭ ॥

ಸೂರ್ಯನಂತೆ ಪ್ರಕಾಶಮಾನನಾದ, ಸೂರ್ಯಾಂಶಸಂಭೂತನೂ, ಮಂಗಳ ಸ್ವರೂಪನೂ; ನೃಸಿಂಹದೇವರ ವರಪ್ರಸಾದದಿಂದ ಪ್ರಾಪ್ತನೂ ಆದ, ತನ್ನ ಮಗನಿಗೆ ಶ್ರೀನರಸಿಂಹನೆಂಬುದಾಗಿಯೇ ಜನಕನು ಹೆಸರಿಟ್ಟನು.

ಗರ್ಭಾಷ್ಟಮೇಽಬ್ದೇ ಪೋತಂ ತಮುಪನೀಯ ದ್ವಿಜೋತ್ತಮಃ ।
ಪುರುಷೋತ್ತಮತೀರ್ಥಾರ್ಯನಿಕಟಂ ಪ್ರಾಹಿಣೋದ್ವಟುಮ್ ॥ ೮ ॥

ಗರ್ಭವಾಸದ ಒಂದು ವರ್ಷವೂ ಸೇರಿಕೊಂಡು ಎಂಟನೆಯ ವಯಸ್ಸಿನಲ್ಲೇ ಹುಡುಗನಿಗೆ ಆ ದ್ವಿಜೋತ್ತಮ ರಾಮಾಚಾರ್ಯರು, ಉಪನಯನಸಂಸ್ಕಾರವನ್ನು ನೆರವೇರಿಸಿ, ವಟುವಾದ ಆ ನರಸಿಂಹನನ್ನು ಶ್ರೀಪುರುಷೋತ್ತಮತೀರ್ಥರೆಂಬ ಪೂಜ್ಯರಾದ ಯತಿಗಳ ಬಳಿಗೆ ಕಳುಹಿಸಿದರು.

ಸ್ವತಃಸಂಪ್ರಾಪ್ತವಿದ್ಯಾಯ ಗುರೂಣಾಮುಪದೇಶನಮ್ ।
ಶಿಷ್ಟಾಚಾರಾವನಾಯಾಭೂದನ್ಯತೋ ನ ರವೇರ್ಹಿ ಭಾಃ ॥ ೯ ॥

ಸ್ವಾಭಾವಿಕವಾಗಿಯೇ ಎಲ್ಲ ವಿದ್ಯೆಗಳನ್ನೂ ಬಲ್ಲ, ಆ (ನರಸಿಂಹನೆಂಬ) ವಟುವಿಗೆ ಗುರುಗಳ ಉಪದೇಶವು ಕೇವಲ ಶಿಷ್ಟಾಚಾರಪಾಲನೆಗೋಸ್ಕರವೇ ಆಯಿತು. ಸೂರ್ಯನಿಗೆ ಬೇರೊಂದರ ಸಹಾಯದಿಂದ ಪ್ರಕಾಶವಿಲ್ಲವಷ್ಟೆ!

ವಿರಕ್ತೌ ಸನಕೋ ಬಾಲಃ ಪ್ರಜ್ಞಾಯಾಂ ಸ ಬೃಹಸ್ಪತಿಃ ।
ಹರಿಭಕ್ತೌ ಶುಕಾಚಾರ್ಯ ಇತಿ ಮೇನೇ ಗುರುರ್ವಟುಮ್ ॥ ೧೦ ॥

ಆ ಬಾಲವಟುವು ವಿರಕ್ತಿಯಲ್ಲಿ ಸನಕನೂ, ಪ್ರಜ್ಞೆಯಲ್ಲಿ ಬೃಹಸ್ಪತಿಯೂ, ಹರಿಭಕ್ತಿಯಲ್ಲಿ ಶುಕಾಚಾರ್ಯನೆಂಬುದಾಗಿಯೂ ಗುರುಗಳು ತಿಳಿದರು.

ಸ್ವಪ್ನೇ ತು ತವ ಶಿಷ್ಯೋಽಯಂ ಭವಿತೇತಿ ದ್ವಿಜಾತ್ಮನಾ ।
ಬೋಧಿತೋ ಗುರುವರ್ಯೋಽಮುಂ ಪಿತ್ರಾಜ್ಞಪ್ತಂ ವ್ಯಧಾದ್ಯತಿಮ್ ॥ ೧೧ ॥

ಈ ಬಾಲಕನು ನಿನ್ನ ಶಿಷ್ಯನಾಗುವನೆಂಬುದಾಗಿ ಸ್ವಪ್ನದಲ್ಲಿ ಬ್ರಾಹ್ಮಣರೂಪಿಯಾದ ಶ್ರೀಹರಿಯಿಂದ ಬೋಧಿತರಾಗಿ, (ಪುರುಷೋತ್ತಮ) ಗುರುವರ್ಯರು ತಂದೆಯಿಂದ ಅನುಮತಿಯನ್ನು ಸ್ವೀಕರಿಸಿದ ಆ ಬಾಲಕನನ್ನು ಯತಿಯನ್ನಾಗಿ ಮಾಡಿದರು.

ಆಬಾಲ್ಯಾದ್ಬ್ರಾಹ್ಮಣೌಘೇಽಸೌ ದಯಾಲುರಿತಿ ಮೌನಿನಾ ।
ಬ್ರಹ್ಮಣ್ಯತೀರ್ಥನಾಮ್ನಾ ಹಿ ಸಮಾಖ್ಯಾತೋ ರವಿದ್ಯುತಿಃ ॥ ೧೨ ॥

ಇವನು ಬಾಲ್ಯದಿಂದಲೂ ಬ್ರಾಹ್ಮಣಸಮುದಾಯದಲ್ಲಿ ದಯಾಲುವಾದ ಕಾರಣ, ಮೌನೀಶರಾದ ಪುರುಷೋತ್ತಮಯೋಗಿಗಳಿಂದ, ರವಿಯಂತೆ ದ್ಯುತಿಯುಳ್ಳ ಆ ಬಾಲಕನು "ಬ್ರಹ್ಮಣ್ಯತೀರ್ಥ"— ಎಂಬ ನಾಮದಿಂದಲೇ ಕರೆಯಲ್ಪಟ್ಟನು.

ಶ್ರೀಮಧ್ವಯತಿಹಸ್ತಾಬ್ಜಸೇವಿತಾಂ ತತ್ಕುಲಕ್ರಮಾತ್ ।
ತಚ್ಛಿಷ್ಯಪೂಜಿತಾಂ ಶ್ರೀಮಜ್ಜಯಧ್ವಜಗುರೂತ್ತಮೈಃ ॥ ೧೩ ॥

ಸ್ವಸ್ಮೈ ಪ್ರದತ್ತಾಂ ಗುರುರಾಣ್ಣೃಸಿಂಹಪ್ರತಿಮಾಂ ತಥಾ
ಸಂಸ್ಥಾನಸ್ಯಾಧಿಪತ್ಯಂ ಚ ಬ್ರಹ್ಮಣ್ಯಯತಯೇ ದದೌ ॥ ೧೪ ॥

ಶ್ರೀಮಧ್ವಯತಿಗಳ ಕರಾಬ್ಜದಿಂದ ಸೇವಿತವಾದ್ದು, ಅವರ ಯತಿಪರಂಪರೆಯಲ್ಲೇ ಬಂದಿರುವ ಶಿಷ್ಯರುಗಳಿಂದ ಪೂಜಿತವಾದ (ಮತ್ತು) ಶ್ರೀ ಜಯಧ್ವಜ

ತೀರ್ಥಗುರುವರ್ಯರಿಂದ ತಮಗೆ ಕೊಡಲ್ಪಟ್ಟ ನೃಸಿಂಹ ದೇವರ ಪ್ರತಿಮೆಯನ್ನು, ಹಾಗೂ ಸಂಸ್ಥಾನಾಧಿಪತ್ಯವನ್ನೂ, ಗುರುಗಳಾದ ಪುರುಷೋತ್ತಮತೀರ್ಥರು ಬ್ರಹ್ಮಣ್ಯತೀರ್ಥರಿಗೆ ಕೊಟ್ಟರು.

ಪುರುಷೋತ್ತಮಾರ್ಯಯತಿರಾಟ್ ಪ್ರವಿವೇಶ ಗುಹಾಂ ತತಃ ।
ಪುರುಷೋತ್ತಮಗುಹೇತ್ಯೇವ ನಾಮ್ನಾ ಖ್ಯಾತಾಽಧುನಾಪಿ ಸಾ ॥ ೧೫ ॥

ಅನಂತರದಲ್ಲಿ ಪೂಜ್ಯರೂ ಯತಿರಾಜರೂ ಆದ ಪುರುಷೋತ್ತಮತೀರ್ಥರು ಗುಹೆಯನ್ನು ಪ್ರವೇಶಿಸಿದರು. ಆ ಗುಹೆಯು ಈಗಲೂ ಪುರುಷೋತ್ತಮತೀರ್ಥರ ಗುಹೆಯೆಂಬ ಹೆಸರಿನಿಂದಲೇ ಪ್ರಸಿದ್ಧವಾಗಿದೆ.

ಬ್ರಹ್ಮಣ್ಯಯತಿರಾಜೇಂದ್ರಃಪ್ರಭಾವಭಿದುರೇಣ ಹಿ ।
ಜನತಾಘಾದ್ರಿವೃಂದಾನಿ ಭಿಂದಾನೋ ವ್ಯಚರತ್ತತಃ ॥ ೧೬ ॥

ಅದಾದ ಬಳಿಕ ಬ್ರಹ್ಮಣ್ಯತೀರ್ಥಯತಿರಾಜೇಂದ್ರರು, ತಮ್ಮ ಮಹಿಮೆ ಯೆಂಬ ವಜ್ರಾಯುಧದಿಂದ ಜನಗಳ ಪಾಪಗಿರಿಸಮೂಹಗಳನ್ನು ಸೀಳುವವರಾಗಿ ಸಂಚರಿಸಿದರು.

ಜ್ಞಾನಮಂಡಪಭಾಗಸ್ಥ ಕಣ್ವನದ್ಯಾಃ ಸಮೀಪಗಮ್ ।
ಅಬ್ಬೂರುಕ್ಷೇತ್ರಮಾಸಾದ್ಯ ನ್ಯವಸದ್ಯತಿರಾಟ್ ತತಃ ॥ ೧೭ ॥

ಅದಾದ ಮೇಲೆ 'ಜ್ಞಾನಮಂಟಪವೆಂಬ ಪ್ರದೇಶದಲ್ಲಿ ಹರಿಯುತ್ತಿರುವ ಕಣ್ವನದಿಗೆ ಸಮೀಪದಲ್ಲಿಯೇ ಇರುವ ಅಬ್ಬೂರು ಎಂಬ ಕ್ಷೇತ್ರಕ್ಕೆ ಬಂದು ಯತಿರಾಜರಾದ ಬ್ರಹ್ಮಣ್ಯತೀರ್ಥರು ವಾಸಮಾಡಿದರು.

ನಿಮಜ್ಜನ್ ಕಣ್ವಸರಿತಿ ತ್ರಿಕಾಲಂ ಪ್ರಣವಂ ಜಪನ್ ।
ಬೋಧಯನ್ಮಧ್ವಸಿದ್ಧಾಂತಮರ್ಹಯನ್ನೃಹರಿಂ ಸದಾ ॥ ೧೮ ॥

ಕಣ್ವನದಿಯಲ್ಲಿ ತ್ರಿಕಾಲಸ್ನಾನ, ಪ್ರಣವಜಪಗಳನ್ನು ಮಾಡುತ್ತಾ, ಮಧ್ವಸಿದ್ಧಾಂತವನ್ನು ಉಪದೇಶಿಸುತ್ತಾ, ಸರ್ವದಾ ನೃಸಿಂಹನನ್ನು ಪೂಜಿಸುತ್ತಾ,

ಶಿಷ್ಯೇಣಾನೀತಪಕ್ವಾನ್ನಂ ಪಾತ್ರಸಂಸ್ಥಂ ಮಹಾಮುನಿಃ ।
ಶಂಖೋದಕಪ್ರೋಕ್ಷಣೇನ ಪುನಸ್ತಪ್ತಂ ವಿಧಾಯ ತತ್ ॥ ೧೯ ॥

ಶಿಷ್ಯರಿಂದ ತರಲ್ಪಟ್ಟ ಪಾತ್ರೆಯಲ್ಲಿರುವ ಪಕ್ವಾನ್ನವನ್ನು ಶಂಖೋದಕ ಪ್ರೋಕ್ಷಣದಿಂದ, ಮತ್ತೆ ಅದನ್ನು ಬಿಸಿಮಾಡಿ,

ಶ್ರೀನೃಸಿಂಹಾಯಾರ್ಪಯಿತ್ವಾ ಸ ಭುಂಕ್ತೇ ಸಹ ಶಿಷ್ಯಕೈಃ ।
ತದಾತ್ವೇ ಜಾತು ವಿಪ್ರೇಂದ್ರಃ ಷಷ್ಠಿವಂಶಧರೋ ಧನೀ ॥ ೨೦ ॥

ಮರುದ್ವೃಧಾತೀರಗತಃ ಸಭಾರ್ಯೋ ನಿರ್ಗತೋ ಗೃಹಾತ್ ।
ಗಂಗಾಂ ಗಂತುಂ ಕೃತಸ್ವಾಂತಃ ಜ್ವರಾಂತಕಹತೋ ಮೃತಃ ॥ ೨೧ ॥

ಶ್ರೀನೃಸಿಂಹದೇವರಿಗೆ ನಿವೇದನೆಮಾಡಿ, ಶಿಷ್ಯರೊಡನೆ ಬ್ರಹ್ಮಣ್ಯತೀರ್ಥ ಮಹಾಮುನಿಗಳು ಊಟಮಾಡುತ್ತಿದ್ದರು. ಹೀಗಿರುವಾಗ ಒಂದುಸಲ, ಷಾಷ್ಠಿಕ (ಅರವತ್ತೊಕ್ಕಲು) ಕುಲೋತ್ಪನ್ನನಾದ, ಓರ್ವ ಧನಿಕನಾದ, ಕಾವೇರೀತೀರ ಸಂಸ್ಥಿತನಾದ, ಬ್ರಾಹ್ಮಣೋತ್ತಮನು ತನ್ನ ಭಾರ್ಯಾಸಮೇತನಾಗಿ ಮನೆಯಿಂದ ಹೊರಟು, ಗಂಗೆಗೆ ಹೋಗಲು ಮನಸ್ಸುಮಾಡಿ ಜ್ವರರೂಪಮೃತ್ಯುವಿನ ಹೊಡೆತಕ್ಕೆ ಸಿಕ್ಕಿ ಮೃತನಾದನು.

ಸತೀಗತಿಂ ಗಂತುಕಾಮಾ ಪತ್ಯಾಸಹ ಗತಿಂ ದ್ವಿಜಾನ್ ।
ಪತಿವ್ರತಾ ಯಯಾಚೇ ತಾಂ ಪ್ರೈಷಯಂಸ್ತೇ ಗುರುಂ ಪ್ರತಿ ॥ ೨೨ ॥

ಆಗ, ಪತಿವ್ರತೆಯಾದ ಅವನ ಹೆಂಡತಿಯು ಸಾಧ್ವೀಸ್ತ್ರೀಯರಿಗೆ ಉಚಿತವಾದ ಗತಿಯನ್ನು ಹೊಂದಲೋಸುಗ, ಪತಿಯೊಡನೆ ಸಹಗಮನ ಮಾಡಲು ವಿಪ್ರರ ಅನುಜ್ಞೆಯನ್ನು ಯಾಚಿಸಿದಳು. ಆ ವಿಪ್ರರು ಅವಳನ್ನು (ಶ್ರೀಬ್ರಹ್ಮಣ್ಯತೀರ್ಥ) ಗುರುಗಳನ್ನು ಅನುಮತಿ ಕೇಳಲು ಕಳುಹಿಸಿದರು.

ಬ್ರಹ್ಮಣ್ಯಯತಿರಾಜಂ ಸಾ ಪ್ರಾಣಮದ್ದುಃಖಕರ್ಶಿತಾ ।
ಸರ್ವಂ ವಿದನ್ ಸತ್ಯವಾದೀ ತಾಂ ಸಾಧ್ವೀಮವದತ್ಕಿಲ ॥ ೨೩ ॥

ಆ ಪತಿವ್ರತೆಯು ದುಃಖಕರ್ಶಿತಳಾಗಿ ಬ್ರಹ್ಮಣ್ಯಯತಿರಾಜರನ್ನು ಚೆನ್ನಾಗಿ ಭಕ್ತಿಯಿಂದ ನಮಸ್ಕರಿಸಿದಳು. ಸರ್ವವನ್ನೂ ತಿಳಿದಿದ್ದ, ಸತ್ಯವಾಕ್ಯವುಳ್ಳ ಗುರುಗಳು ಆ ಸಾಧ್ವೀಸ್ತ್ರೀಯನ್ನು ಕುರಿತು ಹೀಗೆ ಹೇಳಿದರಷ್ಟೆ !

ಸುದೀರ್ಘಮಂಗಲೀ ಭೂಯಾ ಇತಿ ಸಾ ವಿಸ್ಮಿತಾ ತತಃ ।
ಪತಿಂ ಮೃತಂ ಶ್ರಾವಯಂತೀ ಜಗದೇ ಮುನಿನಾ ಪುನಃ ॥ ೨೪ ॥

'ದೀರ್ಘಸುಮಂಗಲಿಯಾಗು'— ಎಂಬುದಾಗಿ. ಅನಂತರ ಇದನ್ನು ಕೇಳಿ ವಿಸ್ಮಿತಳಾದ ಆ ಪತಿವ್ರತೆಯು ತನ್ನ ಪತಿಯು ಮೃತನಾದುದನ್ನು ತಿಳಿಸಿ, ಮುನಿವರ್ಯರಿಂದ, ಪುನಃ ಹೀಗೆ ಹೇಳಿಸಿಕೊಳ್ಳಲ್ಪಟ್ಟಳು.

ಮಾ ಭೈಷೀಃ ಸಾಧ್ವಿ ಭದ್ರಂ ತೇ ಜೀವತ್ಯಬ್ದಶತಂ ಪತಿಃ ।
ದ್ವೌ ಪುತ್ರೌ ಲಪ್ಸ್ಯಸೇ ಪೂರ್ವಂ ದೇಹಿ ಮೇಽಸ್ಪೃಷ್ಟಭೂತಲಮ್ ॥ ೨೫ ॥

"ಎಲೈ ಸಾಧ್ವಿಯೇ, ನೀನು ಹೆದರಬೇಡ, ನಿನಗೆ ಶುಭವಾಗಲಿ, ನಿನ್ನ ಪತಿಯು ನೂರುವರ್ಷ ಜೀವಿಸಿರುವನು. ನೀನು ಇಬ್ಬರು ಪುತ್ರರನ್ನು ಹೊಂದುವೆ. ಅದರಲ್ಲಿ ಮೊದಲನೆಯವನನ್ನು ಭೂತಲಸ್ಪರ್ಶವಿಲ್ಲದೆಯೇ ನನಗೆ ಕೊಡು."

ಇತಿ ಚಿತ್ರಚರಿತ್ರೋಽಸೌ ವದನ್ ಜಪ್ತ್ವೋದಕಂ ದದೌ ।
ದ್ರುತಮಾದಾಯ ಸುದತೀ ದಯಿತಂ ಪ್ರೋಕ್ಷಯಜ್ಜಲೈಃ ॥ ೨೬ ॥

ಹೀಗೆ ಹೇಳಿ, ಆಶ್ಚರ್ಯಕರವಾದ ಮಹಿಮೆಯುಳ್ಳ (ಬ್ರಹ್ಮಣ್ಯತೀರ್ಥರು) ಅಭಿಮಂತ್ರಿತವಾದ ಜಲವನ್ನು ಆಕೆಗೆ ಕೊಟ್ಟರು. ಆ ಜಲವನ್ನು ಶೀಘ್ರವಾಗಿ ತಂದು ಆ ಸಾಧ್ವೀಮಣಿಯು ಪತಿಯ ದೇಹಕ್ಕೆ ಪ್ರೋಕ್ಷಿಸಿದಳು.

ತತ್ಕ್ಷಣಾಜ್ಜೀವಿತಃ ಕಾಂತಃ ಕಾಂತಯಾಗಾತ್ಸುರಾಪಗಾಮ್ ।
ಗುರೋಃ ಪ್ರಸಾದಾತ್ಕಾಲೇನ ಸತೀಂ ಗರ್ಭಂ ಬಭಾರ ಹಿ ॥ ೨೭ ॥

ಕೂಡಲೇ ಆಕೆಯ ಪತಿಯು ಜೀವಿತನಾದನು. ಮತ್ತು ತನ್ನ ಕಾಂತೆಯಿಂದ ಕೂಡಿಕೊಂಡು ಗಂಗಾಸ್ನಾನಕ್ಕೆ ಹೊರಟನು. ಗುರುಗಳ ಪ್ರಸಾದದ ದೆಸೆಯಿಂದ ಯೋಗ್ಯಕಾಲದಲ್ಲಿ ಆ ಸಾಧ್ವಿಯು ಗರ್ಭವನ್ನು ಧಾರಣೆ ಮಾಡಿದಳು.

ಪ್ರಸೂತಿಸಮಯಂ ಜಾನನ್ ದಿವ್ಯಚಕ್ಷುಃ ಸ್ವಶಿಷ್ಯಕೈಃ ।
ಸ್ವರ್ಣಪಾತ್ರಧೃತಂ ಪೋತಮಾನಯಾಮಾಸ ಸನ್ನಿಧಿಮ್ ॥ ೨೮ ॥

ಆಕೆಯ ಪ್ರಸೂತಿಸಮಯವನ್ನು ತಮ್ಮ ದಿವ್ಯದೃಷ್ಟಿಯಿಂದ ಬಲ್ಲವರಾದ ಗುರುಗಳು, ತಮ್ಮ ಶಿಷ್ಯರುಗಳಿಂದ ಸ್ವರ್ಣಪಾತ್ರೆಯಲ್ಲಿ ಇರಿಸಲ್ಪಟ್ಟ ಶಿಶುವನ್ನು, ಸಮೀಪಕ್ಕೆ ಕರೆತರಿಸಿದರು.

ಸ್ವಪಾಣಿಕಮಲೇನಾಲಂ ಬಾಲಂ ಕಣ್ವನದೀಜಲೈಃ ।
ಕ್ಷಾಲಯಾಮಾಸ ಯತ್ರಾಸೌ ಖ್ಯಾತಃ ಶ್ವೇತಶಿಲಾಹ್ರದಃ ॥ ೨೯ ॥

ಸ್ವಹಸ್ತಕಮಲದಿಂದಲೇ ಆ ಬಾಲನನ್ನು ಕಣ್ವನದೀಜಲಗಳಿಂದ ತೊಳೆದರು. ಆ ಸ್ಥಳಕ್ಕೆ ಈಗಲೂ "ಶ್ವೇತಶಿಲಾಹ್ರದ" (ಬಿಳಿಕಲ್ಲುಮಡು) ಎಂಬುದಾಗಿ ಹೆಸರಿದೆ.

ಪ್ರಹ್ಲಾದನಾಯ ಮಾಧ್ವಾನಾಂ ಪ್ರಹ್ಲಾದೋಽಯಂ ಧರಾಂ ಗತಃ ।
ಇತ್ಯಾಹ್ಲಾದಿತಚಿತ್ತೋಽಯಂ ರರಕ್ಷ ಗಿರಿಗಹ್ವರೇ ॥ ೩೦ ॥

(ಈ ಶಿಶುವು) ಮಧ್ವಮತಾನುಯಾಯಿಗಳೆಲ್ಲರಿಗೂ ಪ್ರಕರ್ಷವಾದ (ಹ್ಲಾದ) ಸಂತೋಷವನ್ನುಂಟುಮಾಡಲು ಭೂಮಿಗೆ ಅವತರಿಸಿ ಬಂದಿರುವ "ಸಾಕ್ಷಾತ್ ಪ್ರಹ್ಲಾದ"ನೇ ಎಂಬುದಾಗಿ ಸಂತುಷ್ಟಾಂತರಂಗರಾದ ಗುರುಗಳು, ಆ ಶಿಶುವನ್ನು (ಪುರುಷೋತ್ತಮರು ಪ್ರವೇಶಿಸಿದ) ಗಿರಿಯ ಗುಹೆಯಲ್ಲಿ ಕಾಪಾಡಿದರು.*

ಪಂಚಮೇಽಬ್ದೇ ತತ್ರ ವಿಪ್ರೈರುಪನೀತಂ ಚ ಸಪ್ತಮೇ ।
ಸನ್ಯಾಸಭಾಗಿನಂ ತೋಷಾದ್ 'ವ್ಯಾಸ'ನಾಮಾನಮಾತನೋತ್ ॥ ೩೧ ॥

ಐದನೇ ವಯಸ್ಸಿನಲ್ಲಿ ವಿಪ್ರರಿಂದ ಉಪನಯನಸಂಸ್ಕಾರವನ್ನು ಹೊಂದಿ ಮತ್ತು ಏಳನೇ ವಯಸ್ಸಿನಲ್ಲಿ ಸಂನ್ಯಾಸ ಸ್ವೀಕರಿಸಿದ ಆ ಬಾಲಕನನ್ನು (ಬ್ರಹ್ಮಣ್ಯ ಗುರುಗಳು) "ವ್ಯಾಸತೀರ್ಥ" — ಎಂಬ ನಾಮವುಳ್ಳವನನ್ನಾಗಿ ಮಾಡಿದರು.

ತಂ ವ್ಯಾಸತೀರ್ಥಂ ವಿದ್ಯಾರ್ಥಂ ಸ್ವಮಾತುರ್ಭಗಿನೀಸುತಮ್ ।
ಶ್ರೀಪಾದರಾಜನಾಮಾನಂ ಪ್ರಾಪಯದ್ಗುರುಪುಂಗವಃ ॥ ೩೨ ॥

ಗುರುಪುಂಗವರಾದ ಬ್ರಹ್ಮಣ್ಯತೀರ್ಥರು, ವಿದ್ಯಾವ್ಯಾಸಂಗಕ್ಕೋಸ್ಕರ ಆ ವ್ಯಾಸತೀರ್ಥರನ್ನು ತಮ್ಮ (ಪೂರ್ವಾಶ್ರಮದ) ಚಿಕ್ಕಮ್ಮನ ಮಕ್ಕಳಾದ ಶ್ರೀಪಾದ ರಾಜರೆಂಬುವರ ಬಳಿಗೆ ಕಳುಹಿಸಿದರು.

ಅಬ್ಬೂರುಕ್ಷೇತ್ರ ಏವಾಸೌ ಭೂಮೌ ಲೀನತನುಂ ಹರಿಮ್ ।
ವಿಟ್ಠಲಂ ಲಬ್ಧವಾನ್ ಸ್ವಪ್ನೇ ವಿಪ್ರಾತ್ಮಹರಿಚೋದಿತಃ ॥ ೩೩ ॥

ಅಬ್ಬೂರು ಕ್ಷೇತ್ರದಲ್ಲೇ ಇದ್ದವರಾಗಿ, ಭೂಮಿಯಲ್ಲಿ ಮುಚ್ಚಿ ಹೋಗಿದ್ದ ವಿಟ್ಠಲನ ವಿಗ್ರಹವನ್ನು, ಬ್ರಾಹ್ಮಣರೂಪೀ ಹರಿಯಿಂದ ಸ್ವಪ್ನ ಚೋದಿತರಾಗಿ ಪಡೆದರು.

ವ್ಯಾಸರಾಜೇನ ವಿದ್ಯಾಯಾಂ ವ್ಯಾಸೋಪಮಧಿಯಾ ಯುತಃ ।
ಸಂಚರನ್ನಂಚನೀಯೋಽಯಮಂಚಯನ್ ತಂ ಚ ವಿಟ್ಠಲಮ್ ॥ ೩೪ ॥

ವಿದ್ಯೆಯಲ್ಲಿ ವೇದವ್ಯಾಸರನ್ನು ಹೋಲುವ ವ್ಯಾಸರಾಜರೊಡನೆ ಕೂಡಿಕೊಂಡು ಸಂಚರಿಸುತ್ತಾ, ಪೂಜನೀಯರಾದ ಶ್ರೀ ಬ್ರಹ್ಮಣ್ಯಮುನಿವರ್ಯರು ವಿಟ್ಠಲಮೂರ್ತಿಯನ್ನು ನಿತ್ಯವೂ ಪೂಜಿಸುತ್ತಾ,

* ಶ್ರೀಪುರುಷೋತ್ತಮತೀರ್ಥಶ್ರೀಪಾದಂಗಳವರು ಪ್ರವೇಶಿಸಿದ ಗುಹಾದ್ವಾರದ ಮುಂದೆ ಒಂದು ಮಾವಿನಮರವಿದ್ದಿತೆಂದೂ, ಆ ವೃಕ್ಷದ ಕೊಂಬೆಗೆ ತೊಟ್ಟಿಲು ಕಟ್ಟಿ ಆ ಮಗುವನ್ನು ಮಲಗಿಸಿ ಅಲ್ಲಿಯೇ ಬೆಳೆಸುತ್ತಿದ್ದರೆಂದು ಕೇಳಿದ ವಿಷಯ.

ಗಾಹಂ ಗಾಹಂ ತೀರ್ಥಸಾರ್ಥಂ ದರ್ಶಂ ದರ್ಶಮಜಂ ಭಜನ್ ।
ಜೇಯಂ ಜೇಯಂ ವಾದಿವಾದಂ ಧ್ಯೇಯಂ ಧ್ಯಾಯನ್ನಮನ್ಮುನಿಃ ॥ ೩೫ ॥

ತೀರ್ಥಸಮುದಾಯಗಳಲ್ಲಿ ಪುನಃ ಪುನಃ ಅವಗಾಹನೆಮಾಡುವವರಾಗಿ (ಆಯಾಯ ತೀರ್ಥಗಳಲ್ಲಿರುವ) ಭಗವನ್ಮೂರ್ತಿಯನ್ನು ಪದೇಪದೇ ನೋಡುವವರಾಗಿ ಸೇವಿಸುತ್ತಾ, ವಾದಿಗಳ ವಾದಗಳನ್ನು ಗೆಲ್ಲುತ್ತಾ, ಗೆಲ್ಲುತ್ತಾ ಧ್ಯಾನಕ್ಕೆ ಯೋಗ್ಯನಾದ ಶ್ರೀಹರಿಯನ್ನು ಧ್ಯಾನಿಸುತ್ತಾ, ನಮಿಸುತ್ತಾ,

ಕರ್ಣಾಟರಾಜಧಾನೀಂ ಸ ವರ್ಣ್ಯಾಂ ಪ್ರಾಪ್ಯ ಸುರಾಲಯೇ ।
ಸ್ವರ್ಣಪೀಠೇಽರ್ಚಯದ್ದೇವಮರ್ಣೋಜಾಯತಲೋಚನಃ ॥ ೩೬ ॥

ವರ್ಣಿಸಲು ಯೋಗ್ಯವಾದ, ಕರ್ನಾಟರಾಜಧಾನಿಯನ್ನು ಹೊಂದಿ, ಅಲ್ಲೊಂದು ದೇವಾಲಯದಲ್ಲಿ ಸುವರ್ಣಪೀಠದಲ್ಲಿ ಕೂಡಿಸಿ, ಕಮಲದಂತೆ ವಿಶಾಲನೇತ್ರರಾದ (ಬ್ರಹ್ಮಣ್ಯತೀರ್ಥರು) ತಮ್ಮ ಆರಾಧ್ಯಮೂರ್ತಿಯನ್ನು ಪೂಜಿಸಿದರು.

ಅನಾವೃಷ್ಟ್ಯಾರ್ದಿತಾಸ್ತತ್ರ ಮುನಿಶ್ರೇಷ್ಠಂ ನ್ಯವೇದಯನ್ ।
ಕೃಪಾದೃಷ್ಟ್ಯಾವಲೋಕ್ಯಾಸ್ಮಾನ್ ಪಾಹಿ ವೃಷ್ಟ್ಯೇತ್ಯಥಾನಮನ್ ॥ ೩೭ ॥

ಅನಾವೃಷ್ಟಿಯಿಂದ ಪೀಡಿತರಾದ ಆ ದೇಶದ ಜನರು ಮುನಿಶ್ರೇಷ್ಠರಾದ ಬ್ರಹ್ಮಣ್ಯತೀರ್ಥರಿಗೆ ವಿಜ್ಞಾಪನೆಯನ್ನು ಮಾಡಿಕೊಂಡರು. "ಕೃಪಾದೃಷ್ಟಿಯಿಂದ ನಮ್ಮನ್ನು ನೋಡಿ, ಮಳೆ ಬರುವಂತೆ ಮಾಡಿ, ನಮ್ಮನ್ನು ಸಲಹಿರಿ"— ಎಂಬುದಾಗಿ ಹೇಳಿ ನಮಸ್ಕರಿಸಿದರು.

ಇತ್ಯರ್ಥಿತಃ ಸಂಯಮೀಂದ್ರಃ ಸ್ವೇರಿತಚ್ಛಾತ್ರಮಂತ್ರತಃ ।
ಪೌರಸಸ್ಯಮಪುಷ್ಣಾತ್ಸಃ ಕೃಪಾದೃಷ್ಟ್ಯಾಭಿವೃಷ್ಟಿಭಿಃ ॥ ೩೮ ॥

ಹೀಗೆ ಪ್ರಾರ್ಥಿತರಾಗಿ, ಸಂಯಮೀಂದ್ರಬ್ರಹ್ಮಣ್ಯತೀರ್ಥರು ತಮ್ಮಿಂದ ಪ್ರೇರಿತರಾದ ಶಿಷ್ಯರಿಂದ ಮಂತ್ರಪಠನ ಮಾಡಿಸಿ, ತಮ್ಮ ಕೃಪಾದೃಷ್ಟಿರೂಪ ಹೆಚ್ಚುವೃಷ್ಟಿಗಳಿಂದ (ವಿಶೇಷ ಮಳೆಯಿಂದ) ಪೌರರೆಂಬ ಸಸ್ಯಗಳನ್ನು ಪೋಷಣೆ ಮಾಡಿದರು.(ಅಭಿ=ಸುತ್ತಮುತ್ತಲೂ ಸಹ ಬಿದ್ದ ಮಳೆಯಿಂದ ವಿಶೇಷ ಬೆಳೆಯೂ ಬಂದಿತು. ಅದರಿಂದ ಪೌರಜಾನಪದಗಳ ಸಂರಕ್ಷಣೆಯೂ ಆಯಿತು.)

ತತಃ ಪ್ರಾತಃ ಪೌರವಾರಃ ಪ್ರಮೋದಭರಪೀಡಿತಃ ।
ಇಷ್ಟಹೇತುಂ ಯತಿಂ ದ್ರಷ್ಟುಮಾಗತ್ಯ ನ ಹಿ ದೃಷ್ಟವಾನ್ ॥ ೩೯ ॥

ಆ ಮಾರನೇ ದಿನ ಪ್ರಾತಃಕಾಲದಲ್ಲಿ, ತಡೆಯಲಾಗದ ಸಂತೋಷವುಳ್ಳ ಪಟ್ಟಣಿಗರ ಗುಂಪು ತಮ್ಮ ಅಭೀಷ್ಟಕ್ಕೆ ಕಾರಣೀಭೂತರಾದ ಯತಿಗಳನ್ನು ನೋಡಲೋಸುಗ ಬಂದು ಅವರನ್ನು ಕಾಣದಾಯಿತು.

ಶ್ರುತ್ವೋದಂತಮಿಲಾಕಾಂತಃ ಸ್ವಾಂತೇ ಸಂತೋಷವಾನ್ ಸ್ವಕೈಃ ।
ಜ್ಞಾನಮಂಡಪದೇಶಸ್ಥಾಽನಜ್ಞಾಸೀತ್ ಗುರುಪುಂಗವಾನ್ ॥ ೪೦ ॥

ಈ ವೃತ್ತಾಂತವೆಲ್ಲವನ್ನೂ ಕೇಳಿದ ಆ ದೇಶದ ಭೂಪಾಲನು, ತನ್ನ ಮನಸ್ಸಿನಲ್ಲೇ ಸಂತೋಷಹೊಂದಿದವನಾಗಿ, ಗುರುಪುಂಗವರು ಜ್ಞಾನಮಂಟಪ ದೇಶದಲ್ಲಿ ಇದ್ದಾರೆಂಬುದಾಗಿ ಸ್ವಕೀಯರಿಂದ ವಿಷಯ ತಿಳಿದುಕೊಂಡನು.

ನಿರ್ಬಧ್ಯ ಗ್ರಾಮಮೇಕಂ ತು ದಾಪಯಾಮಾಸ ಭಿಕ್ಷವೇ ।
ಶ್ರೀಮದ್ವೈಷ್ಣವಸಿದ್ಧಾಂತಸ್ಥಾಪಕಾಯ ಮಹಾತ್ಮನೇ ॥ ೪೧ ॥

ವ್ಯಾಖ್ಯಾತಾಖಿಲಶಾಸ್ತ್ರಾಯ ಜ್ಞಾನವೈರಾಗ್ಯಶಾಲಿನೇ ।
ಪರಿವ್ರಾಜಕವರ್ಯಾಯ ಶಾಂತಿದಾಂತಿಯುತಾಯ ವೈ ॥ ೪೨ ॥

ಬ್ರಹ್ಮಣ್ಯತೀರ್ಥಶಿಷ್ಯಾಯ ವ್ಯಾಸರಾಜಾಯ ಧೀಮತೇ ।
ಗೃಹೀತ್ವಾ ಯತಿರಾಟ್ ಗ್ರಾಮಂ ಬ್ರಾಹ್ಮಣೇಭ್ಯೋ ದದೌ ಕ್ರಮಾತ್ ॥೪೩॥

ಮತ್ತು, (ಆಗ ರಾಜನು) ಗ್ರಾಮವೊಂದನ್ನು ಕಟ್ಟಿಸಿ, ಅದನ್ನು ಸಂನ್ಯಾಸಿ ಶ್ರೇಷ್ಠರೂ, ಶ್ರೀಮದ್ವೈಷ್ಣವಸಿದ್ಧಾಂತ ಸ್ಥಾಪಕರೂ, ಮಹಾತ್ಮರೂ, ಅಖಿಲಶಾಸ್ತ್ರ ವ್ಯಾಖ್ಯಾತೃಗಳೂ, ಜ್ಞಾನವೈರಾಗ್ಯಶಾಲಿಗಳೂ, ಪರಿವ್ರಾಜಕ ಶ್ರೇಷ್ಠರೂ, ಶಾಂತಿ-ದಾಂತಿ ಗುಣೋಪೇತರೂ, ಬ್ರಹ್ಮಣ್ಯತೀರ್ಥರ ಶಿಷ್ಯರೂ ಆದ ಧೀಮಂತ ವ್ಯಾಸರಾಜರಿಗೆ ಕೊಡಿಸಿದನು. ಆ ಯತಿವರ್ಯರು ಅದನ್ನು ಸ್ವೀಕರಿಸಿ, ಕ್ರಮೇಣ ಬ್ರಾಹ್ಮಣರಿಗೆ ದಾನಮಾಡಿದರು.

ಸ ಗ್ರಾಮೋ ರಾಮಗಿರ್ಯಾಖ್ಯಮಂಡಲಾಂತರ್ಗತಃಫಲೀ ।
ಬ್ರಹ್ಮಣ್ಯಪುರನಾಮ್ನಾಽಸ್ತಿ ಪ್ರಖ್ಯಾತೋಽದ್ಯಾಪಿ ಭೂತಲೇ ॥ ೪೪ ॥

ಆ ಗ್ರಾಮವು ರಾಮಗಿರಿಮಂಡಲದಲ್ಲಿ ಅಂತರ್ಗತವಾಗಿ, ಫಲವತ್ತಾಗಿ, ಈಗಲೂ "ಬ್ರಹ್ಮಣ್ಯಪುರ"ವೆಂಬ ಹೆಸರಿನಿಂದ ಭೂಲೋಕದಲ್ಲೇ ಪ್ರಖ್ಯಾತ ವಾಗಿದೆ.

ಭೂಮೌ ವಾಸಮಲಂಕುರ್ವನ್ನಲಂಕರ್ತುಂ ಹರೇಃಪದಮ್ ।
ವೇದಾಂತರಾಜ್ಯಭೂಪಾಲಂ ಸ್ವಶಿಷ್ಯಮಕರೋತ್ತದಾ ॥ ೪೫ ॥

ಅದಾದ ಬಳಿಕ ಬ್ರಹ್ಮಣ್ಯತೀರ್ಥರು ಭೂಮಿಯಲ್ಲಿ ತಮ್ಮ ವಾಸವನ್ನು ಸಾಕುಮಾಡಲು, ಹಾಗೂ ಹರಿಪದವನ್ನು ಅಲಂಕರಿಸಲೋಸುಗ, ತಮ್ಮ ಶಿಷ್ಯರಾದ ಶ್ರೀವ್ಯಾಸರಾಜರನ್ನು, ವೇದಾಂತರಾಜ್ಯದಲ್ಲಿ ಪಟ್ಟಾಭಿಷಿಕ್ತರನ್ನಾಗಿ ಮಾಡಿದರು.

ವೈಶಾಖಕೃಷ್ಣಪಕ್ಷೇಽಸಾವೇಕಾದಶ್ಯಾಂ ಗುರೂತ್ತಮಃ ।
ನಭೋಮಧ್ಯಗತೇಽರ್ಯಮ್ಣಿ ಸ್ವರೂಪೇಽಲೀಯತ ಪ್ರಭುಃ ॥ ೪೬ ॥

ವೈಶಾಖ ಕೃಷ್ಣಪಕ್ಷ-ಏಕಾದಶೀದಿವಸ, ಸೂರ್ಯನು ನಭೋಮಧ್ಯಗತನಾಗಿರಲು, ಗುರೂತ್ತಮರಾದ ಶ್ರೀಬ್ರಹ್ಮಣ್ಯತೀರ್ಥಪ್ರಭುಗಳು, ತಮ್ಮ ಸ್ವರೂಪದಲ್ಲಿ ಲೀನರಾದರು.

ಅಬ್ಬೂರುಕ್ಷೇತ್ರಭಾಗೇಽಪಿ ಭಜತಾಂ ಕಾಮಿತಪ್ರದಃ ।
ಬ್ರಹ್ಮಣ್ಯಗುರುರಧ್ಯಾಸ್ತೇ ವೃಂದಾವನಮಿಹಾಂಶತಃ ॥ ೪೭ ॥

ಅಬ್ಬೂರುಕ್ಷೇತ್ರದಲ್ಲಿ, ಭಜಿಸುವವರಿಗೆ ಕಾಮಿತಪ್ರದರಾದ, ಬ್ರಹ್ಮಣ್ಯ ಗುರುಗಳು ಇಲ್ಲಿರುವ ವೃಂದಾವನವನ್ನು, ಒಂದಂಶದಿಂದ ತಮ್ಮ ಅಧಿಷ್ಠಾನವನ್ನಾಗಿ ಮಾಡಿಕೊಂಡಿರುವರು.

ಈ ಶ್ಲೋಕದಲ್ಲಿರುವ "ಅಪಿ" ಶಬ್ದವು ಅಬ್ಬೂರಿನಲ್ಲಿಯೇ ಬಂದು ಇದ್ದು ಸೇವಿಸಲು ಅನಾನುಕೂಲವಿದ್ದ ಜನರು, ತಮ್ಮ ಸ್ಥಳದಲ್ಲಿದ್ದೇ ಭಜಿಸಿದರೆ, ಶ್ರೀಬ್ರಹ್ಮಣ್ಯತೀರ್ಥಗುರುಗಳು ಅಭೀಷ್ಟಪೂರ್ಣಮಾಡುತ್ತಾರೆ ಎಂಬುದನ್ನೂ ಹೇಳುತ್ತದೆ.

ವೃಂದಾವನಾಂತರಗತೋ ಬ್ರಹ್ಮಣ್ಯಗುರುರಾಡಿಹ ।
ಯಾವದ್ದದಾತಿ ಭಕ್ತೇಭ್ಯಸ್ತಾವನ್ನೈವ ಸುರದ್ರುಮಃ ॥ ೪೮ ॥

ಇಲ್ಲಿರುವ ವೃಂದಾವನದಲ್ಲಿ ಅಂತರ್ಗತರಾಗಿ ನೆಲೆಸಿರುವ ಬ್ರಹ್ಮಣ್ಯ ಗುರುರಾಜರು, ಭಕ್ತರಿಗೆ ಏನೊಂದು ಅಭೀಷ್ಟಗಳನ್ನು ಸಲ್ಲಿಸುವರೋ, ಅಷ್ಟೊಂದನ್ನು ಕಲ್ಪವೃಕ್ಷವೂ ಕೊಡಲಾರದು.

ತತ್ಸೇವನಾಚ್ಚರೇತ್ಪಂಗುಃ ಖಂಜಶ್ಚ ಕರವಾನ್ಭವೇತ್ ।
ಕುಷ್ಠೀ ಕುಷ್ಠವಿಹೀನಃಸ್ಯಾದ್ಬಧಿರಃ ಶೃಣುಯಾತ್ಸುಖಮ್ ॥ ೪೯ ॥

ಅವರ ಸೇವೆಯಿಂದ, ಪಂಗುವು (ಕುಂಟನು) ನಡೆಯುವನು. ಕೈ ಇಲ್ಲದವನು ಕೈ ಉಳ್ಳವನಾಗುವನು. ಕುಷ್ಠರೋಗಿಯು ತನ್ನ ರೋಗವನ್ನು ಪರಿಹರಿಸಿಕೊಳ್ಳುವನು. ಕಿವುಡನು ಸುಖವಾಗಿ ಕೇಳುವನು.

ಮೂರ್ಖಾಲುಃಸಂತ್ಯಜೇನ್ಮೌರ್ಖ್ಯಮನಪತ್ಯೋಽಪಿ ಪುತ್ರವಾನ್ ।
ಯೇ ಯೇ ವಾಂಛಂತಿ ಯಂ ಕಾಮಂ ತೇ ತೇ ತಂ ತಂ ಸಮಾಪ್ನುಯುಃ ॥೫೦॥

ಮೂರ್ಖಾಶೀಲನು ಮೂರ್ಖೆಯನ್ನು ಬಿಟ್ಟಿರುವನು, ಅಪತ್ಯರಹಿತನು ಪುತ್ರವಂತನಾಗುವನು. ಯಾರ‍್ಯಾರು ಏನೇನನ್ನು ಬಯಸುವರೋ ಅವರೆಲ್ಲರೂ ಆಯಾ ಅಭೀಷ್ಟಗಳನ್ನು ಹೊಂದುವರು.

“ಬ್ರಹ್ಮಣ್ಯತೀರ್ಥಾಯ ನಮಃ ” ಇತ್ಯಷ್ಟಾಕ್ಷರಸನ್ಮನುಮ್ ।
ಓಂಕಾರಪೂರ್ವಕಂ ನಿತ್ಯಂ ಜಪತಾಂ ಕಿಂ ನು ದುರ್ಲಭಮ್ ॥ ೫೧ ॥

“ಬ್ರಹ್ಮಣ್ಯತೀರ್ಥಾಯ ನಮಃ” — ಎಂಬ ಈ ಅಷ್ಟಾಕ್ಷರಸನ್ಮಂತ್ರವನ್ನು ಓಂಕಾರಪೂರ್ವಕ ನಿತ್ಯವೂ ಜಪಿಸುವವರಿಗೆ ಅಭೀಷ್ಟವಾವುದು ದುರ್ಲಭ? (ಎಲ್ಲ ಸುಗಮ್ಯವೇ).

ಮಂತ್ರೇಣಾನೇನ ಸಂಜಪ್ಯ ತೋಯಪ್ರಕ್ಷೇಪಣಾನ್ನರೇ ।
ಪಿಶಾಚಗ್ರಹಪೀಡಾದಿ ತಕ್ಷಣಾತ್ಕ್ಷೀಯತೇ ಧ್ರುವಮ್ ॥ ೫೨ ॥

ಈ ಮಂತ್ರದಿಂದ ಜಪಿಸಿದ ಜಲವನ್ನು ಪಿಶಾಚಾದಿ ಗ್ರಹಪೀಡಿತರಿಗೆ ಪ್ರೋಕ್ಷಣಮಾಡುವುದರಿಂದಲೇ ಅವರಿಗೆ ಕ್ಷಣದಲ್ಲಿ ಪಿಶಾಚಗ್ರಹಪೀಡಾದಿಗಳು ನಾಶವಾಗುವುದು—ನಿಶ್ಚಯ.

ಯಃ ಪುನರ್ಗುರುವರ್ಯಂ ತಂ ಕ್ಷೀರಾಜ್ಯದಧಿಪೂರ್ವಕೈಃ ।
ಸ್ನಾಪಯೇದ್ವಿಷ್ಣುನೈವೇದ್ಯೈರರ್ಚಯೇಲ್ಲಭತೇಽಖಿಲಮ್ ॥ ೫೩ ॥

ಅಲ್ಲದೇ ಪುನಃ ಯಾವ ಅಧಿಕಾರಿಗಳು ಗುರುವರ್ಯರಿಗೆ, ವಿಷ್ಣು ನಿವೇದಿತವಾದ ಕ್ಷೀರ–ಆಜ್ಯ–ದಧಿ (ಮೊಸರು) ಮೊದಲಾದ ಪಂಚಾಮೃತಗಳಿಂದ ಸ್ನಾನಮಾಡಿಸುವರೋ, ಅವರು ಸಮಸ್ತಾಭೀಷ್ಟಗಳನ್ನು ಹೊಂದುವರು.

ದೀಪಾಲಿಂ ಸ್ಥಾಪಯನ್ನಗ್ರೇ ಸ ಹರೌ ದೃಢಭಕ್ತಿಮಾನ್ ।
ಹರಿಪ್ರಸಾದಪಾತ್ರಂ ಸ್ಯಾತ್ ಸಾಕ್ಷ್ಯತ್ರ ನೃಹರಿಃಪರಃ ॥ ೫೪ ॥

ವೃಂದಾವನದ ಮುಂಭಾಗದಲ್ಲಿ ಸಾಲುದೀಪಗಳನ್ನು ಸ್ಥಾಪನೆ ಮಾಡುವವನು, ಶ್ರೀಹರಿಯಲ್ಲಿ ದೃಢಭಕ್ತಿವಂತನಾಗುವನು ಮತ್ತು ಶ್ರೀಹರಿಯ ಪ್ರಸಾದ ಪಾತ್ರನಾಗುವನು. ಈ ವಿಷಯದಲ್ಲಿ ಸರ್ವೋತ್ತಮನಾದ ನಾರಸಿಂಹನೇ ಸಾಕ್ಷಿಯು.

ಪ್ರತ್ಯೂಷೇ ಸೇವಕಃಸ್ನಾಯಾಜ್ಜಪೇತ್ತನ್ಮಂತ್ರಮುತ್ತಮಮ್ ।
ಪ್ರದಕ್ಷಿಣನಮಸ್ಕಾರಾನ್ ಕುರ್ಯಾತ್ತಚ್ಚರಿತಂ ಪಠೇತ್ ॥ ೫೫ ॥

ಇಲ್ಲಿ, ಸೇವಾಕರ್ತನು, ಉಷಃಕಾಲದಲ್ಲೆದ್ದು ಸ್ನಾನಮಾಡಬೇಕು. ನಂತರ ಬ್ರಹ್ಮಣ್ಯತೀರ್ಥರ (ಸ್ತೋತ್ರರೂಪ) ಉತ್ತಮಮಂತ್ರವನ್ನು ಜಪಿಸಬೇಕು. ಪ್ರದಕ್ಷಿಣನಮಸ್ಕಾರವನ್ನು ಮಾಡಬೇಕು. ಅವರ ಚರಿತ್ರೆಯನ್ನು ಪಠನೆಮಾಡಬೇಕು.

ಮಧ್ಯಾಹ್ನೇಽಪಿ ಪುನಃಸ್ನಾಯಾದ್ಭುಂಜೀತಾರ್ಪಿತಮೇವ ಸಃ ।
ಪುನರ್ನಮೇದ್ಭಜೇದ್ಧ್ಯಾಯೇನ್ನಿಶಿ ಸ್ನಾಯಾದ್ಗುರುಂ ಭಜೇತ್ ॥ ೫೬ ॥

ಮಧ್ಯಾಹ್ನದಲ್ಲಿಯೂ, ಪುನಃ ಸ್ನಾನಮಾಡಬೇಕು. ಬ್ರಹ್ಮಣ್ಯತೀರ್ಥರಿಗೆ ಸಮರ್ಪಿಸಿದ ಶ್ರೀಹರಿ ನೈವೇದ್ಯವನ್ನೇ ಉಣ್ಣಬೇಕು. ಮತ್ತೆ ನಮನ–ಭಜನ–ಧ್ಯಾನ–ಸಾಯಂ ಸ್ನಾನ–ಹೀಗೆ ಗುರುಗಳನ್ನು ಸೇವಿಸಬೇಕು.

ಏವಂ ಕ್ರಮೇಣ ರೋಗಾರ್ತಃಪರಂ ಭಕ್ತ್ಯಾ ನಿಷೇವತೇ ।
ಅಚಿರಾಲ್ಲಭತೇ ಕಾಮಂ ಗುರುಕಾರುಣ್ಯಸಾಧಿತಮ್ ॥ ೫೭ ॥

ಈ ಪೂರ್ವೋಕ್ತಕ್ರಮದಿಂದ, ನಿರ್ಮಲವಾದ ಭಕ್ತಿಯಿಂದ, ಯಾವ ರೋಗಾರ್ತನು ಗುರುಗಳ ಸೇವೆಮಾಡುವನೋ, ಅವನು ಗುರುಕಾರುಣ್ಯದಿಂದ ಸಂಸಾಧಿತವಾದ ಅಭೀಷ್ಟವನ್ನು ಶೀಘ್ರದಲ್ಲಿ ಹೊಂದುವನು.

ಇತಿ ಬ್ರಹ್ಮಣ್ಯತೀರ್ಥಾನಾಂ ಚರಿತ್ರಮಣಿಮಾಲಿಕಾ ।
ಗ್ರಥಿತಾ ಶ್ರೀನಿವಾಸೇನ ಹರಿಪಾದಾಂಬುಜೇಽರ್ಪಿತಾ ॥ ೫೮ ॥

ಇತಿ ಶ್ರೀಮದ್ವ್ಯಾಸರಾಜಗುರು ಬ್ರಹ್ಮಣ್ಯತೀರ್ಥಗುರುರಾಜವಿಜಯಃ ಸಮಾಪ್ತಃ

ಈ ಪ್ರಕಾರ ಶ್ರೀನಿವಾಸತೀರ್ಥವಿರಚಿತಬ್ರಹ್ಮಣ್ಯತೀರ್ಥರ ಚಾರಿತ್ರ್ಯವೆಂಬ ಮಣಿಮಾಲಿಕೆಯು, ಶ್ರೀಹರಿಪಾದಪದ್ಮಗಳಲ್ಲಿ ಸಮರ್ಪಿತವಾಗಿದೆ.

ಹೀಗೆ ಶ್ರೀ ವ್ಯಾಸರಾಜರ ಗುರುಗಳಾದ ಬ್ರಹ್ಮಣ್ಯತೀರ್ಥಗುರುರಾಜರ
ವಿಜಯವು ಸಮಾಪ್ತವು.

ಶ್ರೀ ಶ್ರೀನಿವಾಸತೀರ್ಥ ವಿರಚಿತ

ಶ್ರೀ ಬ್ರಹ್ಮಣ್ಯತೀರ್ಥಸ್ತೋತ್ರಮ್

ಶ್ರೀವಿಟ್ಠಲಃಪಾತು ಸದಾತ್ತಲೀಲೋ ಬಾಲಾಕೃತಿರ್ಲೋಲಸಕೇಶಜಾಲಃ ।
ಮಧ್ವೋಽಘವಿಧ್ವಂಸಕರಃಕರೋತು ಬುದ್ಧಿಂ ವಿಶುದ್ಧಾಂ ಖಲು
ಮಾಧವೇಽಲಮ್ ॥ ೧ ॥

ಸರ್ವದಾ ಸ್ವೀಕೃತಲೀಲೆಗಳುಳ್ಳ, ಬಾಲರೂಪಧಾರಿಯೂ, ಮನೋಹರವಾದ ಕೇಶಸಮೂಹಸಹಿತನೂ ಆದ, ಶ್ರೀವಿಟ್ಠಲನು ರಕ್ಷಿಸಲಿ. ಪಾಪವಿಧ್ವಂಸಕರೆಂದು (ಖಲು) ಪ್ರಸಿದ್ಧರಾದ ಮಧ್ವಾಚಾರ್ಯರು ಮಾಧವನಲ್ಲಿ (ನನಗೆ) ಪರಿಶುದ್ಧವಾದ ಬುದ್ಧಿಯನ್ನು ಪೂರ್ಣವಾಗಿ ನೀಡಲಿ.

ಶ್ರೀವ್ಯಾಸರಾಜಮುನಿಪಾರ್ಚಿತಪಾದಪೀಠೋ
ಬ್ರಹ್ಮಣ್ಯತೀರ್ಥಗುರುರಾಜಯತೀಂದ್ರಚಂದ್ರಃ ।
ಗೋಭಿಸ್ತಮಾಂಸಿ ಹರತಾದ್ಭವಕಾನನೇಷು
ಸನ್ಮಾರ್ಗದೃಷ್ಟಿವಿಕಲಸ್ಯ ಸತೋ ಜನಸ್ಯ ॥ ೨ ॥

ಶ್ರೀವ್ಯಾಸರಾಜಮುನಿಶ್ರೇಷ್ಠರಿಂದ ಅರ್ಚಿತವಾದ ಪಾದಪೀಠಗಳುಳ್ಳ, ಶ್ರೀಬ್ರಹ್ಮಣ್ಯತೀರ್ಥಗುರುರಾಜರೆಂಬ ಯತೀಂದ್ರಚಂದ್ರನು, ಈ ಭವಾಟವಿಯಲ್ಲಿ ಸನ್ಮಾರ್ಗದರ್ಶನರಹಿತರಾದ ಸಜ್ಜನರಿಗೆ, ತಮ್ಮ ಉಪದೇಶರೂಪವಾದ ವಾಕ್ಯಕಿರಣಗಳಿಂದ ಅಜ್ಞಾನಾಂಧಕಾರವನ್ನು ಪರಿಹರಿಸಲಿ.

ಶ್ರೀಮನ್ನೃಸಿಂಹಚರಣಾಂಬುಜಪೂಜನೋತ್ಥ-
ಸರ್ವಾರ್ಥಸಂಪದಮರಪ್ರಕೃತಿರ್ಯತೀಂದ್ರಃ ।
ಬ್ರಹ್ಮಣ್ಯತೀರ್ಥಗುರುರಾಡಮರದ್ರುಮೋಽಸೌ
ಸರ್ವೇಷ್ಟಮಾಶು ವಿದಧಾತು ಸುಬೋಧಸಾಂದ್ರಃ ॥ ೩ ॥

ಶ್ರೀಮನ್ನೃಸಿಂಹದೇವರ ಚರಣಕಮಲಗಳ ಪೂಜೆಯಿಂದ ಪ್ರಾಪ್ತವಾದ ಸಕಲ ಅಭೀಷ್ಟಕರ ಸಂಪತ್ತುಳ್ಳ, ದೇವಸ್ವಭಾವದ ಯತೀಂದ್ರರಾದ, ತುಂಬಿದ

ಸುಜ್ಞಾನವುಳ್ಳ, ಬ್ರಹ್ಮಣ್ಯತೀರ್ಥಗುರುರಾಜರೆಂಬ ಕಲ್ಪವೃಕ್ಷವು ಸರ್ವೇಷ್ಟಗಳನ್ನು ಶೀಘ್ರವಾಗಿ ಪೂರೈಸಲಿ.

ವಜ್ರಾಯಿತೋಽಘಾದ್ರಿವಿಭೇದನೇಽಸೌ
ಚಂದ್ರಾಯಿತಃಸತ್ಕುಮುದಪ್ರಹರ್ಷೇ ।
ಸೂರ್ಯಾಯಿತಃಸದ್ಧೃದಯಪ್ರಕಾಶೇ
ಬ್ರಹ್ಮಣ್ಯತೀರ್ಥಃ ಸತತಂ ಸ ಪಾಯಾತ್ ॥ ೪ ॥

ಪಾಪಗಳೆಂಬ ಪರ್ವತವನ್ನು ತುಂಡರಿಸುವುದರಲ್ಲಿ ವಜ್ರಾಯುಧ ಸದೃಶರಾದ, ಸಾತ್ವಿಕಜನರೆಂಬ ಕನ್ನೈದಲೆಪುಷ್ಪವನ್ನು ಅರಳಿಸುವುದರಲ್ಲಿ ಅಂದರೆ ಸಂತೋಷಪಡಿಸುವಲ್ಲಿ ಚಂದ್ರನಂತಿರುವ, ಪದಾರ್ಥಜ್ಞಾನಸ್ಫುಟೀಕರಿಸಿ ಸುಜನರನ್ನು ಸಂತೋಷಪಡಿಸುವುದರಲ್ಲಿ ಸೂರ್ಯನೋಪಾದಿಯಲ್ಲಿರುವ, ಪ್ರಸಿದ್ಧರಾದ ಬ್ರಹ್ಮಣ್ಯತೀರ್ಥರು, ಸರ್ವದಾ ರಕ್ಷಕರಾಗಲಿ.

ನೃಸಿಂಹಸೇವಾಪರಿಪೂತಕಾಯಃ
ಸಂಸಾರಸಿಂಧೂತ್ತರಣಾಭ್ಯುಪಾಯಃ ।
ನಿರ್ದೋಷಬೋಧೇನ ವಿನಷ್ಟಮಾಯಃ
ಬ್ರಹ್ಮಣ್ಯಯೋಗೀ ವೃಜಿನಾತ್ಸ ಪಾಯಾತ್ ॥ ೫ ॥

ನರಸಿಂಹದೇವರ ಸೇವೆಯಿಂದ ಪವಿತ್ರವಾದ ದೇಹವುಳ್ಳ, ಸಂಸಾರಸಮುದ್ರವನ್ನು ದಾಟಿಸುವ ವಿಷಯದಲ್ಲಿ ಉತ್ಕೃಷ್ಟ ಉಪಾಯರೂಪರಾದ, ನಿರ್ಮಲವಾದ ಜ್ಞಾನದಿಂದ ಅಜ್ಞಾನವನ್ನು ನಾಶಮಾಡಿರುವ, ಆ ಬ್ರಹ್ಮಣ್ಯಯೋಗಿಗಳು ಪಾಪದ ದೆಸೆಯಿಂದ (ಪಾರುಮಾಡಲಿ) ರಕ್ಷಿಸಲಿ.

ಅಷ್ಟಾಂಗಯೋಗಪ್ರವಣಾಂತರಂಗಃ
ಕಷ್ಟವ್ರತಾಚಾರಕೃಶೀಕೃತಾಂಗಃ ।
ಇಷ್ಟಾರ್ಥಪೂರ್ಣಾನ್ ಕುರುತಾನ್ನತಾಂಗಾನ್
ನಷ್ಟೋಚ್ಚಸಂಸಾರಚಲತ್ತರಂಗಃ ॥ ೬ ॥

ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿರೂಪ ಅಷ್ಟಾಂಗಯೋಗದಲ್ಲಿ ಆಸಕ್ತವಾದ ಮನಸ್ಸುಳ್ಳ, ಕಷ್ಟಸಾಧ್ಯವಾದ ವ್ರತಾಚಾರಗಳಿಂದ ಕೃಶವಾದ ಶರೀರವುಳ್ಳ, ನಾಶಮಾಡಲ್ಪಟ್ಟ, ಮಹತ್ತರವಾದ ಸಂಸಾರಸಮುದ್ರದಲ್ಲಿ ಚಲಿಸುವ ಹೆಚ್ಚಿನ ಅಲೆಗಳುಳ್ಳ, (ಬ್ರಹ್ಮಣ್ಯತೀರ್ಥರು) ಪ್ರಣತಜನರನ್ನು ಇಷ್ಟಾರ್ಥಪೂರ್ಣರನ್ನಾಗಿ ಮಾಡಲಿ.

ಶ್ರೀಮಧ್ವಮುನಿವಂಶಾಬ್ಧಿಚಂದ್ರಾಯಿತನಿಜಾಕೃತಿಃ ।
ಜಯಧ್ವಜಕರಾಬ್ಜೋತ್ಥಪುರುಷೋತ್ತಮಪುತ್ರಕಃ ॥ ೭ ॥

ಬ್ರಹ್ಮಣ್ಯತೀರ್ಥಗುರುರಾಟ್ ದದಾತು ಜ್ಞಾನಮುತ್ತಮಮ್ ।
ಸಂಸಾರಕ್ಲೇಶನಾಶಂ ಚ ಸಾಧಯೇತ್ಸಿದ್ಧಪುಂಗವಃ ॥ ೮ ॥

ಶ್ರೀಮಧ್ವಮುನಿಗಳ ವಂಶಾವಳಿಯೆಂಬ ಸಮುದ್ರಕ್ಕೆ ಚಂದ್ರಮನಂತಿರುವ ಸ್ವರೂಪವುಳ್ಳ, ಜಯಧ್ವಜತೀರ್ಥರ ಕರಕಮಲಸಂಜಾತರಾದ, ಪುರುಷೋತ್ತಮ ಯತಿಗಳ ವರಪುತ್ರರಾದ, ಬ್ರಹ್ಮಣ್ಯತೀರ್ಥಗುರುರಾಜರು ಅತಿಶ್ರೇಷ್ಠವಾದ ಜ್ಞಾನವನ್ನು ದಯಪಾಲಿಸಲಿ; ಮಂತ್ರತಂತ್ರಾದಿ ಜ್ಞಾನಸಿದ್ಧಶ್ರೇಷ್ಠರಾದ ಅವರು ನನ್ನ ಸಾಂಸಾರಿಕ ದುಃಖವನ್ನು ಪರಿಹರಿಸಲಿ.

ವಾದೀಂದ್ರಕುಂಭದಳನೇ ಬ್ರಹ್ಮಣ್ಯಯತಿರಾಡ್ಗಜಃ ।
ಹೃದಾರಾಮಸ್ಥಿತಾಘೇಕ್ಷುದಂಡಂ ಖಂಡಯತಾದ್ದೃಢಮ್ ॥ ೯ ॥

[ತನ್ನ ಗಮನ (ಸಂಚಾರ)ಕ್ಕೆ ಅಡ್ಡಬರುವ ಗಜದ ಕುಂಭಸ್ಥಳವನ್ನು ಸಲಗವು ಹೇಗೆ ತನ್ನ ಕುಂಭಸ್ಥಳದಿಂದ ಡಿಕ್ಕಿಕೊಟ್ಟು ಅದರ ಕುಂಭ ಸ್ಥಳವನ್ನು ಭೇದಿಸಿ, ತಾನೇ ತಾನಾಗಿ ಮುಂದೆ ಸಾಗುತ್ತದೋ, ಹಾಗೆ] ಶ್ರೀ ಬ್ರಹ್ಮಣ್ಯತೀರ್ಥ ಯತಿರಾಜ ಗಜವು ಇದಿರು ಬೀಳುವ ವಾದಿಶ್ರೇಷ್ಠಗಜದ ಕುಂಭಸ್ಥಳವನ್ನು ಭೇದಿಸಿ ಅಂದರೆ ಪರವಾದಿಗಳನ್ನು ವಾದದಿಂದ ಸೋಲಿಸಿ, ತನ್ನ ಸಿದ್ಧಾಂತದಲ್ಲಿ ಸಂಸ್ಥಿತರು. ಇಂತಹ ಯತಿಶ್ರೇಷ್ಠಗಜವು ನನ್ನ ಮನಸ್ಸೆಂಬ ತೋಟದಲ್ಲಿರುವ ಪಾಪಗಳನ್ನು, ಆನೆಯು ಕಬ್ಬಿನ ಜಲ್ಲೆಗಳನ್ನು ಲೀಲಾಜಾಲವಾಗಿ ಮುರಿದೆಸೆಯುವಂತೆ ನಿರ್ನಾಮ ಮಾಡಲಿ.

ದಯಾಲೋರ್ಗೇಯಚರಿತಾದ್ಬ್ರಹ್ಮಣ್ಯವರಸದ್ಗುರೋಃ ।
ಕೋಽನ್ಯಃಸರ್ವೇಷ್ಟದೋಽಸ್ಮಾಕಮಧುನಾ ಧರಣೀತಲೇ ॥ ೧೦ ॥

ದಯಾಳುಗಳೂ ಗೇಯಚರಿತ್ರರೂ ಆದ, ಬ್ರಾಹ್ಮಣಶ್ರೇಷ್ಠಧರ್ಮವುಳ್ಳ ಸದ್ಗುರುಗಳಾದ ಬ್ರಹ್ಮಣ್ಯತೀರ್ಥರಿಗಿಂತ ಬೇರೆ ಯಾರು ನಮಗೆ ಈಗ ಧರಣೀತಲದಲ್ಲಿ ಸರ್ವೇಷ್ಟವನ್ನು ಕೊಡತಕ್ಕವರಾಗಿದ್ದಾರೆ? (ಯಾರೂ ಇಲ್ಲ).

ಬ್ರಹ್ಮಣ್ಯಗುರುರಾಜಾಯ ನಮೋಽಜ್ಞಾನನಿವಾರಿಣೇ ।
ನಮೋ ನಮೋ ವ್ಯಾಸರಾಜಗುರವೇಽಖಿಲಸಂಪದೇ ॥ ೧೧ ॥

ಅಜ್ಞಾನವನ್ನು ಪರಿಹರಿಸುವ, ವ್ಯಾಸರಾಜರಿಗೆ ಗುರುಗಳಾದ, ಬ್ರಹ್ಮಣ್ಯ ಗುರುರಾಜರಿಗೆ ಅಖಿಲಸಂಪತ್ಪ್ರಾಪ್ತಿಗಾಗಿ ಆದರಪೂರ್ವಕ ನಮಸ್ಕಾರಗಳು.

"ಬ್ರಹ್ಮಣ್ಯತೀರ್ಥಾಯ ನಮಃ"* ಇತ್ಯಷ್ಟಾಕ್ಷರಮಂತ್ರಕಮ್ ।
ಜಪಿತಾಮಿಷ್ಟಸರ್ವಸ್ವಂ ಕರಗಂ ಸ್ಯಾದಸಂಶಯಮ್ ॥ ೧೨ ॥

"ಬ್ರಹ್ಮಣ್ಯತೀರ್ಥಾಯ ನಮಃ"— ಎಂಬ ಅಷ್ಟಾಕ್ಷರಮಂತ್ರವನ್ನು ಜಪಿಸುವವರಿಗೆ, ಸರ್ವಸ್ವವೂ ಕರಗತವಾದಂತೆಯೇ—ಸಂಶಯವಿಲ್ಲ.

ನಿವರ್ತಂತೇಽಖಿಲಾರೋಗಾಃ ಕುಷ್ಠಾಪಸ್ಮಾರಪೂರ್ವಕಾಃ ।
ಭ್ರಮಸಂಶಯಪೂರ್ವಾಶ್ಚ ಮನೋದೋಷಾಶ್ಚಯೇಽಖಿಲಾಃ ॥ ೧೩ ॥

ಕುಷ್ಠ ಅಪಸ್ಮಾರವೇ ಮೊದಲಾದ ಸರ್ವರೋಗಗಳೂ, ಭ್ರಾಂತಿ, ಸಂಶಯವೇ ಮೊದಲಾದ ಸರ್ವಮನೋದೋಷಗಳೂ, ನಿವೃತ್ತಿಹೊಂದುವುವು.

ಪ್ರವರ್ತಂತೇ ಸುತಾಃಪೌತ್ರಾ ಧನಧಾನ್ಯಗವಾದಯಃ ।
ಜ್ಞಾನವಿಜ್ಞಾನಪೂರ್ವಾಶ್ಚ ಮನೋಧರ್ಮಾಃಶುಭಾಶ್ಚ ಯೇ ॥ ೧೪ ॥

ಪುತ್ರ, ಪೌತ್ರ, ಧನ, ಧಾನ್ಯ, ಗೋ ಮೊದಲಾದವುಗಳೂ, ಸಾಮಾನ್ಯಜ್ಞಾನ, ಶಾಸ್ತ್ರಜ್ಞಾನಪೂರ್ವಕಗಳಾದ ಎಲ್ಲ ಶುಭಮನೋಧರ್ಮಗಳೂ ಉಂಟಾಗುತ್ತವೆ.

ಬ್ರಹ್ಮಣ್ಯಗುರುರಾಜ ತ್ವಾಂ ವೃಂದಾವನವಿಲಾಸಿನಮ್ ।
ಕುರ್ವನ್ ಪ್ರದಕ್ಷಿಣಂ ವಂದೇ ತೀರ್ಥಯಾತ್ರಾಫಲಾಪ್ತಯೇ ॥ ೧೫ ॥

ಬ್ರಹ್ಮಣ್ಯಗುರುರಾಜರೇ! ವೃಂದಾವನದಲ್ಲಿ ವಿಹರಿಸುವ ನಿಮ್ಮನ್ನು ಕುರಿತು, ತೀರ್ಥಯಾತ್ರೆಗಳ ಸಂಚಾರದ ಫಲಪ್ರಾಪ್ತಿಗೋಸ್ಕರ ಪ್ರದಕ್ಷಿಣಪೂರ್ವಕ ನಮಸ್ಕರಿಸುವೆನು ಮತ್ತು ಸ್ತುತಿಸುವೆನು.

ಕಾಯವಾಗ್ಧೀಭವಾನ್ ದೋಷಾಂಸ್ತ್ವವ ವೃಂದಾವನೋದಕಮ್ ।
ತ್ರಿಃಪೀತಂ ನಾಶಯೇನ್ಮೂರ್ಧ್ನಾ ಧೃತಂ ಪುಣ್ಯಂ ಸಮೇಧಯೇತ್ ॥ ೧೬ ॥

ನಿಮ್ಮ ವೃಂದಾವನಜಲದ ಮೂರಾವರ್ತಿ ಪ್ರಾಶನದಿಂದ, ಶರೀರ ವಾಕ್ ಮನಸ್ಸೆಂಬ ತ್ರಿಕರಣಗಳ ದೋಷಗಳು ನಾಶವಾಗುವುವು ಮತ್ತು ಶಿರಸ್ಸಿನಲ್ಲಿ ಧಾರಣಮಾಡಲ್ಪಟ್ಟರೆ, ಪುಣ್ಯವು ಅಭಿವೃದ್ಧಿಯಾಗುವುದು.

ಖಿನ್ನವಿನ್ನ ಜಪದ್ವೀಪ ಪೂತವಾತಮತಸ್ಥಿತ ।
ಶ್ರೀ ಬ್ರಹ್ಮವ್ರತಗಣ್ಯೋಽಗಯೋಗವ್ರತ ತಪಸ್ನವ ॥ ೧೭ ॥

ಖಿನ್ನವಿನ್ನ = ರೋಗಾದಿಪೀಡಿತರಾದವರಿಂದ ಅಥವಾ ಸಂಸಾರ ಕ್ಲೇಶದಿಂದ

* ಮಂತ್ರ ಜಪಮಾಡುವಾಗ, ಮಂತ್ರದ ಹಿಂದೆ ಮತ್ತು ಮುಂದೆ "ಓಂ"ಕಾರವನ್ನು ಜೋಡಿಸಿ ಹೇಳಬೇಕು.

ಖಿನ್ನರಾದ ಜನರಿಂದ ಆಶ್ರಿತರಾದವರೇ ಅಥವಾ ದುಃಖನಾಶಕರೆಂದು ವಿಚಾರಿತರಾದವರೇ, ಜಪದ್ವೀಪ = ತಪಸ್ವಿಶ್ರೇಷ್ಠರೇ ಅಥವಾ ಜಪಿಸುವವರಿಗೆ ಜ್ಞಾನಾದಿಪ್ರಕಾಶಕರೇ, ಪೂತವಾತಮತಸ್ಥಿತ = ಪರಮಪವಿತ್ರವಾದ ಮುಖ್ಯ ಪ್ರಾಣಾವತಾರಭೂತರಾದ ಮಧ್ವಾಚಾರ್ಯರ ಮತದಲ್ಲಿ ಸಂಸ್ಥಿತರಾದವರೇ, ಅಗಯೋಗವ್ರತ = ಅಚಲವಾದ ಧ್ಯಾನಯೋಗವೆಂಬ ವ್ರತವನ್ನು ಕೈಗೊಂಡವರೇ, ಅಥವಾ ಅಕಾರಶಬ್ದವಾಚ್ಯನಾದ ಪರಮಾತ್ಮಸಂಬಂಧಿಯೋಗವನ್ನೇ ವ್ರತವಾಗಿ ವುಳ್ಳವರೇ, (ಎಲೈ ಬ್ರಹ್ಮಣ್ಯತೀರ್ಥರೇ!) ಶ್ರೀ ಬ್ರಹ್ಮವ್ರತಗಣ್ಯಃ = ಶ್ರೀದೇವೀ ಸಹಿತನಾದ ವಿಷ್ಣ್ವಾಖ್ಯಪರಬ್ರಹ್ಮನಿಗೆ ಪ್ರೀತಿಕರವಾದ ಏಕಾದಶ್ಯುಪವಾಸ ಹರಿಸರ್ವೋತ್ತಮತ್ವ ಸಾಧನಾದಿವ್ರತಗಳಿಂದ ಗಣ್ಯರು (ತಾವು). ತಪನ್ = ತಪಸ್ಸನ್ನು ಮಾಡುವವರಾಗಿ ಅಥವಾ ಶತ್ರುಗಳನ್ನು ಪರಿತಪಿಸುವವರಾಗಿ ಅಥವಾ ವಾದಿಗಳನ್ನು ಜಯಿಸುವವರಾಗಿ ಅಥವಾ ಭಕ್ತರ ಪಾಪಗಳನ್ನು ನಾಶಪಡಿಸುವ ವರಾಗಿ, ಅವ = (ನಮ್ಮನ್ನು) ರಕ್ಷಿಸಿರಿ. (ಈ ಶ್ಲೋಕದಲ್ಲಿ 'ತಪನ್' ಎಂಬ ವಿಶೇಷಣದಿಂದ ಬ್ರಹ್ಮಣ್ಯತೀರ್ಥರು ಸೂರ್ಯಾಂಶಸಂಭೂತರೆಂಬುದು ಧ್ವನಿತ ವಾಗುತ್ತದೆ. ವ್ಯಾಖ್ಯಾನರೀತ್ಯಾ ಅರ್ಥವನ್ನು ಮುಂದೆ ಕೊಡಲಾಗಿದೆ.)

ಧ್ಯಾಯಾಮಿ ಕಾಷಾಯಸುಚೇಲಮೀಡ್ಯಂ
ಧ್ಯಾಯಂತಮಂತಃ ಖಲು ವಿಟ್ಠಲಂ ತಂ ।
ಬ್ರಹ್ಮಣ್ಯತೀರ್ಥಂ ವರಬೋಧಮುದ್ರಂ
ವೃಂದಾವನಸ್ಥಂ ರವಿತುಲ್ಯಮೂರ್ತಿಮ್ ॥ ೧೮ ॥

ಶ್ರೇಷ್ಠವಾದ ಕಾಷಾಯವಸ್ತ್ರವುಳ್ಳ, ಸ್ತುತ್ಯರಾದ, ಹೃದಯದಲ್ಲಿ ವಿಟ್ಠಲ ಮೂರ್ತಿಯನ್ನು ಧ್ಯಾನಿಸುವ, (ಶ್ರೇಷ್ಠವಾದ)ವರಪ್ರದವಾದ ಜ್ಞಾನಮುದ್ರೆಯುಳ್ಳ, ಸೂರ್ಯಸಮಾನತೇಜೋಮೂರ್ತಿಗಳಾದ, ವೃಂದಾವನಸಂಸ್ಥಿತರಾದ ಬ್ರಹ್ಮಣ್ಯ ತೀರ್ಥರನ್ನು ಧ್ಯಾನಮಾಡುತ್ತೇನೆ.

ಕದಾ ಮುದಾ ಪೀಠವರೇ ವಸಂತಂ
ಲಸಂತಮಂತಃಕೃಪಯಾದ್ರ್ರಚಿತ್ತಂ ।
ಇಷ್ಟಾರ್ಥದಾನೋದ್ಯತಪಾಣಿಪದ್ಮಂ
ಬ್ರಹ್ಮಣ್ಯತೀರ್ಥಂ ಸುದೃಶಾವಲೋಕೇ ॥ ೧೯ ॥

ಉತ್ತಮವಾದ ಪೀಠದಲ್ಲಿ ಕುಳಿತು ವಿರಾಜಮಾನರಾದ, ಅಂತಃಕರಣದಿಂದ ಆರ್ದ್ರಚಿತ್ತರಾದ, ಅಭೀಷ್ಟದಾನದಲ್ಲಿ ಎತ್ತಿದ ಹಸ್ತಕಮಲವುಳ್ಳ ಬ್ರಹ್ಮಣ್ಯ ತೀರ್ಥರನ್ನು ನನ್ನೆರಡು ಕಣ್ಣುಗಳಿಂದ ಯಾವಾಗ, ಸಂತೋಷದಿಂದ ದರ್ಶನ ಪಡೆದೇನು! (ಶ್ರೀಗಳವರು ಬೇಗ ದರ್ಶನಕೊಡಲೆಂಬ ಹಂಬಲದ ಮಾತಿದು).

ಗಂಭೀರಸಂಸಾರಸಮುದ್ರಪಾರಂ ತರೀತುಕಾಮಸ್ಯ ಜನಸ್ಯಲೋಕೇ ।
ಬ್ರಹ್ಮಣ್ಯತೀರ್ಥೋಡುಪಮಂತರೇಣ
ನ ಸ್ಯಾದುಪಾಯಾಂತರಮತ್ರ ನೂನಮ್ ॥ ೨೦ ॥

ಅಗಾಧವಾದ ಸಂಸಾರಸಮುದ್ರವನ್ನು ದಾಟಲಿಚ್ಛಿಸುವ ಜನರಿಗೆ, ಲೋಕದಲ್ಲಿ ಬ್ರಹ್ಮಣ್ಯತೀರ್ಥರೆಂಬ ತೆಪ್ಪವನ್ನುಳಿದು ನಿಶ್ಚಯವಾಗಿಯೂ ಬೇರೆ ಸುಲಭ ಸಾಧನವಿಲ್ಲ.

ಬ್ರಹ್ಮಣ್ಯಯತಿರಾಜ ತ್ವಾಂ ಶರಣಂ ಗತವಾನಹಮ್ ।
ಕರಾವಲಂಬನಂ ದೇಹಿ ಪತಿತಸ್ಯ ಭವಾರ್ಣವೇ ॥ ೨೧ ॥

ಬ್ರಹ್ಮಣ್ಯತೀರ್ಥಯತಿರಾಜರೇ! ನಿಮ್ಮನ್ನು ನಾನು ರಕ್ಷಕರನ್ನಾಗಿ ಮೊರೆ ಹೊಂದಿದ್ದೇನೆ. ಜನನಮರಣರೂಪಸಂಸಾರದಲ್ಲಿ ಬಿದ್ದಿರುವ ನನ್ನನ್ನು ಕೈ ಹಿಡಿಯಿರಿ.

ಇತಿ ಸ್ತೋತ್ರೇಣ ಯೋ ಮರ್ತ್ಯಃ ಸೇವತೇ ಗುರುಪುಂಗವಮ್ ।
ಅಶೇಷಕಷ್ಟರಾಹಿತ್ಯಮಿಷ್ಟಲಾಭಂ ಚ ವಿಂದತೇ ॥ ೨೨ ॥

ಈ ಪ್ರಕಾರ ಸ್ತೋತ್ರದಿಂದ ಯಾವಾತನು ಗುರುಶ್ರೇಷ್ಠರನ್ನು ಸೇವಿಸುತ್ತಾನೋ, ಆತನು ಎಲ್ಲಕಷ್ಟಗಳಿಂದ ಪಾರಾಗುತ್ತಾನೆ; ಇಷ್ಟಾರ್ಥವನ್ನು ಹೊಂದುತ್ತಾನೆ.

ಸ್ತುತ್ಯಾನಯೋದಕಂ ಜಪ್ತ್ವಾ ಪಿಬನ್ನುದರಪೀಡಯಾ ।
ವಿಮುಕ್ತಃ ಸುಖಮಾಪ್ನೋತಿ ದೀರ್ಘಮಾಯುಶ್ಚ ವಿಂದತಿ ॥ ೨೩ ॥

ಈ ಸ್ತುತಿಯಿಂದ ಜಲವನ್ನು ಅಭಿಮಂತ್ರಿಸಿ ಪ್ರಾಶನಮಾಡುವವನು ಉದರ ಶೂಲೆಯಿಂದ ರಹಿತನಾಗಿ ಸುಖವನ್ನು ಹೊಂದುವನು; ಹಾಗೂ ದೀರ್ಘಾಯು ವಾಗುವನು.

ಅಷ್ಟೋತ್ತರಶತಂ ಸ್ತೋತ್ರಮೇತತ್ಪುಣ್ಯೇಽಹನಿ ದ್ವಿಜಃ ।
ಜಪನ್ ಭೂತಾದಿಪೀಡಾಭಿರ್ಮುಚ್ಯತೇ ನಾತ್ರ ಸಂಶಯಃ ॥ ೨೪ ॥

ಈ ಸ್ತೋತ್ರವನ್ನು ಗುರುವಾರ, ಭಾನುವಾರ (ಪುಷ್ಯನಕ್ಷತ್ರ ಸಹಿತ ಭಾನುವಾರ ವಿಶೇಷಫಲಕ) ಜನ್ಮನಕ್ಷತ್ರ, ಪೂರ್ಣಿಮಾ ಇತ್ಯಾದಿ ಪರ್ವಕಾಲ ಗಳಲ್ಲಿ ನೂರೆಂಟು ಸಲ ಜಪಿಸುವವನು, ಭೂತಾದಿಗಳ ಬಾಧೆಗಳಿಂದ ಬಿಡಲ್ಪಡುವ ವನು; ಸಂದೇಹವಿಲ್ಲ.

ವೃಂದಾವನಸ್ಥಂ ಬ್ರಹ್ಮಣ್ಯಗುರುರಾಜಂ ಸ್ತುವನ್ ಸ್ಮರೇತ್ ।
ತಸ್ಯ ಸರ್ವೇಷ್ಟಲಾಭಃಸ್ಯಾದತ್ರ ಸಾಕ್ಷೀ ನೃಕೇಸರೀ ॥ ೨೫ ॥

ವೃಂದಾವನಸ್ಥಿತರಾದ ಬ್ರಹ್ಮಣ್ಯಗುರುರಾಜರನ್ನು ಸ್ತೋತ್ರ ಮಾಡುತ್ತಾ ಸ್ಮರಿಸತಕ್ಕವನಿಗೆ ಸರ್ವೇಷ್ಟಲಾಭವಾಗುವುದು. ಈ ವಿಷಯದಲ್ಲಿ ಶ್ರೀನರಸಿಂಹ ದೇವನೇ ಸಾಕ್ಷಿಯು.

ಇತಿ ಬ್ರಹ್ಮಣ್ಯತೀರ್ಥಾರ್ಯಗುರುವರ್ಯಕೃಪಾಬಲಾತ್ ।
ರಚಿತಂ ಶ್ರೀನಿವಾಸೇನ ತೇನ ಸ ಪ್ರೀಯತಾಂ ಹರಿಃ ॥ ೨೬ ॥

ಇತಿ ಶ್ರೀಮದ್ವ್ಯಾಸರಾಜಗುರುಶ್ರೀಬ್ರಹ್ಮಣ್ಯತೀರ್ಥ ಸ್ತೋತ್ರಂ ಸಂಪೂರ್ಣಮ್

ಈ ಪ್ರಕಾರ ಬ್ರಹ್ಮಣ್ಯತೀರ್ಥಗುರುವರ್ಯರ ಕೃಪಾಬಲದಿಂದ, ಶ್ರೀನಿವಾಸ ನಾಮಕನಿಂದ, (ಈ ಸ್ತೋತ್ರವು) ರಚಿತವಾಯಿತು. ಅದರಿಂದ ಶ್ರೀಹರಿಯು ಪ್ರೀತನಾಗಲಿ.

ಹೀಗೆ, ಶ್ರೀವ್ಯಾಸರಾಜರ ಗುರುಗಳಾದ ಬ್ರಹ್ಮಣ್ಯತೀರ್ಥ ಸ್ತೋತ್ರವು ಸಂಪೂರ್ಣವಾಯಿತು.

★ ★ ★

ವೃಂದಾವನ ಬಂಧಃ

ಬಂಧ ಶ್ಲೋಕ ವ್ಯಾಖ್ಯಾನಮ್

ಬಂಧಲಕ್ಷಣಂ ತು ॥

ಚತುರಸ್ರೇ ಮಧ್ಯಕೋಣೇ ವೀಥೀತ್ರಯಮಧೋನಯೇತ್ ।
ತಿರ್ಯಗ್ವೀಥೀತ್ರಯಂ ಚಾಪಿ ನವಕೋಣಾನ್ ಪ್ರಸಾಧಯೇತ್ ॥

ತದಧಸ್ತ್ರ್ಯಂಶವತ್ಕೋಣಂ ತದಧಸ್ತಾದ್ವ್ಯಹತ್ತಥಾ ।
ಸೋಪಾನಮೇಕಂ ತದಧಸ್ತಥೋಪರ್ಯೇಕಕೋಣಕಮ್ ॥

ತ್ರ್ಯಂಶಂ ತದೂರ್ಧ್ವಂ ಶೃಂಗಂ ಚ ಚತುರಸ್ರಂ ಲಿಖೇತ್ತತಃ ।
ಊರ್ಧ್ವದ್ವಿತೀಯಕೋಣಾದ್ಯಭಾಗಮಾರಭ್ಯ ವೈ ಲಿಖೇತ್ ॥

ಏಕೈಕಮಕ್ಷರಂ ತತ್ರ ದ್ವಿತೀಯೋಽಪಿ ಚತುರ್ಥತಃ ।
ಷಷ್ಠೋಽಷ್ಟಮೇನ ದಶಮೋ ದ್ವಾದಶೇನ ಚತುರ್ದಶಃ ॥

ಷೋಡಶೇನ ಚ ವಿಂಶೇನ ತಥಾಷ್ಟದಶ ಏಕತಾಮ್ ।
ದ್ವಾವಿಂಶಸ್ತು ಚತುರ್ವಿಂಶಾದೇಕತ್ವಂ ಭಜತೇ ಯಥಾ ॥

ವರ್ಣಮೇಕಂ ತು ಸೋಪಾನೇ ಮಧ್ಯವೀಥೀಷಡಕ್ಷರೈಃ ।
ಉಪೇತಂ ವರ್ಣಮೇಕಂ ಚ ಶೃಂಗೇ ತತ್ರಾಂತಿಮಂ ಲಿಖೇತ್ ॥
ಶ್ರೀವೃಂದಾವನಬಂಧೋಽಯಮುದ್ಧೃತೋಽನುಷ್ಟುಭಾ ಜಯೇತ್ ॥

	ವ	
ಖಿ	ನ್ನ	ವಿ
ಜ	ಪ	ದ್ದೀ
ಪೂ	ತ	ವಾ
ಮ	ತ	ಸ್ಥಿ
ಶ್ರೀ	ಬ್ರ	ಹ್ಮ
ತ	ಗ	ಣ್ಯೋ
	ಯೋ	

ಖಿನ್ನವಿನ್ನ ಜಪದ್ದೀಪ ಪೂತವಾತಮತಸ್ಥಿತ ।
ಶ್ರೀ ಬ್ರಹ್ಮಬ್ರ(ವ್ರ)ತಗಣ್ಯೋಽಗಯೋಗವ್ರ(ಬ್ರ)ತ ತಪನ್ನವ ॥

ಖಿನ್ನೇತಿ ॥ ಹೇ ಖಿನ್ನವಿನ್ನ! = ಖಿನ್ನೈರ್ದುಃಖಿತೈರ್ವಿನ್ನಪ್ರಾಪ್ತರೋಗಾದಿ ಪೀಡಿತೈಃ ಸಂಸಾರಖೇದಾಪನ್ನೈರ್ವಾ ತದ್ದುಃಖನಿವಾರಣಾಯ ಪ್ರಾಪ್ತೇತಿ ಯಾವತ್ ಅಥವಾ ಖಿನ್ನೈರ್ವಿಚಾರಿತಖೇದನಾಶಕೋಽಯಮಿತಿ ವಿಚಾರವಿಷಯೀ ಕೃತೇತ್ಯರ್ಥಃ ॥ "ವಿನ್ನವಿತ್ತೇ ವಿಚಾರಿತೇ" "ಲಬ್ಧಂ ಪ್ರಾಪ್ತಂ ವಿನ್ನಂ" ಇತ್ಯುಭಯತ್ರಾಪ್ಯಮರಃ ॥

ಹೇ ಖಿನ್ನವಿನ್ನ = ದುಃಖಿತರಾದವರಿಂದ ಅಥವಾ ರೋಗಾದಿಪೀಡಿತರಾದವರಿಂದ ಅಥವಾ ಸಂಸಾರಖೇದವನ್ನು ಹೊಂದಿರುವವರಿಂದ, ತದ್ದುಃಖ ನಿವಾರಣೆಗೋಸ್ಕರ ಆಶ್ರಿತರಾದವರೇ ಅಥವಾ ಖೇದನಾಶಕರೆಂದು ವಿಚಾರಿತರಾದವರೇ,

ಜಪದ್ದೀಪ॥ ಜಪತಾಂ ದೀಪ ಇವ, ಜಪಂ ಕುರ್ವತಾಂ ತಪಸ್ವಿನಾಂ ದೀಪ ಇವ ತಪಸ್ವಿಶ್ರೇಷ್ಠ ಇತಿ ಯಾವತ್ । ತತ್ಸಂಬುದ್ಧಿಃ ॥ ಜಪಂತಂ, ಆತ್ಮಾನಂ ಜಪಂತಂ ದೀಪಯತಿ ಪ್ರಕಾಶಯತಿ ಜ್ಞಾನಕೀರ್ತ್ಯಾದಿನೇತಿ ವಾ, ತತ್ಸಂಬುದ್ಧಿಃ ॥ ದೀಪ್ಯತ ಇತಿ ದೀಪಃ, ಜಪತ್ಸು ದೀಪಃ ಜಪದ್ದೀಪಃ, ಜಪತ್ಸು ಪ್ರಕಾಶಮಾನ ಇತ್ಯರ್ಥೋ ವಾ ॥

ಜಪದ್ದೀಪ = ಜಪಮಾಡತಕ್ಕ ತಪಸ್ವಿಗಳಲ್ಲಿ ಶ್ರೇಷ್ಠರಾದವರೇ ಅಥವಾ ತಮ್ಮನ್ನು ಕುರಿತು ಜಪವನ್ನು ಆಚರಿಸುವವರಿಗೆ ಜ್ಞಾನಕೀರ್ತ್ಯಾದಿ ಪ್ರಕಾಶಕರೇ ಅಥವಾ ತಮ್ಮನ್ನು ಕುರಿತು ಜಪಮಾಡತಕ್ಕವರಿಗೆ, ತಮ್ಮ ಸ್ವರೂಪವನ್ನು ತೋರಿಸತಕ್ಕವರೇ,

ಪೂತವಾತಮತಸ್ಥಿತ ॥ ಪವಿತ್ರೇ ವಾತಸ್ಯ ಮುಖ್ಯಪ್ರಾಣಸ್ಯ ಮತೇ ಸ್ಥಿತ ॥

ಪೂತವಾತಮತಸ್ಥಿತ = ಪರಮಪವಿತ್ರವಾದ, ಶ್ರೀಮುಖ್ಯಪ್ರಾಣಾವತಾರ ಭೂತರಾದ ಶ್ರೀಮನ್ಮಧ್ವಾಚಾರ್ಯರ ಮತದಲ್ಲಿ ಸಂಸ್ಥಿತರಾದವರೇ,

ಶ್ರೀಬ್ರಹ್ಮವ್ರತಗಣ್ಯಃ ॥ ಶ್ರಿಯಾಯುಕ್ತಂ ಯದ್ ಬ್ರಹ್ಮ ಪರಬ್ರಹ್ಮ ತಸ್ಯ ವ್ರತಂ, ಏಕಾದಶ್ಯುಪವಾಸತತ್ಸರ್ವೋತ್ತಮತ್ವಸಾಧನಾದಿವ್ರತಂ, ತಸ್ಮಿನ್ ಗಣ್ಯಃ ಗಣಯಿತುಂ ಯೋಗ್ಯಃ ಪರಬ್ರಹ್ಮವ್ರತಾಚರಣೇ ತದಾಚರಣೇನ ವಾ ಗಣನೀಯ ಇತ್ಯರ್ಥಃ ॥ ತ್ವಮಿತಿ ಶೇಷಃ ॥

ಶ್ರೀ ಬ್ರಹ್ಮವ್ರತಗಣ್ಯಃ = ಶ್ರೀದೇವೀಸಹಿತನಾದ ವಿಷ್ಣ್ವಾಖ್ಯಪರಬ್ರಹ್ಮನಿಗೆ ಪ್ರೀತಿಕರವಾದ ಏಕಾದಶ್ಯುಪವಾಸ ಹರಿಸರ್ವೋತ್ತಮತ್ವ ಸಾಧನಾದಿ ವ್ರತಗಳಿಂದ (ತಾವು) ಗಣನೀಯರು ಅಥವಾ ತಾದೃಶವ್ರತಾಚರಣೆಗಳಲ್ಲಿ (ತಾವು) ಅಗ್ರಗಣ್ಯರು.

ಅಗಯೋಗವ್ರತ ॥ ನ ಗಚ್ಛತೀತ್ಯಗಃ ಸ ಚಾಸೌ ಯೋಗಃ ಧ್ಯಾನಯೋಗಃ ಸ ಏವ ವ್ರತಂ ಯಸ್ಯ ತತ್ಸಂಬುದ್ಧಿಃ ಅಥವಾ'ಅಂ' ಪರಮಾತ್ಮಾನಂ ಗಚ್ಛತೀತ್ಯಗಃ ಪರಮಾತ್ಮಗಾಮೀ ಯೋಗಃ ಸ ಏವ ವ್ರತಂ ಯಸ್ಯೇತ್ಯರ್ಥಃ "ಅ ಇತಿ ಬ್ರಹ್ಮೇ"ತಿ ಶ್ರುತೇಃ ॥

ಅಗಯೋಗವ್ರತ = ಅಚಲವಾದ ಧ್ಯಾನಯೋಗವೆಂಬ ವ್ರತವನ್ನು ಕೈ ಕೊಂಡವರೇ ಅಥವಾ ಅಕಾರವಾಚ್ಯನಾದ ಪರಮಾತ್ಮಸಂಬಂಧಿಯೋಗವೇ ವ್ರತ ವಾಗುಳ್ಳವರೇ,

ತಪನ್ ॥ ತಪಃಕುರ್ವನ್, ಶತ್ರೂನ್ ತಪನ್ ವಾದೇನ ಜಯನ್ ವಾ ಅಥವಾ ಭಕ್ತಾಘಂ ತಪನ್ ನಾಶಯನ್ ಸನ್ ॥

ತಪನ್ = ತಪಸ್ಸನ್ನು ಮಾಡುವವರಾಗಿ ಅಥವಾ ಶತ್ರುಗಳನ್ನು ಪರಿತಪಿಸುವವರಾಗಿ ಅಥವಾ ವಾದಿಗಳನ್ನು ವಾದದಿಂದ ಜಯಿಸುವವರಾಗಿ ಅಥವಾ ಭಕ್ತರ ಪಾಪಗಳನ್ನು ನಾಶಪಡಿಸುವವರಾಗಿ,

ಅವ || ರಕ್ಷ—ಅಸ್ಮಾನಿತಿ ಶೇಷಃ ||

ಅವ = (ನಮ್ಮನ್ನು) ರಕ್ಷಿಸಿರಿ.

ತಪನ್ನಿತಿ ವಿಶೇಷಣಾತ್ ಸೂರ್ಯಾಂಶಸಂಭೂತತ್ವಂ ಧ್ವನ್ಯತೇ ||

ಬಂಧಮಧ್ಯೇ "ಶ್ರೀಬ್ರಹ್ಮಣ್ಯೋ" ಇತಿ ಪ್ರತಿಪಾದ್ಯಸ್ಯ ವಿಶೇಷ್ಯಂ। ನಾಮ ಲಭ್ಯತೇ, ತಚ್ಚ ಶ್ರೀಬ್ರಹ್ಮವ್ರತಗಣ್ಯ ಇತ್ಯನೇನಾನ್ವೀಯತಾಮ್ ||

ಸೂಚನೆ:

೧) ಈ ಶ್ಲೋಕದಲ್ಲಿ, "ತಪನ್" —ಎಂಬ ವಿಶೇಷಣದಿಂದ ಬ್ರಹ್ಮಣ್ಯ ತೀರ್ಥರು ಸೂರ್ಯಾಂಶಸಂಭೂತರೆಂಬುದು ಧ್ವನಿತವಾಗುತ್ತದೆ.

೨) ಈ ಶ್ಲೋಕವು "ಬೃಂದಾವನಬಂಧ"ದಿಂದ ರಚಿತವಾಗಿದೆ. ಬಂಧ ಮಧ್ಯದಲ್ಲಿ "ಶ್ರೀಬ್ರಹ್ಮಣ್ಯೋ" ಎಂಬುದಾಗಿ ಪ್ರತಿಪಾದ್ಯವಾದ ವಿಶೇಷ್ಯದ ನಾಮ (ನಿರ್ದೇಶಮಾಡಲ್ಪಟ್ಟಿರುವುದು) ದೊರಕುತ್ತದೆ. ಹಾಗೂ "ಶ್ರೀ ಬ್ರಹ್ಮಣ್ಯೋ" ಎಂಬ ಪದವು "ಶ್ರೀಬ್ರಹ್ಮವ್ರತಗಣ್ಯಃ"— ಎಂಬ ಪದದಿಂದ, ಅನ್ವಯಮಾಡಲ್ಪಡ ಬೇಕು.

★ ★ ★

ಶ್ರೀ ವ್ಯಾಸರಾಜವಿರಚಿತ

ಶ್ರೀ ಬ್ರಹ್ಮಣ್ಯತೀರ್ಥ ಪಂಚರತ್ನಮಾಲಿಕಾ

ವಂದೇ ಬ್ರಹ್ಮಣ್ಯತೀರ್ಥಂ ಶುಭತಮಚರಿತಂ ಸೇವಿತಶ್ರೀಸಮೇತಮ್ ।
ಶಾಂತಂ ದಾಂತಂ ಮಹಾಂತಂ ಗುರುಗುಣಭರಿತಂ
ಯೋಗಿಸಂಘೈರುಪೇತಮ್ ॥
ಕಾಮಕ್ರೋಧಾದ್ಯತೀತಂ ಕುಮತಿಭಿರಜಿತಂ ಕಲ್ಮಷಾಂಭೋಧಿಪೋತಮ್ ।
ಧೀರಂ ಭೂದೇವಗೀತಂ ಶುಭಜನಮಹಿತಂ ಧನ್ಯಮಾನಂ ವಿನೀತಮ್ ॥ ೧ ॥

ಶುಭತಮಚರಿತರಾದ, ಲಕ್ಷ್ಮೀಸಮೇತನಾದ ನಾರಾಯಣನನ್ನು ಸೇವಿಸಿದವರೂ, ಶಾಂತರೂ, ದಾಂತರೂ, ಮಹಾತ್ಮರೂ, ಗುರುಗುಣಭರಿತರೂ, ಯೋಗಿಸಮೂಹಸಮೇತರೂ, ಕಾಮಕ್ರೋಧಾದಿಗಳನ್ನು ಅತಿಕ್ರಮಿಸಿದವರೂ, ಕುಮತಿಗಳ ಸಂಬಂಧರಹಿತರೂ, ದುರ್ವಾದಿಗಳನ್ನು ಗೆದ್ದವರೂ, ಪಾಪಾಂಬುಧಿಯನ್ನು ದಾಟಿಸಲು ತೆಪ್ಪದಂತೆ ಇರುವವರೂ, ಧೀರರೂ, ಭೂಸುರರಿಂದ ಗೀತರೂ, ಸುಜನರಿಂದ ಮಹಿತರೂ, ಶ್ಲಾಘ್ಯವಾದ ಜ್ಞಾನವುಳ್ಳವರೂ, ವಿನೀತರೂ ಆದ, ಬ್ರಹ್ಮಣ್ಯತೀರ್ಥರನ್ನು ವಂದಿಸುತ್ತೇನೆ.

ಮಾದ್ಯನ್ಮಾಯಿಗಜೇಂದ್ರಪಂಚವದನಃ ಪ್ರಖ್ಯಾತಕೀರ್ತಿರ್ಮಹಾನ್ ।
ಶ್ರೀಮದ್ವಿಟ್ಠಲಪಾದಪದ್ಮಮಧುಪಃ ಸರ್ವೇಷ್ಟಚಿಂತಾಮಣಿಃ ॥
ನಿರ್ವ್ಯಾಜೋರುದಯಾಕಟಾಕ್ಷಲಸಿತೋ ಜ್ಞಾನಾದಿಭಾಗ್ಯೋಜ್ವಲಃ ।
ಶ್ರೀಬ್ರಹ್ಮಣ್ಯಯತೀಂದ್ರಮಸ್ತಕಮಣಿಃ ಪಾಯಾದಪಾಯಾತ್ಸ ಮಾಮ್ ॥ ೨ ॥

ಮದಿಸಿದ ಮಾಯಾವಾದಿಗಳೆಂಬ ಗಜೇಂದ್ರಗಳಿಗೆ ಸಿಂಹಸದೃಶರೂ, ಪ್ರಖ್ಯಾತಕೀರ್ತಿವಂತರೂ, ಉತ್ತಮರೂ, ಶ್ರೀಮದ್ವಿಟ್ಠಲನ ಪಾದಕಮಲಭೃಂಗಾಯಮಾನರೂ, ಸರ್ವರ ಇಷ್ಟವನ್ನು ನೆರವೇರಿಸುವ ಚಿಂತಾಮಣಿಗಳೂ, ನಿರ್ವ್ಯಾಜವೂ ಪೂರ್ಣವೂ ಆದ ಕೃಪಾಕಟಾಕ್ಷದಿಂದ ಶೋಭಿತರೂ, ಜ್ಞಾನಾದಿ ಸಂಪತ್ತುಗಳಿಂದ ಪ್ರಕಾಶಮಾನರೂ ಆದ ಶ್ರೀಬ್ರಹ್ಮಣ್ಯತೀರ್ಥಯತೀಂದ್ರಶಿರೋಮಣಿಗಳು ನನ್ನನ್ನು ಅಪಾಯಗಳಿಂದ ಪಾರುಮಾಡಲಿ.

ಭಿಭ್ರತ್ಕಾಷಾಯಚೇಲಂ ವಿಲಸಿತತುಲಸೀಪಂಕಜಾಕ್ಷಾದಿಮಾಲಮ್ ।
ಧೂತಾಜ್ಞಾನಾಘಜಾಲಂ ಮೃದುವಚನಕಲಂ ಚಾರುಸೌಂದರ್ಯಶೀಲಮ್ ॥
ಆರ್ತತ್ರಾಣೈಕಲೋಲಂ ಪ್ರಣತಮುನಿಕುಲಂ ವೈಷ್ಣವಾಗ್ರ್ಯಾನುಕೂಲಮ್ ।
ಬ್ರಹ್ಮಣ್ಯಾರ್ಯಂ ದಯಾಲುಂ ಸ್ಮಿತಮುಖಕಮಲಂ ಸಾದರಂ ತಮ್
ಭಜೇಽಲಮ್ ॥ ೩ ॥

ಕಾಷಾಯವಸ್ತ್ರವನ್ನು ಧರಿಸಿರುವವರೂ, ಉತ್ತಮವಾದ ತುಲಸೀ ಮತ್ತು ಪ್ರಕಾಶಮಾನವಾದ ಕಮಲಾಕ್ಷಾದಿಮಣಿಮಾಲೆಗಳನ್ನುಳ್ಳವರೂ, ಅಜ್ಞಾನ ಮತ್ತು ಪಾಪಜಾಲಗಳನ್ನು ಪರಿಹರಿಸುವವರೂ, ಹಿತವಚನಕಲಾಭಿಜ್ಞರೂ, ಸ್ವಭಾವತಃ ಪರಮಸುಂದರರೂ, ಆರ್ತರನ್ನು ರಕ್ಷಿಸುವುದರಲ್ಲೇ ಪರಮಾಸಕ್ತಿಯುಳ್ಳವರೂ, ಮುನಿಸಮುದಾಯದಿಂದ ನಮಸ್ಕೃತರೂ, ವೈಷ್ಣವರಿಗೆ ಶ್ರೇಷ್ಠವಾದ ಸೌಕರ್ಯಕರರೂ, ಮಂದಹಾಸದಿಂದ ಕೂಡಿದ ಮುಖ ಕಮಲವುಳ್ಳವರೂ, ಅನುಗ್ರಹಕರರೂ ಆದ, ಬ್ರಹ್ಮಣ್ಯತೀರ್ಥರನ್ನು ವಿಶೇಷ ಮರ್ಯಾದಾಪೂರ್ವಕ ಸಂಪೂರ್ಣಮನಸ್ಸಿನಿಂದ ಭಜಿಸುತ್ತೇನೆ.

ಯದ್ವೃಂದಾವನದರ್ಶನೇನ ನಿತರಾಂ ಪಾಪಾನಿ ಯಾಂತಿ ಕ್ಷಯಮ್ ।
ಯದ್ವೃಂದಾವನಮೃತ್ತಿಕಾ ಸುವಿಧೃತಾ ತಾಪತ್ರಯಧ್ವಂಸಿನೀ ॥
ಯದ್ವೃಂದಾವನಸೇವಯಾ ಭುವಿ ಜನಃ ಪ್ರಾಪ್ನೋತಿ ವಿದ್ಯಾಂ ಸುಖಮ್ ।
ಸರ್ವಾರಿಷ್ಟನಿವೃತ್ತಯೇಽಸ್ತು ಸ ಚ ಮೇ ಬ್ರಹ್ಮಣ್ಯತೀರ್ಥೋ ಗುರುಃ ॥ ೪ ॥

ಯಾರ ವೃಂದಾವನದರ್ಶನದಿಂದ ಪಾಪಗಳು ನಿಶ್ಶೇಷವಾಗಿ ನಾಶಹೊಂದುವುವೋ, ಯಾರ ವೃಂದಾವನದ ಮೃತ್ತಿಕೆಯು ಭಕ್ತಿಪೂರ್ವಕ ಧರಿಸಲ್ಪಟ್ಟರೆ ತಾಪತ್ರಯಗಳನ್ನು ಧ್ವಂಸಮಾಡುವುದೋ, ಯಾರ ಬೃಂದಾವನ ಸೇವೆಯಿಂದ ಭೂಮಿಯಲ್ಲಿ ಜನರು ವಿದ್ಯಾ ಸುಖಗಳನ್ನು ಹೊಂದುವರೋ, ಅಂತಹ ಬ್ರಹ್ಮಣ್ಯತೀರ್ಥಗುರುಗಳು ನನ್ನ ದುರದೃಷ್ಟಗಳನ್ನು ನಿವೃತ್ತಿಮಾಡಲಿ.

ಕುಷ್ಠಶ್ವೇತೋರುಗುಲ್ಮ ಕ್ಷಯಕಠಿಣತರವ್ಯಾಧಿವೈದ್ಯಾಧಿನಾಥೋ ।
ಭೂತಪ್ರೇತಗ್ರಹೋಚ್ಚಾಟನಕುಶಲಮಹಾಮಂತ್ರಮೂರ್ತಿರ್ಮುನೀಂದ್ರಃ ॥
ಸರ್ವಾಭೀಷ್ಟಪ್ರದಾತಾ ಸರಸಸುಹೃದಯಃಪುಣ್ಯಚಾರಿತ್ರನಾಮಾ ।
ಭೂಯಾದ್ಬ್ರಹ್ಮಣ್ಯತೀರ್ಥೋ ಗುರುಕುಲತಿಲಕೋ ಭೂಯಸೇ ಶ್ರೇಯಸೇ
ಮೇ ॥ ೫ ॥

ಇತಿ ಶ್ರೀಮದ್ವ್ಯಾಸರಾಜ ವಿರಚಿತ ಶ್ರೀ ಬ್ರಹ್ಮಣ್ಯತೀರ್ಥ
"ಪಂಚರತ್ನಮಾಲಿಕಾ" ಸ್ತೋತ್ರಂ ಸಂಪೂರ್ಣಂ

ಕುಷ್ಠ (ಮಹಾರೋಗ), ಶ್ವೇತ (ತೊನ್ನು), ಮಹಾಗುಲ್ಮ (ಹೊಟ್ಟೆಯೊಳಗಿನ ಗಂಟುಬೇನೆ), ಕ್ಷಯ ಮೊದಲಾದ ಕಠಿಣತರವ್ಯಾಧಿಗಳನ್ನು ನಾಶಪಡಿಸುವ ವಿಷಯದಲ್ಲಿ ವೈದ್ಯಕುಲಗುರುಗಳಾದ, ಭೂತಪ್ರೇತಗ್ರಹಗಳನ್ನು ಓಡಿಸುವುದರಲ್ಲಿ ಸಮರ್ಥರಾದ, ಮಹಾಮಂತ್ರಗಳೇ ಮೂರ್ತಿವೆತ್ತಂತಿರುವ ಮುನೀಂದ್ರರೂ, ಸರ್ವಾಭೀಷ್ಟಪ್ರದಾತೃಗಳೂ, ಕರುಣಾರಸಪೂರ್ಣ ಹೃದಯರೂ, ಪುಣ್ಯಕರವಾದ ನಡೆನುಡಿಗಳಲ್ಲಿ ಹೆಸರಾಂತವರೂ, ಸ್ವಯಂ ಸಂಶಯರಹಿತರಾಗಿ ಮತ್ತೊಬ್ಬರ . ಸಂಶಯಗಳನ್ನು ನಿವಾರಿಸುವ ಜ್ಞಾನಿಗಳಿಗೆ ಭೂಷಣರೂ, ಗುರುಕುಲತಿಲಕರೂ ಆದ ಶ್ರೀಬ್ರಹ್ಮಣ್ಯತೀರ್ಥರು ನನ್ನ ಅಧಿಕವಾದ ಶ್ರೇಯಸ್ಸಿಗೆ ಕಾರಣರಾಗಲಿ.

ಹೀಗೆ ಶ್ರೀಮದ್ವ್ಯಾಸರಾಜರಿಂದ ವಿರಚಿತವಾದ ಶ್ರೀಬ್ರಹ್ಮಣ್ಯತೀರ್ಥ
"ಪಂಚರತ್ನಮಾಲಿಕಾ" ಸ್ತೋತ್ರವು, ಸಂಪೂರ್ಣವು.

★★★

ಶ್ರೀ ಶ್ರೀನಿವಾಸತೀರ್ಥವಿರಚಿತ

ಶ್ರೀ ಬ್ರಹ್ಮಣ್ಯತೀರ್ಥ ಮಂಗಲಾಷ್ಟಕಮ್

ಶ್ರೀಮಾನತ್ರ ದಿವಾಕರಃ ಕರುಣಯಾ ಬ್ರಹ್ಮೌಘವಾಂಛಾಕೃತೇ
ಶ್ರೀಮತ್ಪೂಗವನಾನ್ವವಾಯತಿಲಕಾದ್ರಾಮಾರ್ಯವಿಪ್ರೋತ್ತಮಾತ್ ॥
ಲಬ್ಧ್ವಾಜನ್ಮ ನೃಸಿಂಹಸೇವನರತಃಕ್ಷೋಣೀಸುಚಿಂತಾಮಣಿಃ ।
ಶ್ರೀಬ್ರಹ್ಮಣ್ಯ ಇತೀರಿತಃ ಸ ಭುವಿ ನಃ ಕುರ್ಯಾನ್ಮುನಿರ್ಮಂಗಲಮ್ ॥ ೧ ॥

ಶ್ರೀ ಸೂರ್ಯದೇವನೇ ಈ ಭೂಮಿಯಲ್ಲಿ ಬ್ರಾಹ್ಮಣವೃಂದದ ಅಭೀಷ್ಟ ಸಿದ್ಧಿಗೋಸ್ಕರ, ಕರುಣೆಯಿಂದ ಶ್ರೀಮತ್ಪೂಗವನ(ಅಡಿಕೆಯ ತೋಟ)ವೆಂಬ ವಂಶಕ್ಕೆ ತಿಲಕಪ್ರಾಯರಾದ ರಾಮಾಚಾರ್ಯರೆಂಬ ವಿಪ್ರೋತ್ತಮರಿಂದ ಜನ್ಮವನ್ನು ಪಡೆದು, ಶ್ರೀನೃಸಿಂಹನ ಸೇವೆಯಲ್ಲಿ ಆಸಕ್ತನಾಗಿ, ಭೂಮಿಯಲ್ಲಿ ಚಿಂತಾಮಣಿಪ್ರಾಯನಾಗಿ ಶ್ರೀಬ್ರಹ್ಮಣ್ಯತೀರ್ಥರೆಂಬುವುದಾಗಿ ಲೋಕದಲ್ಲಿ ಪ್ರಖ್ಯಾತನಾದನು. ಅಂತಹ ಬ್ರಹ್ಮಣ್ಯಮುನಿಗಳು ಭೂಮಿಯಲ್ಲಿರುವ ನಮಗೆ ಮಂಗಲವನ್ನುಂಟುಮಾಡಲಿ.

ಪೂರ್ವಂ ಶುಭ್ರತನುಃಕಲಾನಿಧಿರಸೌ ಲೀಢಸ್ತಮೋಜಿಹ್ವಯಾ
ಮಾಲಿನ್ಯಸ್ಯ ವಶೋ ಯದೀಯಯಶಸಾಂ ತ್ರೈಲೋಕ್ಯಗಾನಾಂ ಕರೈಃ ।
ಧಾವಲ್ಯಂ ಪುನರಾಪ್ತವಾನಪಿ ಹ್ರಸತ್ಯನ್ಯಪ್ರಭಾಲಾಭತಃ
ಶ್ರೀಬ್ರಹ್ಮಣ್ಯಯತೀಶ್ವರಃ ಸ ಭುವಿ ನಃ ಕುರ್ಯಾತ್ಪರಂ ಮಂಗಲಮ್ ॥ ೨ ॥

ಶುಭ್ರ ಶರೀರವುಳ್ಳ ಚಂದ್ರನು, ಮೊದಲಿಗೆ ಕತ್ತಲೆಯ ಜಿಹ್ವೆಯಿಂದ ಗ್ರಸಿತನಾಗಿದ್ದು ಮಾಲಿನ್ಯಕ್ಕೆ ವಶನಾಗಿ, ಮೂರ್ಲೋಕದಲ್ಲಿಯೂ ಹರಡಿರುವ ಯಶಸ್ಸುಳ್ಳ ಯಾವ (ಈ) ಬ್ರಹ್ಮಣ್ಯತೀರ್ಥರೆಂಬ ಸೂರ್ಯನ ಕಿರಣಗಳಿಂದಲೇ (ಧಾವಲ್ಯ) ಶುಭ್ರತ್ವವನ್ನು ಪಡೆದನು. ಹಾಗಿದ್ದಾಗ್ಯೂ (ಶುಕ್ಲಪಕ್ಷವು ಮುಗಿಯಿತೆಂದರೆ) ದಿನೇ ದಿನೇ ಕ್ಷಯಿಸುವನು. ಇದಕ್ಕೆ ಕಾರಣವೆಂದರೆ, ಸ್ವಯಂ ಪ್ರಭೆಯಿಲ್ಲದೇ ಇನ್ನೊಬ್ಬರ ಪ್ರಭೆಯನ್ನು (ಪ್ರಕಾಶವನ್ನು) ಅವಲಂಬಿಸಿರುವುದು. ಭೂಮಿಯಲ್ಲಿ ಅಂತಹ (ಸ್ವಯಂ ಪ್ರಭಾವಂತರೂ, ಹಾಗೂ ಇತರರಿಗೆ ಪ್ರಭಾಪ್ರದರೂ ಎಂದು) ಪ್ರಸಿದ್ಧರಾದ ಶ್ರೀಬ್ರಹ್ಮಣ್ಯಯತೀಶ್ವರರು ನಮಗೆ ಪರಮಮಂಗಲವನ್ನುಂಟು ಮಾಡಲಿ.

ಯದ್ವಾದಾಭಿಧಸಿಂಹನಾದಮತುಲಂ ವಾದೀಂದ್ರದಂತಾವಲಾಃ ।
ಶೃಣ್ವಂತಃಕಿಲ ದೂರತೋಽಪಿ ಚಕಿತಾ ದಿಕ್ಕಂದರಂ ಪ್ರಾದ್ರವನ್ ॥
ಸೋಽಯಂ ಶ್ರೀಯತಿರಾಜಶೂರಮೃಗರಾಟ್ ವೃಂದಾವನೇ ಸಂವಸನ್ ।
ಶ್ರೀಬ್ರಹ್ಮಣ್ಯವರಾಭಿಧಃ ಸ ಭುವಿ ನಃ ಕುರ್ಯಾತ್ಪರಂ ಮಂಗಲಮ್ ॥ ೩ ॥

ಯಾರ ವಾದವೆಂಬ ಅತುಲಸಿಂಹನಾದವನ್ನು ಶ್ರವಣಮಾಡಿ ವಾದೀಂದ್ರರೆಂಬ ಗಜಗಳು, (ದಂತೀ ದಂತಾವಲೋ ಹಸ್ತೀ...(ಇತ್ಯಮರಃ) ದೂರದಿಂದಲೇ ಹೆದರಿ ದಿಕ್ಕುಗಳೆಂಬ ಗುಹೆಗಳನ್ನು ಕುರಿತು ಓಡಿದವೋ, ಅಂತಹ ಯತಿರಾಜ ಶೂರಸಿಂಹರಾಗಿರತಕ್ಕ ಬ್ರಹ್ಮಣ್ಯತೀರ್ಥರೆಂಬುವರು, ಬೃಂದಾವನದಲ್ಲಿ ವಾಸಿಸುತ್ತಾ, ಭೂಮಿಯಲ್ಲಿ (ಇರುವ) ನಮಗೆ ಸನ್ಮಂಗಲವನ್ನುಂಟುಮಾಡಲಿ.

ಯಸ್ಯಶ್ರೀಕರಪಂಕಜಾದೃತಮಹಾಮಂತ್ರಾಕ್ಷತೈಃಸಾಧಿತಾಃ ।
ಸರ್ವೇಽಭೀಷ್ಟಚಯಾಃಸುರದ್ರುಮವರೈರ್ದಾತುಂ ನ ಶಕ್ಯಾ ಹಿ ತೇ ॥
ಯದ್ವೃಂದಾವನಮೃತ್ತಿಕಾಧೃತಿರಹೋ ಕ್ರೂರಗ್ರಹೋದ್ಭಂಜಿಕಾ ।
ಶ್ರೀಬ್ರಹ್ಮಣ್ಯಯತೀಶ್ವರಃ ಸ ಭುವಿ ನಃ ಕುರ್ಯಾತ್ಪರಂ ಮಂಗಲಮ್ ॥ ೪ ॥

ಯಾರ ಸಂಪದ್ಯುಕ್ತವಾದ ಕರಕಮಲದಿಂದ ಅನುಗೃಹೀತಮಹಾಮಂತ್ರಾಕ್ಷತೆಗಳಿಂದ ಸಾಧಿತವಾದ ಸರ್ವಾಭೀಷ್ಟಸಮೂಹಗಳೇನುಂಟೋ, ಆ ಎಲ್ಲವನ್ನೂ ಕೊಡಲು (ಕಲ್ಪದ್ರುಮಾದಿ) ದೇವತರುಗಳಿಂದಲೂ ಶಕ್ಯವಿಲ್ಲ. ಯಾರ ವೃಂದಾವನಗತ ಮೃತ್ತಿಕಾಧಾರಣವು ಕ್ರೂರಗ್ರಹಗಳನ್ನೂ ಭಂಜನ ಮಾಡುವುದೋ, ಆಶ್ಚರ್ಯ! ಅಂತಹ ಬ್ರಹ್ಮಣ್ಯಯತೀಶ್ವರರು ಭೂಮಿಯಲ್ಲಿನ ನಮಗೆ ಉತ್ತಮ ಮಂಗಲವನ್ನುಂಟುಮಾಡಲಿ.

ಶ್ರೀಭಾಸ್ವಾನಪರೋಽಯಮಾಂತರತಮಸ್ತೋಮಸ್ಯ ಸಂಭೇದಕೋ ।
ಗೋಭಿಶ್ಚಿತ್ರಸುವರ್ಣರಮ್ಯತನುಭಿಃಸಾಧ್ವಬ್ಜಸಂಹರ್ಷಕಃ ॥
ಕಿಂಚಾತಿಗ್ಮರುಚಿರ್ಮನುಷ್ಯಸುದೃಶಾಂ ಹರ್ಷೇಣ ದೃಶ್ಯಾಕೃತಿಃ ।
ಶ್ರೀಬ್ರಹ್ಮಣ್ಯವರಾಭಿದಃ ಸ ಭುವಿ ನಃ ಕುರ್ಯಾತ್ಪರಂ ಮಂಗಲಮ್ ॥ ೫ ॥

ಹೃದಯಾಂತಸ್ಥಿತವಾದ (ಅಜ್ಞಾನವೆಂಬ) ತಮಸ್ಸಮೂಹವನ್ನು ಭೇದಿಸುವ ಇವರು, ಮತ್ತೊಬ್ಬ ಸಂಪದ್ಯುಕ್ತನಾದ ಸೂರ್ಯನೇ ಸರಿ. ಆಶ್ಚರ್ಯಕರವಾದ ಹೊಂಬಣ್ಣದ ರಮ್ಯಾಕೃತಿಯುಳ್ಳ ಕಿರಣಗಳಿಂದ, ಸಾಧುಗಳೆಂಬ ಕಮಲಗಳಿಗೆ (ಹರ್ಷ) ವಿಕಾಸವನ್ನುಂಟುಮಾಡುವವರು; ಮತ್ತು ಇವರು ಮನುಷ್ಯರ ಕಣ್ಣಿಗೆ ಹರ್ಷದಿಂದ ನೋಡಲು ಯೋಗ್ಯವಾದ ಸ್ವರೂಪವುಳ್ಳ, ಶಾಂತತೇಜೋಮೂರ್ತಿ

ಗಳು. ಇಂತಹ ಬ್ರಹ್ಮಣ್ಯತೀರ್ಥರು ಭೂಮಿಯಲ್ಲಿ ನಮಗೆ ಅತ್ಯಂತ ಮಂಗಲವನ್ನುಂಟುಮಾಡಲಿ.

ಸಂಸಾರಾಂಬುನಿಧೌ ತರಂಗನಿಚಯೈಃಸಂತಾಡಿತಾನಾಂ ಸತಾಮ್ ।
ನಿತ್ಯಂ ಪಾರಮಿತಃಪರಂ ಮೃಗಯತಾಮಾಲಂಬನಾಪೇಕ್ಷಿಣಾಮ್ ॥
ಜ್ಞಾನಾಭಿಖ್ಯದೃಢೋಡುಪೇನ ವಿಲಸನ್ ಸಂತಾರಕೋ ನಾವಿಕಃ ।
ಶ್ರೀಬ್ರಹ್ಮಣ್ಯವರಾಭಿಧಃ ಸ ಭುವಿ ನಃ ಕುರ್ಯಾನ್ಮನಿರ್ಮಂಗಲಮ್ ॥ ೬ ॥

ಸಂಸಾರಸಮುದ್ರದಲ್ಲಿ, ಅಲೆಗಳ ಸಮೂಹದ ಹೊಡೆತಕ್ಕೆ ಸಿಕ್ಕಿಬಿದ್ದು, ನಿತ್ಯವೂ ಇದರಿಂದಾಚೆಯ ದಡವನ್ನು ಹುಡುಕುತ್ತಾ, ಆಶ್ರಯವನ್ನು ಅಪೇಕ್ಷಿಸುವ ಸಜ್ಜನರಿಗೋಸ್ಕರ, ಜ್ಞಾನವೆಂಬ ಹೆಸರಿನ ದೃಢವಾದ ತೆಪ್ಪದಿಂದ ದಾಟಿಸಲು ಪ್ರಸಿದ್ಧ ನಾವಿಕನಂತಿರುವ ಶ್ರೀ ಬ್ರಹ್ಮಣ್ಯಮುನಿವರ್ಯರು, ನಮಗೆ ಭೂಮಿಯಲ್ಲಿ ಮಂಗಲವನ್ನುಂಟುಮಾಡಲಿ.

ಯದ್ವೃಂದಾವನಮಿಂದಿರೇಶಕರುಣಾವೃಂದಸ್ಯ ಸಂದಾಯಕಂ ।
ಮಂದಾರದ್ರುಮವಜ್ಜನೇಷ್ಟನಿಚಯಂ ಸಂಪಾದಯತ್ಪಾವನಮ್ ॥
ಸಾಂದ್ರಾನಂದಕದಂಬಮೂರ್ತಿರುಚಿರಂ ಸದ್ವೃಂದಸಂಸೇವಿತಂ ।
ಶ್ರೀಬ್ರಹ್ಮಣ್ಯವರಾಭಿಧಃ ಸ ಭುವಿ ನಃ ಕುರ್ಯಾನ್ಮನಿರ್ಮಂಗಲಮ್ ॥ ೭ ॥

(ಯದ್ವೃಂದಾವನಂ) = ಯಾರ ಪವಿತ್ರವಾದ ಬೃಂದಾವನವು, ಇಂದಿರೇಶನ ಕರುಣಾಸಮೂಹವನ್ನು ಸಾಧಿಸಿಕೊಡುವುದೋ, ದೇವಮಂದಾರ ವೃಕ್ಷದಂತೆ ಜನಗಳ ಇಷ್ಟಸಮೂಹವನ್ನು ಸಂಪಾದಿಸಿ ಕೊಡುವುದೋ, (ಸಾಂದ್ರಾನಂದ ಕದಂಬಮೂರ್ತಿರುಚಿರಂ) = ಪೂರ್ಣಾನಂದ ಸಮೂಹನಾದ ಪರಮಾತ್ಮನ ದಿವ್ಯಸನ್ನಿಧಾನದಿಂದ ಮನೋಹರವಾದುದೋ ಅಥವಾ ಪೂರ್ಣಾನಂದ ಸಮೂಹನಾದ ಪರಮಾತ್ಮನ ಅನುಗ್ರಹದಿಂದ (ಸ್ವಯೋಗ್ಯತೆಯನ್ನನುಸರಿಸಿ)-ಪೂರ್ಣಾನಂದಸಮೂಹವುಳ್ಳ ಬ್ರಹ್ಮಣ್ಯತೀರ್ಥರ ಸನ್ನಿಧಾನದಿಂದ ಮನೋಹರವಾದುದೋ, (ಅಂದರೆ, ಬ್ರಹ್ಮಣ್ಯತೀರ್ಥರ ಬೃಂದಾವನದಲ್ಲಿ ಕೇವಲ ಬ್ರಹ್ಮಣ್ಯತೀರ್ಥರ ಸನ್ನಿಧಿಮಾತ್ರವಲ್ಲ; ಶ್ರೀ ಹರಿವಾಯುಗಳ ವಿಶೇಷ ಸನ್ನಿಧಾನವೂ ಇದೆಯೆಂದು ತಾತ್ಪರ್ಯ) ಆದುದರಿಂದಲೇ (ಸದ್ವೃಂದಸಂಸೇವಿತಂ)=ಸಜ್ಜನ ವೃಂದದಿಂದ ಸಂಸೇವಿತವೋ, ಅಂತಹ ಶ್ರೀ ಬ್ರಹ್ಮಣ್ಯಯತಿವರರು ನಮಗೆ ಮಂಗಳವನ್ನುಂಟುಮಾಡಲಿ.

ಸೇವ್ಯಾ ಕಣ್ವನದೀಪವಿತ್ರಸಲಿಲಾರಾಮಾಪ್ರಮೇಯೋ ಹರಿಃ ।
ಕ್ಷೇತ್ರಂ ಜ್ಞಾನಸುಮಂಟಪಾಖ್ಯಮನಿಶಂ ಹ್ಯಬ್ಬೂರುನಾಮ್ನಾಸ್ತಿಯತ್ ॥
ತದ್ರಮ್ಯಸ್ಥಲಭೂಷಣಂ ವರಗುರುರ್ವೃಂದಾವನಂ ತದ್ಗತಃ ।
ಶ್ರೀಬ್ರಹ್ಮಣ್ಯಯತೀಶ್ವರಶ್ಚ ಭುವಿ ನಃ ಕುರ್ಯಾತ್ಪರಂ ಮಂಗಲಮ್ ॥ ೮ ॥

ಸೇವಿಸಲು ಯೋಗ್ಯವಾದ ಪವಿತ್ರಜಲವುಳ್ಳ ಕಣ್ವನದೀ, ಶ್ರೀರಾಮ, ಅಪ್ರಮೇಯಸ್ವಾಮಿ, ಜ್ಞಾನಮಂಟಪಾಖ್ಯ ಅಬ್ಬೂರುಕ್ಷೇತ್ರ—ಅಂತಹ ರಮ್ಯ ಸ್ಥಳಕ್ಕೆ ಭೂಷಣವಾದ ವರಗುರು ಬ್ರಹ್ಮಣ್ಯರ ವೃಂದಾವನ ಹಾಗೂ ಅದರಲ್ಲಿ ಸಂಸ್ಥಿತರಾಗಿರುವ ಬ್ರಹ್ಮಣ್ಯಯತೀಶ್ವರರು, (ಈ ಎಲ್ಲವೂ), ಭೂಮಿಯಲ್ಲಿ ವಾಸಿಸುವ ನಮಗೆ ಉತ್ಕೃಷ್ಟ ಮಂಗಳವನ್ನುಂಟುಮಾಡಲಿ.

ಇತ್ಯೇತದ್ವರಮಂಗಲಾಷ್ಟಕಮಿದಂ ಶ್ರೀ ಶ್ರೀನಿವಾಸೋದಿತಮ್ ।
ಸರ್ವಾಭೀಷ್ಟಕರಂ ಪ್ರಭಾತಸಮಯೇ ಭಕ್ತ್ಯಾ ಪಠನ್ ಮಾನವಃ ॥
ಮಾಂಗಲ್ಯಾದಿಶುಭಕ್ರಿಯಾಸು ಚ ವದನ್ ಬ್ರಹ್ಮಣ್ಯಕಾರುಣ್ಯತಃ ।
ಸುಜ್ಞಾನಂ ವಿವಿಧಾರ್ಥಸಿದ್ಧಿಮಪಿ ಸ ಪ್ರಾಪ್ನೋತ್ಯಸೌ ಮಂಗಲಮ್ ॥ ೯ ॥

ಇತಿ ಶ್ರೀಮದ್ವ್ಯಾಸರಾಜಗುರುವರ ಶ್ರೀ ಬ್ರಹ್ಮಣ್ಯತೀರ್ಥ
ಮಂಗಲಾಷ್ಟಕಂ ಸಮಾಪ್ತಮ್ ॥

ಈ ರೀತಿಯಿಂದ ಶ್ರೀನಿವಾಸ(ನಾಮಕ)ನಿಂದ ವಿರಚಿತವಾದ, ಸರ್ವಾಭೀಷ್ಟ ಕರವಾದ ಈ ಮಂಗಳಾಷ್ಟಕವನ್ನು, ಪ್ರಾತಃಕಾಲದಲ್ಲಿ ಭಕ್ತಿಯಿಂದ ಪಠಿಸುವ ಮಾನವನು, ಹಾಗೂ ಮಾಂಗಲ್ಯಮಹೋತ್ಸವಾದಿ ಶುಭಕಾರ್ಯಗಳಲ್ಲಿ ಪಾರಾಯಣ ಮಾಡತಕ್ಕವನು, ಶ್ರೀ ಬ್ರಹ್ಮಣ್ಯತೀರ್ಥಶ್ರೀಪಾದಂಗಳವರ ಕಾರುಣ್ಯ ದಿಂದ ಸುಜ್ಞಾನವನ್ನೂ, ವಿವಿಧಪುರುಷಾರ್ಥಸಿದ್ಧಿಯನ್ನೂ, ಪರಮಮಂಗಳವನ್ನೂ ಹೊಂದುವನು.

ಹೀಗೆ, ಶ್ರೀವ್ಯಾಸರಾಜಗುರುವರ ಶ್ರೀಬ್ರಹ್ಮಣ್ಯತೀರ್ಥ
ಮಂಗಳಾಷ್ಟಕವು ಸಮಾಪ್ತವು.

★ ★ ★

ಶ್ರೀ ವ್ಯಾಸರಾಜವಿರಚಿತ

ಶ್ರೀ ಶ್ರೀಪಾದರಾಜಪಂಚಕಮ್

ವಂದೇ ಶ್ರೀಪಾದರಾಜಂ ರುಚಿತಮಹೃದಯಂ ಪೂಜಿತಶ್ರೀಸಹಾಯಂ
ನಿರ್ಧೂತಾಶೇಷಹೇಯಂ ನಿಭೃತಶುಭಚಯಂ ಭೂಮಿದೇವಾಭಿಗೇಯಮ್ ।
ವಿಪ್ರೇಭ್ಯೋ ದತ್ತದೇಯಂ ನಿಜಜನಸದಯಂ ಖಂಡಿತಾಶೇಷಮಾಯಂ
ನಿಷ್ಟಪ್ತಸ್ವರ್ಣಕಾಯಂ ಬಹುಗುಣನಿಲಯಂ ವಾದಿಸಂಘೈರಜೇಯಮ್ ॥ ೧ ॥

ಅತ್ಯಂತ ಶುದ್ಧಾಂತಃಕರಣರೂ, ಲಕ್ಷ್ಮೀಪತಿಯನ್ನು ಪೂಜಿಸಿದವರೂ, ಸಮಸ್ತಹೇಯಗುಣರಹಿತರೂ, ಕಲ್ಯಾಣಗುಣಸಂಪನ್ನರೂ, ಬ್ರಾಹ್ಮಣರಿಂದ ಹೊಗಳಲ್ಪಟ್ಟವರೂ, ಬ್ರಾಹ್ಮಣರಿಗೆ ಜ್ಞಾನಾದ್ಯನೇಕದಾತೃಗಳೂ, ಭಕ್ತಜನಪ್ರಿಯರೂ, ಸಕಲಮೋಹನಾಶಕರೂ, ಪುಟವಿಕ್ಕಿದ ಚಿನ್ನಕ್ಕೆ ಸಮಾನವಾದ ಕಾಂತಿಯುಳ್ಳ ದೇಹವುಳ್ಳವರೂ, ಸಮಸ್ತಸದ್ಗುಣಗಳಿಗೆ ಆಧಾರಭೂತರೂ, ಪ್ರತಿಪಕ್ಷಿಗಳ ಸಮೂಹಗಳಿಂದ ಸರ್ವಥಾ ಅಜೇಯರೂ ಆದ ಶ್ರೀಪಾದರಾಜಗುರುಗಳನ್ನು ನಮಸ್ಕರಿಸುತ್ತೇನೆ.

ಕ್ಷುಭ್ಯದ್ವಾದಿಕರೀಂದ್ರವಾದಪಟಲೀಕುಂಭಚ್ಛಟಾಭೇದನ-
ಪ್ರೌಢಪ್ರಾಭವತರ್ಕಸಂಘನಿಕರಶ್ರೇಣೀವಿಲಾಸೋಜ್ವಲಃ ।
ಗೋಪೀನಾಥಮಹೀಧ್ರಶೇಖರಲಸತ್ಪಾದಸ್ಥಲಾವಾಸಕೃತ್
ಪಾಯಾನ್ಮಾಂ ಭವಘೋರಕುಂಜರಭಯಾಚ್ಛ್ರೀಪಾದರಾಟ್ ಕೇಸರೀ ॥ ೨ ॥

ವ್ಯಾಕುಲಿತವಾದ ಪ್ರತಿಪಕ್ಷದಿಗ್ಗಜಗಳ ಕುಂಭಸ್ಥಳಗಳನ್ನು ತಮ್ಮ ಯುಕ್ತಿಸಮೂಹಗಳೆಂಬ ಹರಿತವಾದ ಉಗುರುಗಳಿಂದ ಸೀಳುತ್ತಿರುವ, ಗೋಪೀನಾಥದೇವರೆಂಬ ಪರ್ವತಶ್ರೇಷ್ಠದ ಪಾದದಲ್ಲಿ ವಾಸಮಾಡುವವರಾದ ಶ್ರೀಪಾದರಾಜರೆಂಬ ಸಿಂಹವು ಸಂಸಾರರೂಪವಾದ ಮದ್ದಾನೆಯ ಭಯದಿಂದ ನಮ್ಮನ್ನು ರಕ್ಷಿಸಲಿ.

ಬಿಭ್ರಾಣಂ ಕ್ಷೌಮವಾಸಃ ಕರಧೃತವಲಯಂ ಹಾರಕೇಯೂರಕಾಂಚೀ-
ಗ್ರೈವೇಯಸ್ವರ್ಣಮಾಲಾಮಣಿಗಣಖಚಿತಾನೇಕಭೂಷಾಪ್ರಕರ್ಷಮ್ ।
ಭುಂಜಾನಂ ಷಷ್ಟಿಶಾಕಾನ್ ಧೃಹಯಗಜಶಿಬಿಕಾನರ್ಘ್ಯಶಯ್ಯಾರಥಾಢ್ಯಮ್
ವಂದೇ ಶ್ರೀಪಾದರಾಜಂ ತ್ರಿಭುವನವಿದಿತಂ ಘೋರದಾರಿದ್ರ್ಯಶಾಂತ್ಯೈ ॥ ೩ ॥

ಪೀತಾಂಬರಧಾರಿಗಳೂ, ವಿವಿಧ ರತ್ನಖಚಿತ ಕಡಗಭುಜಕೀರ್ತಿ ಬಾಜಾ ಬಂದಿಗಳು ಇವುಗಳಿಂದ ಅಲಂಕೃತವಾದ ಬಾಹುಯುಗ್ಮವುಳ್ಳವರೂ, ಸುವರ್ಣ ರಚಿತವಾದ ಕಂಠಹಾರ ಮುಂತಾದ ಆಭರಣಗಳಿಂದ ಅಲಂಕೃತರೂ, ಪ್ರತಿನಿತ್ಯವೂ ಅರವತ್ತು ಬಗೆಯ ಶಾಕ, ಭಕ್ಷ್ಯ, ಭೋಜ್ಯ, ಲೇಹ್ಯಪೇಯಗಳುಳ್ಳ ಮೃಷ್ಟಾನ್ನ ಭೋಕ್ತರೂ, ಪಾತಾಳ–ಭೂಮಿ–ದೇವಲೋಕಗಳಲ್ಲಿ ಪ್ರಸಿದ್ಧರೂ, ಅತ್ಯಧಿಕ ಬೆಲೆಯುಳ್ಳ ಗಜ, ಶಿಬಿಕ, ಶಯ್ಯಾರಥಾದಿಗಳನ್ನುಳ್ಳವರೂ, ಆದ ಶ್ರೀಪಾದರಾಜ ರನ್ನು ಸಂಸಾರರೂಪವಾದ ಕಠಿಣವಾದ ದಾರಿದ್ರ್ಯನಾಶಕ್ಕಾಗಿ ಸೇವಿಸುತ್ತೇನೆ.

ಯದ್ವೃಂದಾವನಸೇವಯಾ ಸುವಿಮಲಾಂ ವಿದ್ಯಾಂ ಪಶೂನ್ ಸಂತತಿಂ
ಧ್ಯಾನಾತ್ ಜ್ಞಾನಮನಲ್ಪಕೀರ್ತಿನಿವಹಂ ಪ್ರಾಪ್ನೋತಿ ಶೀಘ್ರಂ ಜನಃ ।
ತಂ ವಂದೇ ನರಸಿಂಹತೀರ್ಥನಿಲಯಂ ಶ್ರೀವ್ಯಾಸರಾಟ್ ಪೂಜಿತಂ
ಧ್ಯಾಯಂತಂ ಮನಸಾ ನೃಸಿಂಹಚರಣಂ ಶ್ರೀಪಾದರಾಜಂ ಗುರುಮ್ ॥ ೪ ॥

ಯಾವ ಶ್ರೀಪಾದರಾಜರ ವೃಂದಾವನ ಸೇವೆಯಿಂದ ಮೋಕ್ಷಸಾಧಕ ವಿದ್ಯೆಯೂ, ಪಶುಸಂಪತ್ತೂ, ಸಂತತಿಸಂಪತ್ತೂ ಲಭ್ಯವಾಗುತ್ತವೆಯೋ, ಯಾರ ನಾಮಸ್ಮರಣೆಯಿಂದಲೇ ಜ್ಞಾನಾಭಿವೃದ್ಧಿಯನ್ನೂ, ಮಹತ್ಕೀರ್ತಿ ಸಮೂಹವನ್ನೂ, ಶೀಘ್ರದಲ್ಲಿಯೇ ಜನರು ಪಡೆಯುತ್ತಾರೆಯೋ ಅಂಥ ನೃಸಿಂಹತೀರ್ಥವಾಸಿಗಳೂ, ಶ್ರೀ ವ್ಯಾಸರಾಜರಿಂದ ಪೂಜಿತರೂ, ಸದಾ ನೃಸಿಂಹದೇವರ ಚರಣಾರವಿಂದದ ಸ್ಮರಣೆಯಲ್ಲಿಯೇ ನಿರತರೂ ಆದ ಶ್ರೀಪಾದರಾಜಗುರುಗಳನ್ನು ನಮಸ್ಕರಿಸು ತ್ತೇನೆ.

ಕಾಶೀಕೇದಾರಮಾಯಾಕರಿಗಿರಿಮಧುರಾದ್ವಾರಕಾವೇಂಕಟಾದ್ರಿ-
ಶ್ರೀಮುಷ್ಣಕ್ಷೇತ್ರಪೂರ್ವತ್ರಿಭುವನವಿಲಸತ್ಪುಣ್ಯಭೂಮೀನಿವಾಸಃ ।
ಗುಲ್ಮಾದಿವ್ಯಾಧಿಹರ್ತಾ ಗುರುಗುಣನಿಲಯೋ ಭೂತಭೇತಾಲಭೇದೀ
ಭೂಯಾಚ್ಛ್ರೀಪಾದರಾಜೋ ನಿಖಿಲಶುಭತತಿಪ್ರಾಪ್ತಯೇ ಸಂತತಂ ನಃ ॥ ೫ ॥

ಇತಿ ಶ್ರೀ ವ್ಯಾಸರಾಜಯತಿಕೃತ ಶ್ರೀಪಾದರಾಜಪಂಚಕಂ ಸಂಪೂರ್ಣಮ್

ಕಾಶಿ, ಕೇದಾರ, ಮಾಯಾಪುರಿ (ಹರಿದ್ವಾರ), ಕರಿಗಿರಿ (ದೇವರಾಯನದುರ್ಗ), ಮಧುರಾ, ದ್ವಾರಕಾ, ವೇಂಕಟಾದ್ರಿ, ಶ್ರೀಮುಷ್ಣ ಮುಂತಾದ, ತ್ರಿಲೋಕಗಳಲ್ಲಿಯೂ ಪ್ರಸಿದ್ಧವಾದ ಪುಣ್ಯಭೂಮಿಗಳೇ ವಾಸಸ್ಥಾನವಾಗಿ ಉಳ್ಳವರೂ, ಗುಲ್ಮವ್ಯಾಧಿ ಮುಂತಾದ ಅನೇಕ ವ್ಯಾಧಿಪರಿಹಾರಕರೂ, ಸಮಸ್ತಕಲ್ಯಾಣಗುಣಗಣಗಳಿಗೆ ಆಧಾರಭೂತರೂ, ಭೂತಭೇತಾಳ ಮುಂತಾದ ದುಷ್ಟಗ್ರಹಗಳ ನಾಶಕರೂ ಆದ ಶ್ರೀಪಾದರಾಜರು ನಮಗೆ ಯಾವಾಗಲೂ ಸನ್ಮಂಗಳವನ್ನು ಮಾಡುತ್ತಾ ಅನುಗ್ರಹಿಸಲಿ.

ಶ್ರೀ ವ್ಯಾಸರಾಜಮುನಿಗಳಿಂದ ರಚಿತವಾದ ಶ್ರೀಪಾದರಾಜಪಂಚಕವು ಮುಗಿಯಿತು.

ಶ್ರೀ ವಾದಿರಾಜತೀರ್ಥ ವಿರಚಿತ

ಶ್ರೀ ಶ್ರೀಪಾದರಾಜ ಸ್ತೋತ್ರಮ್

ಅಶ್ವಧಾಟೀ

ದ್ವೈಪಾಯನೋತ್ತಮ ಕರೋಪಗತಾಂ ಪವನರೂಪಾಮಿತೇಕ್ಷಮಹಿತಾಂ
ಗೋಪಾಂಗನೇಶತನುಮಾಪಾತಮರ್ಚಯಿತುಮಾಪಾದ್ಯ ಯೋಹಿ
ಯತಿತಾಮ್ ।
ಸ್ವಾಪಾಸ್ತ ಭೂಪಕೃತ ಶಾಪಾಸಿಘಾತ ನಿಜತಾಪಾರಪಾಪ ನಿಚಯಂ
ಶ್ರೀಪಾದರಾಜವರಶಾಪಾಯುದಂಭಜತಸೂಪಾನ್ನ ಲೋಲುಪಧಿಯಃ ॥ ೧ ॥

ಕಾಪಾಲಿಕಾಂಶ ವರಕೋಪಾತಿವಿತ್ತಯತಿ ಭೂಪಾರಕಾಂಕ್ಷಿಕುಲಭೂ
ಭೂಪಾವನಾಮಿತ ಧಿಯಾಪಾವಿತಾತಿಶುಭರೂಪಾಬ್ಜನಾಭ ಸುಯತೇಃ ।
ಗೋಪಾಯಿತಾನ್ವಯ ಸುದೀಪಾಭಹೇಮಸಮರೂಪಾಖ್ಯ ಭಿಕ್ಷು ವರಭೂಃ
ಶ್ರೀಪಾದರಾಜಯತಿರಾಪಾತುನಃ ಶುಭಕಲಾಪಾನಪಾರಮಹಿಮಾ ॥ ೨ ॥

ಗೋಪಾಲವಿಠ್ಠಲತನೂಪಾರ್ಥಭಲ್ಲುಕಸುತೋಪಾಸಿತೇಸಮಹಿಳೇ
ದೀಪಾದ್ಯವಿತ್ತಭವನಾಪಾಲತೇ ಕುರುಕುಲಾಪಾಯ ಭೂನೃಪತಿನಾ ।
ಪ್ರಾಪಾದಿಮಾದಿಶದಥೋಪಾಕ ಶಿಷ್ಯಯತಯೇ ಪಾದುಕೇತಮನಯೋಃ
ಶ್ರೀಪಾದರಾಜಯತಿರಾಪಾತುನೋ ರಚಿತ ಭೂಪಾಲ ಪೀಠವಸತಿಃ ॥ ೩ ॥

ಯೋಪಾಗಮತ್ಸ್ವಪುರತೋಪಾಸ್ತಬಂಧುಜನತಾಪಾರಿಬರ್ಹ ಸುಹೃದಾ-
ಲಾಪಾದಿರಾಗ ಉರುಭೂಪಾಲವರ್ಯಜನ ಗೋಪಾಂಗ ಹಾಪಿತತನುಃ ।
ಧೂಪಾಯಿತಾಂತರ ಇವಾಪಾಟವೀಂ ನಿಶಿತರೋಪಾಭಮಾತೃವಚಸಾ
ಗೋಪಾಯಿತಾತ್ಮತನುಭೂಪಾಮರಾರ್ಯಜನ ಗೋಪಾರವಶ್ಯಕರಭಾಃ ॥ ೪ ॥

ಹಾಪಾಕ ಆಗತ ಇಹಾಪಾಪ ಸೇವ್ಯಮಭಿರೂಪಾಮರದ್ರುಮಿತಿಮಾಮ್
ಶ್ರೀಪಾಲಯಾಪಿತ ಮಹೀಪಾರಗಾಮಿಸುರಶಾಪಾಯುಧೋಕ್ತ ತಪಸಾ ।
ಕ್ಷ್ಮಾಪಾಲ ಪೀಠಮಥ ಗೋಪಾಲಸೇವ್ಯಪದಮಾಪಾಗ್ರ್ಯಜನ್ಮಗುರುತಾಮ್
ಶ್ರೀಪಾದರಾಜಯತಿರಾಪಾರಮತ್ವಯಮಹಾಪಾಯತಃ ಸಪದಿನಃ ॥ ೫ ॥

ವ್ಯಾತ್ತಾನವಾಂತಕ ಸಮತ್ತಾಯುಧೋರುಭುಜ ವೈತ್ತಾಯನಿಧ್ವಜಿಚಮೂ-
ಚ್ಛೇತ್ತಾನುಜಾರ್ಥಮಿವ ಭೇತ್ತಾಸ್ವಕಾವತಮಸೋತ್ತಾನಪರ್ವತ ತತೇಃ ।
ಸ್ವಾತ್ತಾನಿಳಾಗಮ ಮಹೋತ್ತಾನತೀಕ್ಷ್ಣ ಪವಿರೌತ್ತಾನಪಾದ ಯತಿರಾಟ್
ವೇತ್ತಾ ಹಯಾನನತನೂತ್ತಾರಣಸ್ಯ ಮಮತೋತ್ತಾಭವಾರ್ತಿಮತುಳಾಮ್
॥ ೬ ॥

ಶ್ರೀಪಾದರಾಜಗುಣವರ್ಣನ ಪದ್ಯಷಟ್ಕಂ
ಶ್ರೀವ್ಯಾಸರಾಜಯತಿ ಶಿಷ್ಯಗಣರ್ಷಭೇಣ ।
ಶ್ರೀವಾದಿರಾಜಯತಿನಾ ರಚಿತಂ ತು ಶಶ್ವತ್
ಸೇವಾದರೇಣ ಪಠತಾಂ ಪ್ರಕರೋತ್ಯಭೀಷ್ಟಮ್ ॥ ೭ ॥

ಇತಿ ಶ್ರೀವಾದಿರಾಜತೀರ್ಥವಿರಚಿತ ಶ್ರೀಪಾದರಾಜ ಸ್ತೋತ್ರಂ ಸಂಪೂರ್ಣಂ

★ ★ ★

ಶ್ರೀ ವಿಜಯೀಂದ್ರಯತಿ ವಿರಚಿತ

ಶ್ರೀ ಶ್ರೀಪಾದರಾಜಾಷ್ಟಕಮ್

ಶ್ರೀಮದ್ವೀರನೃಸಿಂಹನಾಮನೃಪತೇರ್ಭೂದೇವ ಹತ್ಯಾ ವ್ಯಥಾಮ್
ದೂರೀಕೃತ್ಯ ತದರ್ಪಿತೋಜ್ಜ್ವಲಮಹಾಸಿಂಹಾಸನೇ ಸಂಸ್ಥಿತಃ ।
ಶ್ರೀಮತ್ಪೂರ್ವಕವಾಟನಾಮಕಪುರೇ ಸರ್ವೇಷ್ಟ ಸಿದ್ಧಿಪ್ರದಃ
ಶ್ರೀ ಶ್ರೀಪಾದಯತೀಂದ್ರಶೇಖರಮಣೀ ಭೂಯಾತ್ಸನಃ ಶ್ರೇಯಸೇ ॥ ೧ ॥

ಸಾಳ್ವ ನರಸಿಂಹರಾಜನಿಗೆ ಒದಗಿಬಂದ ಭಯಂಕರ ಬ್ರಹ್ಮಹತ್ಯೆ ಎಂಬ ಪಾಪವನ್ನು ಅನಾಯಾಸವಾಗಿ ದೂರೀಕರಿಸಿದ ಮಹನೀಯರು, ಅವನು ಆದರ ಪೂರ್ವಕವಾಗಿ ಅರ್ಪಿಸಿದ ಸಿಂಹಾಸನದಲ್ಲಿ ಆಸೀನರಾದ ಸಂತರೂ ಹಾಗೂ ಮುಳಬಾಗಿಲು ಪಟ್ಟಣದಲ್ಲಿ ಎಲ್ಲರ ಅಭೀಷ್ಟಗಳನ್ನು ಪೂರೈಸುವ ಪರಮಪವಿತ್ರರಾದ ಶ್ರೀಪಾದರಾಜರು ನಮಗೆ ಮಂಗಳ ಮಾಡಲಿ.

ಭೇರೀ ಮಂಜುಳ ಕಾಹಲೀ ಮುಖ ಮಹಾನಾನಾವಿಧ ಪ್ರೋಜ್ವಲ
ಧ್ವಾಂತಧ್ವಾನ ನಿರಸ್ತವಾದಿ ನಿಚಯಃ ಶ್ರೀಪಾದರಾಜೋಸ್ತು ನಃ ।
ಸೌವರ್ಣಾಮಲ ದಂಡಚಾಮರಸಿತಚ್ಛತ್ರೋರು ಹೈಮೋಲ್ಲಸತ್
ಯಷ್ಟಿದ್ವಂದ್ವಸುಪಂಚವರ್ಣವಸನೋ ಭೂಯಾತ್ಸ ನಃ ಶ್ರೇಯಸೇ ॥ ೨ ॥

ಭರ್ಜರಿಯಾದ ಭೇರಿ, ಮಂಜುಳನಾದ ಕಹಳೆ ಮೊದಲಾದ ವಿವಿಧ ವಾದ್ಯಗಳ ಧ್ವನಿಯಿಂದ ಶ್ರೀಪಾದರಾಜರ ವಾದವಿಜಯ ಎಲ್ಲರ ಕಿವಿಗಳಲ್ಲಿಯೂ ಮೊಳಗುತ್ತಿದ್ದಿತು. ಅವರ ರಾಜವೈಭವಕ್ಕೆ ಎಲ್ಲೆಯೇ ಇಲ್ಲ. ಕಂಗೊಳಿಸುವ ಸುವರ್ಣದಂಡ, ಚಾಮರ, ಶ್ವೇತಛತ್ರ, ಅಪರಂಜಿಯಿಂದ ಮನೋಹರವಾಗಿ ಶೋಭಿಸುವ ಐದು ವರ್ಣದ ವಸ್ತ್ರಗಳಿಂದ ವಿಶೇಷವಾಗಿ ಶೋಭಿಸುವ ಶ್ರೀಪಾದರಾಜರು ನಮಗೆ ಮಂಗಳ ಮಾಡಲಿ.

ಪಾದತ್ರಾಣಯುಗಂ ಕ್ವಣತ್ಸುಚರಣದ್ವಂದ್ವೇನ ಸಂಯೋಜ್ಯತತ್
ದುಶ್ಶಾಸ್ತ್ರಂ ಪದಕಂಜರಕ್ಷಣಯುಗೇ ಬಂದೀಕೃತಂ ಕೂಜತೀ ।
ಧೀರಾನ್ಮೋಚಯತೇತಿ ಬಂದಿಷು ಪುರೋಗರ್ಜತ್ಸು ಸಿಂಹಾಸನಮ್
ಗಚ್ಛನ್ಮೌಕ್ತಿಕ ಕಂಚುಕೋಜ್ಜ್ವಲತನುರ್ಭೂಯಾತ್ಸನಃ ಶ್ರೇಯಸೇ ॥ ೩ ॥

ಗೆಜ್ಜೆಯಿಂದ ಮಂಗಳಧ್ವನಿ ಮೊಳಗುವ ತಮ್ಮ ಪಾದ್ಕಕಮಲಗಳಲ್ಲಿ ಹಾವಿಗೆಯನ್ನು ಮೆಟ್ಟಿಕೊಂಡು ದುಃಶಾಸ್ತ್ರವನ್ನು ತಮ್ಮ ಪಾದಕಮಲದ್ವಂದ್ವಗಳಲ್ಲಿ, ಬಂದಿಯಾಗಿಸಿ ಮರ್ದನಮಾಡುತ್ತಾ ಪ್ರತಿವಾದಿಗಳಿಗೆ ಸಾಧ್ಯವಿದ್ದರೆ ಬಂದು ಬಿಡಿಸಿಕೊಳ್ಳಿ ಎಂದು ಸವಾಲು ಎಸೆಯುತ್ತಾ ಎಲ್ಲರ ಎದುರಿಗೆ ಸಿಂಹಾಸನದ ಬಳಿ ಹೋಗುತ್ತಿರುವ ಮುತ್ತಿನಕವಚ ಮೇಲ್ಕುಲಾವಿಗಳಿಂದ ಕಂಗೊಳಿಸುವ ಶರೀರವುಳ್ಳ ಆ ಶ್ರೀಪಾದರಾಜರು ನಮಗೆ ಶ್ರೇಯಸ್ಸು ನೀಡಲಿ.

ನಾನಾಶಾಕ ಸುಭಕ್ಷ್ಯಪಾಯಸಘೃತಂ ಪ್ರಾಜ್ಯಾನ್ನಭುಕ್ತ್ಯಾಜನೇ
ನಿಂದಾಂ ಕುರ್ವತಿ ಕಾನನಂ ಗತವತೇ ಯಸ್ಮೈ ದದೌ ಶ್ರೀಪತಿಃ ।
ಮೃಷ್ಟಾನ್ನಂ ಸಘೃತಂ ಪಯೋದಧಿಯುತಂ ಸೋಪಸ್ಕರಂ ಕಾನನೇ
ಗೋಪೀನಾಥಪದಾಬ್ಜ ಸಕ್ತಸುಮನಾಃ ಭೂಯಾತ್ಸನಃ ಶ್ರೇಯಸೇ ॥ ೪ ॥

ಒಡವೆಯ ವೈಭವಕ್ಕಾಗಲೀ, ಒಡಲು ತುಂಬುವ ಅವರ ಕಾರುಣ್ಯಕ್ಕಾಗಲೀ ಕೊನೆಯೇ ಇಲ್ಲ. ಕೊನೆಯಿಲ್ಲದ ಕಾಯಿಪಲ್ಲೆಗಳು, ಬಗೆಬಗೆಯ ಭಕ್ಷ್ಯಗಳು, ಪರಮ ರುಚಿಕರವಾದ ಪಾಯಸ, ಸುರಿವ ತುಪ್ಪ ಮೊದಲಾದ ಭೂರಿಭೋಜನ ಮಾಡುವ, ಮಾಡಿಸುವ ಈ ಯತಿಯನ್ನು ಕಂಡು ಕೆಲವರು ಕರುಬಿದರು. ಕುತಂತ್ರದಿಂದ ದಾರಿ ತಪ್ಪಿಸಿ ಕಾಡುಪಾಲು ಮಾಡಿದ್ದರು. ಪರಿವಾರ ಕಾಡಿನಲ್ಲಿದ್ದರೂ ಪರಿಸ್ಥಿತಿ ಕಂಗೆಡಲಿಲ್ಲ, ಭೋಜನ ಬದಲಾಗಲಿಲ್ಲ. ಲಕ್ಷ್ಮೀಪತಿಯಾದ ರಂಗವಿಠಲ ಹಾಲು, ಮೊಸರು ತುಪ್ಪಗಳಿಂದ ತೋಯ್ದು ಹೋಗುವಂತಹ ಮೃಷ್ಟಾನ್ನವನ್ನು, ಕಾಯಿಪಲ್ಲೆಗಳನ್ನು ವ್ಯಂಜನಗಳನ್ನೂ ಕಾಡಿನಲ್ಲೇ ಕೊಟ್ಟ. ಅಂತಹ ಗೋಪೀನಾಥನ ಪಾದದಲ್ಲಿ ಭಕ್ತಿಯನ್ನೇ ಇಟ್ಟುಕೊಂಡ ಶ್ರೀಪಾದರಾಜರು ನಮಗೆ ಮಂಗಳ ಮಾಡಲಿ.

ಚೈತ್ರೇಮಾಸಿ ಕಠೋರಭಾಸ್ಕರಕರೈಸ್ಸಂತಪ್ತಗಾತ್ರಾಖಿಲ
ಸ್ವಾಂತೇವಾಸಿಭಿರರ್ಥಿಭಿಃ ಸ್ವತಪಸಾ ನಿರ್ಮಾಯ ರಮ್ಯಂ ಸರಃ ।
ಸಾರಾಮೋ ಯತಿಪುಂಗವಃ ಪರಿಜನಾನಪ್ಯಾಯಯಾ ಮಾಸಯಾ-
ಚ್ಛಾಯತೋಯ ವಿಹೀನ ಕಾನನತಲೇಭೂರ್ಯಾತ್ಸನಃ ಶ್ರೇಯಸೇ ॥ ೫ ॥

ನೀರು, ನೆರಳುಗಳಿಲ್ಲದೆ ಕಂಗೆಡುವ ಸೂರ್ಯನ ಕಠೋರಕಿರಣಗಳಿಂದ ಬೆಂಡಾಗಿ ಬೆವರುತ್ತಾ, ಬಳಲುತ್ತಿರುವ ತಮ್ಮ ಪರಿವಾರದವರನ್ನೂ ಬೇಸಿಗೆ ತಡೆಯಲಾರೆವೆಂದು ಬೇಡುವ ಭಕ್ತರನ್ನೂ ಕಂಡು ಶ್ರೀಪಾದರಾಜರ ಮನಸ್ಸು ಕರಗಿತು. ತಪಶ್ಶಕ್ತಿಯಿಂದಲೇ ರಮಣೀಯವಾದ ಸರೋವರ ನಿರ್ಮಿಸಿದರು.

ಎಲ್ಲರಿಗೂ ಆರಾಮ ನೀಡಿ ಆ ಮಾಸವನ್ನು ಆಪ್ಯಾಯಮಾನಗೊಳಿಸಿದರು. ಅವರ ಆಪ್ಯಾಯತೆಗೆ ಮಿತಿಯುಂಟೆ? ಹೀಗಾಗಿ ಅಂತಹ ಶ್ರೀಪಾದರಾಜರು ನಮಗೆ ಶ್ರೇಯಸ್ಸು ನೀಡಲಿ.

ತ್ವಂ ಚೇನ್ಮಾಂ ಜಯಸಿದ್ಧಿಚಾಮರಧುನೀಂ ಗಚ್ಛಾವಿನೋಚೇತ್ತದಾ
ಸನ್ಯಸ್ತೋಭವ ಪಂಡಿತೇತಿ ಸದಸೀ ಕ್ಷೋಣೀಪತೇ ಪತ್ರಿಕಾ ।
ಆಲೇಖ್ಯಪ್ರಿಯಶಿಷ್ಯವರ್ಯ ಯತಿನಾ ಯತ್ಯಾಶ್ರಮಂ ವಾದಿನಮ್
ಜಿತ್ವಾದಾಪಿತವಾಂಶ್ಚತಸ್ಯ ಸುಮತೀರ್ಭೂಯಾತ್ಸನಃ ಶ್ರೇಯಸೇ ॥ ೬ ॥

ನೀವು ಗೆದ್ದರೆ ಸೋತ ನಾವು ಗಂಗಾಪಾಲಾಗಿ ಬಿಡುವೆವು. ಇಲ್ಲವಾದರೆ ನೀವು ಸೋತಲ್ಲಿ ಸನ್ಯಾಸಾಶ್ರಮವನ್ನೇ ಸ್ವೀಕರಿಸಬೇಕು, ಎಂದು ಸವಾಲು ಎಸೆದು ರಾಜರ ಮೂಲಕ ಪತ್ರವನ್ನು ಕಳಿಸಿ ವಾದ-ಪ್ರತಿವಾದದ ಸಿದ್ಧತೆ ನಡೆಸಿದರು. ಕಡೆಗೆ ತಮ್ಮ ಶಿಷ್ಯನ ಜೊತೆಯಲ್ಲೇ ಜರುಗಿದ ಆ ವಾದದಲ್ಲಿ, ಪ್ರತಿವಾದಿ ಸೋತುಹೋದನು. ಸನ್ಯಾಸತ್ವ ಒಪ್ಪಿಕೊಂಡ. ಅಂತಹ ಪ್ರತಿಭಾಸಂಪನ್ನರೂ ಪರಮ ತಪಸ್ವಿಗಳೂ ಆದ ಶ್ರೀಪಾದರಾಜರು ನಮಗೆ ಮಂಗಳ ಮಾಡಲಿ.

ವೈರಾಗ್ಯಾಮಲಭಕ್ತಿನಿರ್ಮಲ ಮಹಾಜ್ಞಾನಾದಿ ಭಾಗ್ಯೋಜ್ಜ್ವಲಃ
ಶ್ರೀಮತ್ ಶ್ರೀಪತಿರಂಗವಿಟ್ಠಲ ಪದಾಂಭೋಜ ಪ್ರಭಾವಂ ಹೃದೀ ।
ಸ್ಮಾರಂಸ್ಮಾರಮಹರ್ನಿಶಂ ನಿಜಮಹಾನಂದಾಬ್ಧಿಮಗ್ನೋ ಗುರುಃ
ಲೋಕಾನಂದಕರೋರು ರಮ್ಯಮಹಿಮಾ ಭೂಯಾತ್ಸನಃ ಶ್ರೇಯಸೇ ॥ ೭ ॥

ವೈರಾಗ್ಯ, ನಿರ್ವ್ಯಾಜವಾದ ಭಕ್ತಿ, ನಿರ್ಮಲವಾದ ಶ್ರೇಷ್ಠಜ್ಞಾನ ಇವುಗಳಿಂದ ಕಂಗೊಳಿಸುವ ಶ್ರೀಪಾದರಾಜರು ಹಗಲಿರುಳೂ ರಂಗವಿಠ್ಠಲನ ಪಾದಕಮಲಗಳ ಪ್ರಭಾವವನ್ನು, ತಮ್ಮ ಹೃದಯದಲ್ಲಿ ಮೆಲುಕುಹಾಕುವ ಮಹಾನುಭಾವರೂ ಆ ಆನಂದದಲ್ಲೇ ಮುಳುಗಿರುವ ಮಹದ್ಗುರುಗಳೂ ಲೋಕಕ್ಕೇ ಆನಂದ ನೀಡುವ ಈ ಸಂತರಮಹಿಮೆ, ರಮಣೀಯವಾದುದು. ಇವರು ನಮಗೆಲ್ಲರಿಗೂ ಮಂಗಳ ನೀಡಲಿ.

ಯದ್ವೃಂದಾವನ ಸೇವಯಾ ಭುವಿ ಜನಃ ಪ್ರಾಪ್ನೋತಿ ಸೌಖ್ಯಂ ಮಹತ್
ಯದ್ವೃಂದಾವನ ಮೃತ್ತಿಕಾಪಿ ನಿಟಿಲೇ ಭಕ್ತ್ಯಾ ಧೃತಾ ಸೇವಿತಾ ।
ಭೂತೋಚ್ಚಾಟನಕಾರಿಣೀ ಕ್ಷಯಮಹಾಪಸ್ಮಾರಗುಲ್ಮಾದಿಕಾ
ನೇಕ ವ್ಯಾಧಿನಿವಾರಣೈಕಕರುಣಿರ್ಭೂಯಾತ್ಸನಃ ಶ್ರೇಯಸೇ ॥ ೮ ॥

ಇತಿ ಶ್ರೀ ವಿಜಯೀಂದ್ರಯತಿ ವಿರಚಿತ ಶ್ರೀ ಶ್ರೀಪಾದರಾಜಷ್ಟಕಂ ಸಂಪೂರ್ಣಮ್

ಯಾರ ವೃಂದಾವನದ ಆರಾಧನಾ, ದರ್ಶನ, ಪ್ರದಕ್ಷಿಣ ಸೇವಾದಿಗಳ ಮನನ ದಿಂದಲೇ ಜನರಿಗೆ ಸೌಖ್ಯವು ಲಭಿಸುವುದೋ, ಯಾರ ವೃಂದಾವನದ ಮೃತ್ತಿಕೆ ಯನ್ನು ಶಿರದಲ್ಲಿ ಧರಿಸಿದ ಮಾತ್ರಕ್ಕೆ ಭೂತಗಳು ಬೆದರಿಬಿಡುವವೋ, ಕ್ಷಯ, ಮೂರ್ಛೆ, ಗುಲ್ಮಾ ಮಹಾರೋಗಗಳೂ ಸಹ ಮಾಯವಾಗುವವೋ ಅಂತಹ ಕರುಣಾಳುಗಳಾದ ಶ್ರೀಪಾದರಾಜರು ನಮಗೆ ಮಂಗಳ ಮಾಡಲಿ.

ಹೀಗೆ ಶ್ರೀ ವಿಜಯೀಂದ್ರತೀರ್ಥರಿಂದ ರಚಿಸಲ್ಪಟ್ಟ
ಶ್ರೀ ಶ್ರೀಪಾದರಾಜಾಷ್ಟಕವೆಂಬ ಸ್ತೋತ್ರವು ಮುಗಿಯಿತು.

★ ★ ★

ಶ್ರೀನಿಧಿಯತಿ ವಿರಚಿತ

ಶ್ರೀ ಶ್ರೀಪಾದರಾಜಾಷ್ಟಕಮ್

ಶ್ರೀಮತ್ಯಾ ಜಾಂಬವತ್ಯಾ ಯದುಪತಿನಗರೇ ಪೂಜಿತಃ ಫಲ್ಗುಣೇನ
ಪ್ರಾಪ್ತಸ್ತೇನಾರ್ಚಿತಾಂಘ್ರಿಸ್ಸಕಲ ಸುಖಕರೇ ಪಾಂಡುರಂಗೇಽತರಂಗೇ ।
ಭೂಮೌಕ್ಷೇತ್ರೇಽಥ ಗುಪ್ತಸ್ಸಕಲ ಬುಧಗುರೋರ್ಯಸ್ಯಲಬ್ಧೋಽವತಾನ್ಮಾಂ
ಸ್ವಪ್ನೇ ಶ್ರೀಮಾನ್ ರಮೇಶಃ ಪ್ರಭುವರತನಯಾ ಸತ್ಯಭಾಮಾ ಸಮೇತಃ ॥೧॥

ದ್ವಾರಕಾನಗರದಲ್ಲಿ ಜಾಂಬವತಿಯು ಪೂಜಿಸುತ್ತಿದ್ದ ಸತ್ಯಭಾಮಾಸಮೇತನಾದ ಲಕ್ಷ್ಮೀಪತಿಯಾದ ಪಾಂಡುರಂಗನ ಪ್ರತಿಮೆಯು ಅತ್ಯದ್ಭುತವಾದುದು. ದ್ವಾರಕಾನಗರವೇ ಮುಳುಗಿಹೋಗುವ ಕಾಲ ಬಂದಾಗ ಅರ್ಜುನನು ಆ ಪ್ರತಿಮೆಯನ್ನು ಹಸ್ತಿನಾವತಿಯಲ್ಲಿ ತಂದಿಟ್ಟುಕೊಂಡು ಹಗಲಿರುಳೂ ಪೂಜಿಸುತ್ತಿದ್ದ. ಸಕಲರಿಗೂ ಸುಖನೀಡುವ ಆ ಪಾಂಡುರಂಗನ ಪ್ರತಿಮೆ ಕಾಲಕಳೆದಂತೆ ನದೀತೀರದ ಭೂಮಿಯಲ್ಲಿ ಹುದುಗಿಹೋಯಿತು. ಅನಂತರ ಭಗವಂತ ಜ್ಞಾನಿಶ್ರೇಷ್ಠರಾದ ಶ್ರೀ ಶ್ರೀಪಾದರಾಜರ ಕನಸಿನಲ್ಲಿ ಸೂಚನೆ ಕೊಟ್ಟು ತಾನೇ ಶ್ರೀಪಾದರಾಜರಿಂದ ಪೂಜೆಗೊಳ್ಳಲು ಬಂದು ನೆಲೆಸಿದ.

ಶ್ರೀಮತ್ ಶ್ರೀಪಾದರಾಜ ಪ್ರಮುಖ ಯತಿವರಾನಾದರಾಧೀತ ಶಾಸ್ತ್ರಾ-
ನಾಹೂಯಾತಿ ಪ್ರಮೋದಾ ಪ್ರವದತ ಭವತಾಂ ತಾವದೇವಾದ್ಯ ಶಿಷ್ಯಃ ।
ಯಾವತ್ಸಾಮರ್ಥ್ಯಮಸ್ತೀತ್ಯುದಿತವತಿ ಗುರೌ ಪ್ರಾಗುಪನ್ಯಸ್ತವಾನ್ಯಃ
ಶ್ರೀಮಾನಾದ್ಯಂತಯುಕ್ತಾಂ ಬುಧಸದಸಿ ಸುಧಾಂ ಸೋಽವತಾನ್ಮಾಂ
ಯತೀಂದ್ರಃ ॥ ೨ ॥

ಆದರದಿಂದ ಸಮಸ್ತಶಾಸ್ತ್ರಗಳನ್ನೂ ಅಧ್ಯಯನ ಮಾಡಿದ ಶ್ರೀಪಾದರಾಜರೇ ಮೊದಲಾದ ಯತಿಗಳನ್ನು ಗುರುಗಳಾದ ಶ್ರೀ ಸ್ವರ್ಣವರ್ಣತೀರ್ಥರು ಆಹ್ವಾನಿಸಿ ಅವರ ಸನ್ನಿಧಿಯಲ್ಲಿ ತಮ್ಮ ಶಿಷ್ಯರಲ್ಲಿ ಯಾರಾದರೂ ಯಥಾಶಕ್ತಿ ವ್ಯಾಖ್ಯಾನ ಮಾಡಲಿ ಎಂದು ಹೇಳಿದಾಗ ಆ ಸಂದರ್ಭದಲ್ಲಿ ಆದ್ಯಂತ ಸಾರಸಂಗ್ರಹ ಗ್ರಂಥಗಳಿಂದ ಕೂಡಿದ ಶ್ರೀಮನ್ನ್ಯಾಯಸುಧೆಯನ್ನೇ ವ್ಯಾಖ್ಯಾನಿಸಿದ ಆ ಯತಿವರೇಣ್ಯರು ನಮಗೆ ರಕ್ಷಕರಾಗಿರಲಿ.

ಸಾಯಂಕಾಲೇ ಕದಾಚಿತ್ ಗುಣಗಣಭರಿತೇ ಸ್ವರ್ಣವರ್ಣೇ ಯತೀಂದ್ರೇ
ದೂರೇಗ್ರಾಮಃ ಪುರಸ್ತಾತ್ಕಿಯತಿ ಕಥಯ ಮೇ ಬಾಲಕೇತಿ ಬ್ರುವಾಣೇ ।
ಸೂರ್ಯಂ ಮಾಂ ಸ್ಥೈರಭಾಂ ಸ್ವಂ ಸಕಲ ಬುಧಮಣೇ ಪಶ್ಯ ಕಿಂ ತ್ವಾಂ ಬ್ರುವೇಹಂ
ಯೋ ವಾದೀತ್ಸ್ವರ್ಣವರ್ಣಂ ಗುರುಮಿತಿ ಸಹಸಾ ಸೋಽವತಾನ್ಮಾಂ ಯತೀಂದ್ರಃ ॥ ೩ ॥

ಒಮ್ಮೆ ಗುಣಶಿಖಾಮಣಿಗಳಾದ ಸ್ವರ್ಣವರ್ಣಯತಿಗಳು ಪ್ರಯಾಣ ಮಾಡುತ್ತಾ, ಮುಂದೆ ಹೋಗಿದ್ದರು. ಅಲ್ಲಿಯೇ ಆಡುತ್ತಿದ್ದ ಬಾಲಕನನ್ನು ಬಳಿಗೆ ಕರೆದು, ಮಗು, ಗ್ರಾಮ ಇನ್ನೂ ಎಷ್ಟು ದೂರವಿದೆ ಎಂದು ಕೇಳಿದರು. ಆಗ ಆ ಬಾಲಕನು ನಸುನಗುತ್ತಾ ಮುಳುಗುವ ಸೂರ್ಯನನ್ನೂ ಕಂಗೆಡದೆ ಇನ್ನೂ ಇಲ್ಲೇ ಇರುವ ನನ್ನನ್ನೂ ನೋಡಿ ವಿವೇಕಿಗಳಾದ ತಾವೇ ಗ್ರಾಮದ ದೂರ ಊಹಿಸಿಕೊಳ್ಳಿ ಎಂದು ಸ್ವರ್ಣವರ್ಣಯತಿಗಳ ಮುಂದೆ ಸರಸರನೆ ಸರಸವಾಗಿಯೇ ಮಾತನಾಡಿದನು. ಅಂತಹ ಆ ಬಾಲಕನೇ ಮುಂದಿನ ಶ್ರೀಪಾದರಾಜರು, ಅವರು ನನ್ನನ್ನೂ ಸಹ ಬೇಗನೇ ಅನುಗ್ರಹಿಸಲಿ.

ಜಿತ್ವಾನೀಶಂ ನೃಪೇಣ ಪ್ರಬಲ ಗಜಪತಿಂ ಕಂಕಣದ್ವಂದ್ವಮೇಕಂ
ಯಸ್ಮೈ ದತ್ತಂ ಮನೋಜ್ಞಂ ತದನು ನರಪತೇ ಭೋಗನಾರ್ಯೋ ನಿಶಾಯಾಂ ।
ಯದ್ರೂಪಃ ಶ್ರೀರಮೇಶಃ ಪರಿಜನಸಹಿತೇ ಜಾಗರೂಕೇ ದ್ವಿತೀಯಮ್
ದತ್ತಂ ಭೂಪಾಳಮೌಳೌ ಪುನರಪಿ ದದತಾಸೋಽವತಾನ್ಮಾಂ ಯತೀಂದ್ರಃ॥೪॥

ಒಮ್ಮೆ ಸಾಳ್ವ ನರಸಿಂಹನು ಗಜಪತಿ ಮಹಾರಾಜನನ್ನು, ಗೆದ್ದುದರ ಕುರುಹಾಗಿ ಶ್ರೀಪಾದರಾಜರಿಗೆ ಗೌರವಪೂರ್ವಕವಾಗಿ ವಜ್ರಮಯವಾದ ಒಂದು ಕಂಕಣವನ್ನು ಸಮರ್ಪಿಸಿ ಮತ್ತೊಂದನ್ನು ತನ್ನ ಬಳಿಯೇ ಇರಿಸಿಕೊಂಡಿದ್ದ, ಆ ಕಂಕಣವು. ರಂಗವಿಠ್ಠಲನ ಲೀಲೆಯಿಂದಾಗಿ ಪ್ರಸಿದ್ಧ ನರ್ತಕಿಯ ಕೈಯಲ್ಲಿ ಕಂಗೊಳಿಸುತ್ತಿದ್ದಿತು. (ಭಗವಂತನೇ ಶ್ರೀಪಾದರಾಜರ ರೂಪ ಧರಿಸಿ ಆ ನರ್ತಕಿಗೆ ಕೊಟ್ಟುಬಂದಿದ್ದ.) ಇದನ್ನು ಕಂಡ ರಾಜ ಅವಳಿಂದ ಅದನ್ನು ಪಡೆದುಕೊಂಡು ತಿಜೋರಿಯಲ್ಲಿ ಎರಡನ್ನೂ ಭದ್ರಪಡಿಸಿ ಶ್ರೀಪಾದರಾಜರ ಬಳಿಗೆ ಪರಿವಾರ ಸಮೇತನಾಗಿ ಬಂದು ತಾನು ಕೊಟ್ಟಿದ್ದ ಕಂಕಣವನ್ನು ನೋಡಬೇಕೆಂದು ಹಠ ಹಿಡಿದ. ಹುಸಿನಗೆ ನಗುತ್ತಲೇ ಗುರುಗಳು ಪೂಜಾಪೆಟ್ಟಿಗೆಗೆ ಕೈಹಾಕಿ ವಜ್ರಕಂಕಣ ತೆಗೆದು ತೋರಿಸಲು ಕಂಗಾಲಾದ ರಾಜ ಅದನ್ನು ತೆಗೆದುಕೊಂಡು ಅರಮನೆಗೆ ಹೊರಟ. ಪುನಃ ತಿಜೋರಿ ತೆಗೆದಾಗ ಅಲ್ಲಿ ಒಂದೇ ಕಂಕಣ ಇದ್ದುದನ್ನು ಕಂಡು ಶ್ರೀಪಾದರಾಜರತ್ತ ಮನ ತಿರುಗಿಸಿದ. ಅಂತಹ ಗುರುಗಳು ದುಡುಕುವ ನಮ್ಮನ್ನೂ ಸಲಹಲಿ.

ಪಾತುಃ ಶ್ರೀಪಾದರಾಜ ಸಖಿವರ ರಘುನಾಥಾರ್ಯಯುಕ್ತಃ ಕದಾಚಿತ್
ಗಂಗಾಸ್ನಾನಾಯ ಗಚ್ಛನ್ ಪತಿನೃಪಸದನಂ ಪ್ರಾಪ್ಯ ಭೈಕ್ಷಂ ಯಯಾಚೇ ।
ಪಾದಪ್ರಕ್ಷಾಳನಾರ್ಥಂ ಸ್ಥಿತವತಿ ಯತಿಪೇ ಭರ್ತ್ಸನಾದಸ್ಯ ಕೋಪಾತ್
ಗೇಹೇ ದಗ್ಧೇಽತಿ ನಮ್ರಂ ಪದಯುಗಳಗತಂ ಯೋ ರರಕ್ಷಾವನೀಶಮ್ ॥ ೫ ॥

ಶ್ರೀಪಾದರಾಜರು ತಮ್ಮ ಮಿತ್ರರಾದ ರಘುನಾಥಯತಿಗಳಿಂದ ಕೂಡಿದವರಾಗಿ ಗಂಗಾಸ್ನಾನಕ್ಕೆಂದು ಯಾತ್ರೆ ಆರಂಭಿಸಿದ್ದರು. ಆಗ ದಾರಿಯಲ್ಲಿ ರಾಜನು ಇವರಿಗೆ ಭಿಕ್ಷೆ ಏರ್ಪಡಿಸಲು ಒಪ್ಪಿ ಕಾಲ ತಳ್ಳತೊಡಗಿದನು. ಪಾದಪ್ರಕ್ಷಾಳನೆಗಾಗಿ ಎಂದು ರಾಜದ್ವಾರದಲ್ಲಿ ನಿಂತ ಶ್ರೀಪಾದರಾಜರು ನಿಧಾನತೆಗಾಗಿ ನಿಟ್ಟುಸಿರು ಬಿಟ್ಟರು. ಕಾಲವ್ಯರ್ಥವಾಯಿತೆಂಬ ಅವರ ಕೋಪದಿಂದ ಅರಮನೆಗೆ ಬೆಂಕಿ ಬಿದ್ದಿತು. ಅಪರಾಧವನ್ನು ಅರ್ಥಮಾಡಿಕೊಂಡ ರಾಜ ಶ್ರೀಪಾದರಾಜರ ಪಾದಕ್ಕೆ ಬಿದ್ದು ಪರಿತಪಿಸುತ್ತಿದ್ದ, ಅವನನ್ನು ರಕ್ಷಿಸಿದ ಶ್ರೀಪಾದರಾಜರು ನಮ್ಮನ್ನು ರಕ್ಷಿಸಲಿ.

ಯಚ್ಛಿಷ್ಯೋ ವ್ಯಾಸರಾಜಃ ಪ್ರತಿಭಟಜನತಾ ಸರ್ವಗರ್ವಾಪಹರ್ತಾ
ಕರ್ತಾ ಗ್ರಂಥತ್ರಯಸ್ಯ ಪ್ರತಿಭಟ ವಿಜಯ ಪ್ರೋಚ್ಚಶಾಸ್ತ್ರೋತ್ತಮಸ್ಯ ।
ಪ್ರಖ್ಯಾತಾ ಯತ್ಪ್ರಶಿಷ್ಯಾ ಜಗತಿ ಚ ವಿಜಯೀಂದ್ರಾಖ್ಯ ಯೋಗೀಂದ್ರಚಂದ್ರಾ
ಶ್ರೀಮತ್ ಶ್ರೀವಾದಿರಾಜ ಪ್ರಮುಖ ಯತಿವರಾ ಸೋಽವತಾನ್ಮಾಂ
ಯತೀಂದ್ರಃ ॥ ೬ ॥

ತಪಸ್ಸಂಪತ್ತಿನಂತೆ ಅವರ ಶಿಷ್ಯಸಂಪತ್ತೂ ಅಪಾರ. ಪ್ರತಿವಾದಿಗಳ ಗುಂಪಿನ ಗರ್ವವನ್ನೆಲ್ಲಾ ಅಪಹರಿಸುವ ಅವರೆಲ್ಲರ ಹೆಗ್ಗಳಿಕೆ, ಸ್ತೋತ್ರಗಳಿಗೆ ಪಾತ್ರರಾದ ಗ್ರಂಥತ್ರಯಕರ್ತೃಗಳೆಂದು ಪ್ರಖ್ಯಾತರಾದ ಶ್ರೀ ವ್ಯಾಸರಾಜರು ಇವರ ಶಿಷ್ಯರು. ಇನ್ನು ಅದ್ಭುತ ಗ್ರಂಥಕರ್ತೃಗಳಾದ ಯೋಗೀಂದ್ರಚಂದ್ರರೆಂದು ವಿಖ್ಯಾತರಾದ ಶ್ರೀ ವಿಜಯೀಂದ್ರರು ಇವರ ಪ್ರಶಿಷ್ಯರು ಶ್ರೀ ವಾದಿರಾಜರೇ ಮೊದಲಾದ ಪ್ರಮುಖ ಯತಿಗಳೂ ಸಹ ಶ್ರೀಪಾದರಾಜರ ಪ್ರಭಾವ ಪ್ರವಾಹದಲ್ಲಿ ತೇಲಿ ಬಂದವರೇ. ಅಂತಹ ಪ್ರೌಢರಾದ ಶ್ರೀಪಾದರಾಜರು ನಮ್ಮನ್ನು ರಕ್ಷಿಸಲಿ.

ಯದ್ವಾಗ್ವಜ್ರಾಭಿದೋಚ್ಛ ಪ್ರಬಲತಮ ಮಹಾಗ್ರಂಥ ವಜ್ರೇಣ ಹೃಷ್ಯ
ದುರ್ವಾದಿಕ್ಷ್ಮಾಧರಾಣಾಂ ಯತಿವರಸುರಪಚ್ಛೇದಯಾಮಾಸ ಪಕ್ಷಾನ್ ।
ಯಸ್ಯ ಶ್ರೀವಾದಿರಾಜ ಪ್ರಮುಖ ಯತಿವರ್ಯೈರ್ವಣಿತು ನೈವ ಶಕ್ಯಮ್
ಮಾಹಾತ್ಮ್ಯಂ ತಾಪಸೇಂದ್ರಃ ಸ ಭವತು ನಿತರಾಂ ಭೂಯಸೇ
ಶ್ರೇಯಸೇ ಮೇ ॥ ೭ ॥

ಶ್ರೀಮನ್ನ್ಯಾಯಸುಧೆಗೆ ವ್ಯಾಖ್ಯಾನವಾದ ವಾಗ್ವಜ್ರವೆಂಬ ಮಹಾಗ್ರಂಥ ವಜ್ರದ ಸಹಾಯದಿಂದ, ಯತಿಕುಲದೇವೇಂದ್ರರೆನಿಸಿದ ಶ್ರೀಪಾದರಾಜರು, ದುರ್ವಾದಿಗಳೆಂಬ ಪರ್ವತದ, ಅಹಂಕಾರಗಳೆಂಬ ರೆಕ್ಕೆಗಳನ್ನೆಲ್ಲಾ ಕತ್ತರಿಸಿದ್ದಾರೆ. ಅದರ ಮಹಾತ್ಮೆಯು ಯುಕ್ತಿಶೂರರಾದ ವಾದಿರಾಜರ ವರ್ಣನೆಗೆ ನಿಲುಕದೆ ಇರುವಷ್ಟು ನಿಬಿಡವಾದುದು. ಅಂತಹ ಅದ್ಭುತಗ್ರಂಥಕರ್ತೃಗಳಿಂದ, ತಾಪಸ ಶ್ರೇಷ್ಠರಾದ ಶ್ರೀಪಾದರಾಜರು ನಮಗೆ ಮಂಗಳ ನೀಡಲಿ.

ನೀಲಾಪಾರ್ಥಾರ್ಚಿತಾಂಘ್ರಿಃ ಕಲುಷಯ ಚ ಹರೇ ಭೀಮರಥ್ಯಾಸ್ಸುತೀರೇ
ರಂಗಕ್ಷೇತ್ರೇಽಥ ಗುಪ್ತಃ ಸಕಲ ಸುರಪತಿರ್ವೇಣುಗೋಪಾಲಕೃಷ್ಣ ।
ಸ್ವಪ್ನೇ ಲಬ್ಧೋಽಯಮಸ್ಯಾ ದ್ವಿಜವರ ಗುರವೇ ವ್ಯಾಸರಾಜಾಯ ಯೇನಾ-
ದಾಯೀ ಶ್ರೀಪಾದರಾಜಃ ಸ ಭವತು ನಿತರಾ ಭೂಯಸೇ ಶ್ರೇಯಸೇ
ಮೇ ॥ ೮ ॥

ಇತಿ ಶ್ರೀ ಶ್ರೀನಿಧಿಯತಿ ವಿರಚಿತ ಶ್ರೀ ಶ್ರೀಪಾದರಾಜಾಷ್ಟಕಂ ಸಂಪೂರ್ಣಮ್

ನೀಳಾದೇವಿ ಹಾಗೂ ಅರ್ಜುನರಿಂದ ಆರಾಧಿಸಲ್ಪಟ್ಟ ಹರಿಯ ಆ ಪ್ರತಿಮೆ ಭೀಮರಥೀ ನದೀ ತೀರದ ಪಾಂಡುರಂಗಕ್ಷೇತ್ರದಲ್ಲಿ ಅಡಗಿಹೋಗಿತ್ತು. ಆ ವೇಣು ಗೋಪಾಲನ ಪ್ರತಿಮೆ ಮುಂಚೆ ಸ್ವಪ್ನದಲ್ಲಿ ನಿರ್ದೇಶಿಸಲ್ಪಟ್ಟು ಅನಂತರ ಪ್ರಾಪ್ತವಾಗಿತ್ತು. ಅದನ್ನು ಶ್ರೀಪಾದರಾಜರೇ ವ್ಯಾಸರಾಜರಿಗೆ ಆದರದಿಂದ ನೀಡಿದರು. ಅಂತಹ ಶ್ರೀಪಾದರಾಜರು ನಮಗೆ ನಿರಂತರ ಮಂಗಳಕ್ಕೆ ಕಾರಣ ರಾಗಲಿ.

ಹೀಗೆ ಶ್ರೀ ಶ್ರೀನಿಧಿಯತಿಗಳಿಂದ ರಚಿತವಾದ
ಶ್ರೀ ಶ್ರೀಪಾದರಾಜಾಷ್ಟಕವೆಂಬ ಸ್ತೋತ್ರವು ಮುಗಿಯಿತು.

★ ★ ★

ಶ್ರೀ ಶ್ರೀನಿಧಿಯತಿ ವಿರಚಿತ

ನವಪದ್ಯಸುರತ್ನಮಾಲಾ

ಶ್ರೀಕಾಂತತೀರ್ಥ ಗುರುರಾಜ ಕರಾಬ್ಜಜಾತ
ಶ್ರೀ ಶ್ರೀನಿಧಿರ್ಯತಿರುದಾರ ಗುಣೋಲ್ಲಸಂತೀಮ್ ।
ಶ್ರೀಪಾದರಾಜ ನವಪದ್ಯ ಸುರತ್ನಮಾಲಾಂ
ಭಕ್ತ್ಯಾ ಕರೋಮಿ ಗುರುರಾಜ ವರಪ್ರಸಾದಾತ್ ॥ ೧ ॥

ಶ್ರೀಕಾಂತತೀರ್ಥ ಗುರುಗಳ ಕರಕಮಲಸಂಜಾತರಾದ ಗುಣನಿಧಿಗಳಾದ ಶ್ರೀಶ್ರೀನಿಧಿತೀರ್ಥರೆಂಬ ನಾವು ಶ್ರೀಪಾದರಾಜರ ಬಗೆಗೆ ನವಪದ್ಯಗಳ ಒಂದು ರತ್ನಮಾಲೆಯನ್ನು ಶ್ರೀಪಾದರಾಜರ ಅನುಗ್ರಹದಿಂದ ಭಕ್ತಿಯಿಂದ ರಚಿಸಿರುವೆ.

ಶ್ರೀಪೂರ್ಣಬೋಧಕುಲವಾರ್ಧಿಸುಧಾಕರಾಯ
ಶ್ರೀವ್ಯಾಸರಾಜಗುರವೇ ಯತಿಶೇಖರಾಯ ।
ಶ್ರೀರಂಗವಿಠ್ಠಲಪದಾಂಬುಜ ಬಂಭರಾಯ
ಶ್ರೀಪಾದರಾಜ ಗುರವೇಽಸ್ತು ನಮಶ್ಶುಭಾಯ ॥ ೨ ॥

ಶ್ರೀಪೂರ್ಣಬೋಧರೆಂಬ ಮಧ್ವಾಚಾರ್ಯರ ವಂಶಸಾಗರದಲ್ಲಿ ಕಂಗೊಳಿಸುವ ಚಂದ್ರನೆನಿಸಿದ, ವ್ಯಾಸರಾಜರಿಗೂ ಗುರುಗಳಾದ; ರಂಗವಿಠ್ಠಲನ ಪಾದಕಮಲದಲ್ಲಿ ಆಸ್ವಾದಿಸುತ್ತಾ ಮುಳುಗಿರುವ ದುಂಬಿಯೆನಿಸಿದ, ಮಂಗಳಪ್ರದವಾದ ಶ್ರೀಪಾದರಾಜರಿಗೆ ನಮಸ್ಕಾರಗಳು.

ಸಂಪೂರಿತಾಖಿಲ ಜನೋರು ಮನೋರಥಾಯ
ಶ್ರೀಮನ್ನೃಸಿಂಹಸರಸೀತಟ ಸಂಸ್ಥಿತಾಯ ।
ಶ್ರೀಮತ್ಸುವರ್ಣವರ್ಣಸಮವರ್ಣ ಕರಾಬ್ಜಜಾಯ
ಶ್ರೀಪಾದರಾಜಗುರವೇಽಸ್ತು ನಮಶ್ಶುಭಾಯ ॥ ೩ ॥

ಎಲ್ಲ ಜನರ ಎಲ್ಲ ಬಗೆಯ ಮನೋರಥಗಳನ್ನು ಕೈಗೂಡಿಸುವ, ನೃಸಿಂಹ ಸರೋವರದ ತಟದಲ್ಲಿಯೇ ಸಂಸ್ಥಾಪಿತರಾಗಿರುವ, ಸ್ವರ್ಣವರ್ಣತೀರ್ಥರ ಕರಕಮಲಸಂಜಾತರಾದ, ಪರಮಮಂಗಳಕರರಾದ, ಶ್ರೀಪಾದರಾಜಗುರುಗಳಿಗೆ ನಮಸ್ಕಾರಗಳು.

ಶ್ರೀವ್ಯಾಸರಾಜ ಫಣಿಬಂಧ ನಿವಾರಕಾಯ
ತದ್ಭಾಷಯೈವ ಫಣಿರಾಜ ಸುತೋಷಕಾಯ ।
ಶ್ರೀಮತ್ಸುರತ್ನ ಖಚಿತೋಜ್ಜ್ವಲ ಕುಂಡಲಾಯ
ಶ್ರೀಪಾದರಾಜ ಗುರವೇऽಸ್ತು ನಮಶ್ಶುಭಾಯ ॥ ೪ ॥

ಶ್ರೀವ್ಯಾಸರಾಜರಿಗೆ ಒದಗಿದ ಸರ್ಪಬಂಧವನ್ನು ಸರಳವಾಗಿಯೇ ಬಿಡುಗಡೆ ಗೊಳಿಸಿದ, ಸರ್ಪದ ಭಾಷೆಯಿಂದಲೇ ಮಾತನಾಡಿ ಪದ್ಮನಾಭತೀರ್ಥರಿಗೂ ಪರಮ ಸಂತೋಷ ತಂದ, ಚೆನ್ನಾಗಿ ರತ್ನಖಚಿತವಾದ ಕಂಗೊಳಿಸುವ ಕರ್ಣಕುಂಡಲ ಗಳುಳ್ಳ ಪರಮಮಂಗಳಕರರಾದ ಶ್ರೀಪಾದರಾಜರಿಗೆ ನಮಸ್ಕಾರಗಳು.

ಶ್ರೀಗೋಪಿಕಾಪತಿ ನಿವೇದಿತ ಷಷ್ಟಿಶಾಕ-
ಮುಖ್ಯೋರು ಭೋಜನ ವಿದೂಷಣ ತತ್ಪರಾಣಾಮ್ ।
ಸಂದರ್ಶಿತೋರು ನಿಜಕುಕ್ಷಿಗತಾದ್ರ್ರಶಾಕಾನ್
ಶ್ರೀಪಾದರಾಜ ಗುರವೇऽಸ್ತು ನಮಶ್ಶುಭಾಯ ॥ ೫ ॥

ಗೋಪೀವಲ್ಲಭನಾದ ಭಗವಂತನಿಗೆ ಅರವತ್ತಕ್ಕೂ ಮೀರಿದ ಬಗೆಬಗೆಯ ಕಾಯಿಪಲ್ಲೆಗಳನ್ನೂ ನಿವೇದಿಸಿದ ಮಹಾಮಹಿಮರು. ಶ್ರೀಪಾದರಾಜರು ಹಸಿ ಯಾದುದನ್ನೇ ನಿವೇದಿಸಿದ್ದಾರೆಂದು ಹಸಗಳಿಯುವ ಜನರಿಗೆ ತಮ್ಮ ಉದರದಲ್ಲೂ ಹಸಿತರಕಾರಿಗಳಂತೇ ಇವೆಯೆಂದು ನಿರೂಪಿಸಿದ ನಿಚ್ಚಳ ಭಕ್ತರು ಶ್ರೀಪಾದ ರಾಜರು. ಅವರು ನಮಗೆ ಮಂಗಳ ಮಾಡಲಿ.

ಶ್ರೀಮದ್ಯತೀಶ ರಘುನಾಥ ಮುನೇರ್ವಿಮಾನಾತ್
ಪುಷ್ಪೇ ಸ್ವಮೂರ್ಧ್ನಿಪ್ರತತಿ ಪ್ರಸಮೀಕ್ಷ್ಯಚೋಕ್ತಾ ।
ಸಂಪ್ರೇರಿತೋರು ರಘುನಾಥ ಮುನೀಶ್ವರಾಯ
ಶ್ರೀಪಾದರಾಜ ಗುರವೇऽಸ್ತು ನಮಶ್ಶುಭಾಯ ॥ ೬ ॥

ರಘುನಾಥಯತಿಗಳು ವಿಮಾನದಲ್ಲಿ ಅಗೋಚರರಾಗಿ ಪಯಣಿಸುತ್ತಿರು ವಾಗಲೇ ಮೇಲಿಂದ ತಮ್ಮ ಮೇಲೆ ಬಿದ್ದ ಹೂವನ್ನು ತಿಳಿದೇ ಶ್ರೀಪಾದರಾಜರು ಕತ್ತೆತ್ತಿ ನೋಡಿದರು. ಅವರ ಪಯಣದಂತೆ ರಘುನಾಥ ಯತಿಗಳ ಅಂತರಂಗ ವನ್ನೂ ಅರಿತ ಶ್ರೀಪಾದರಾಜರು ದೈವೀಸಂಕೇತವನ್ನು ತಾವೂ ಸಹ ಅರಿತರು. ಅಂತಹ ಪರಮ ಮಂಗಳಕರರಾದ ಶ್ರೀಪಾದರಾಜರು ನಮಗೆ ಮಂಗಳ ಮಾಡಲಿ.

ಶಂಖಸ್ಥಿತೇನ ಪಯಸಾ ದ್ವಿಜಘಾತಪಾಪೇ
ದೂರೀಕೃತೇ ಬಹುಜನೇಷು ವಿ ಶಂಕಿತೇಷು ।
ತೇನೈವ ಶುದ್ಧಮಲಿನಾತಿಪಟಚ್ಛರಾಯ
ಶ್ರೀಪಾದರಾಜ ಗುರವೇಽಸ್ತು ನಮಶ್ಶುಭಾಯ ॥ ೭ ॥

ಭಯಂಕರವಾದ ಬ್ರಹ್ಮಹತ್ಯೆಯು ಭೂಪಾಲನಿಗೆ ಬಂದೊದಗಲು ಶ್ರೀಪಾದರಾಜರು ಕೇವಲ ಶಂಖೋದಕದಿಂದಲೇ ಅದನ್ನು ದೂರ ಮಾಡಿದರು. ಬ್ರಹ್ಮಹತ್ಯೆಯು ಹೊರಟುಹೋಗಿದ್ದರೂ ಬಳಿಯಿದ್ದವರ ಸಂಶಯ ಇನ್ನೂ ಹೋಗಿರಲಿಲ್ಲ. ಅವರೆಲ್ಲಾ ಶಂಕಿಸಿದಾಗ ನಿಶ್ಶಂಕಿತವಾಗಿ ಗೇರು ಎಣ್ಣೆಯಲ್ಲಿ ಅದ್ದಿ ಕಪ್ಪಾಗಿದ್ದ ಬಟ್ಟೆಯನ್ನೇ ತಿರುಗಿ ಬಿಳಿಯನ್ನಾಗಿಸಿ ನಿಶ್ಚಯಮಾಡಿಸಿದ ಪರಮಮಂಗಳಕರರಾದ ಶ್ರೀಪಾದರಾಜರಿಗೆ ನಮಸ್ಕಾರಗಳು.

ಶ್ರೀಮನ್ನೃಸಿಂಹಸರಸೀ ಪಯಸಿ ಪ್ರಮೋದಾ-
ದ್ಧ್ಯಾಯಾಮಿ ತಿಷ್ಠ ಸರಸೀ ಶುಭಕಾರಿ ತೀರೇ ।
ಸ್ವಪ್ನೇನಿಬೋಽಧ್ಯ ನಳಿನೀ ಜಯದಕ್ಷಗಾಭೂತ್
ಶ್ರೀಪಾದರಾಜಗುರವೇಽಸ್ತು ನಮಶ್ಶುಭಾಯ ॥ ೮ ॥

'ನೀನಿರುವ ನೃಸಿಂಹತೀರ್ಥದ ನೀರಿನಲ್ಲೇ ನಾ ಬಂದು ನೆಲೆಸುವೆ. ನನಗಾಗಿ ನೀನು, ತೀರದಲ್ಲೇ ನಿಂತಿರು' ಎಂದು ಕನಸಿನಲ್ಲೇ ಸೂಚಿಸಿದ ಆ ಗಂಗೆ ತಿಳಿಸಿದಂತೆ ಶ್ರೀಪಾದರಾಜರಿಗಾಗಿ ಆ ನೀರಿನಲ್ಲೇ ಬಂದು ನೆಲೆಸಿದಳು. ನೂರಾರು ಜನರಿಗೆ ಗಂಗಾಸ್ನಾನ ಸುಲಭವಾಯಿತು. ಅಂತಹ ಮಂಗಳಕರರಾದ ಶ್ರೀಪಾದರಾಜರಿಗೆ ನಮ್ಮ ನಮಸ್ಕಾರಗಳು.

ದುರ್ವಾದಿವಾರಣ ವಿದಾರಣ ದೀಕ್ಷಿತಾಯ
ಶ್ರೀಮದ್ರಮೇಶಚರಣಾಬ್ಜಗುಹಾಶ್ರಯಾಯ ।
ವ್ಯಾಖ್ಯಾನಿನಾದ ರುಚಿರೋರು ಮೃಗಾಧಿಪಾಯ
ಶ್ರೀಪಾದರಾಜ ಗುರವೇಽಸ್ತು ನಮಶ್ಶುಭಾಯ ॥ ೯ ॥

ದುರ್ವಾದಿಗಳೆಂಬ ಮದಗಜಗಳನ್ನು ಬಗ್ಗುಬಡಿಯುವುದರಲ್ಲಿ ಪಣ ತೊಟ್ಟ, ರಮಾಪತಿಯಾದ ಗೋಪೀನಾಥನ ಪಾದಕಮಲಗಳೆಂಬ ನಿವಾಸದಲ್ಲೇ ನೆಲೆಸಿರುವ, ವ್ಯಾಖ್ಯಾನ ಮಾಡುವ ಸ್ಪಷ್ಟತೆಯಲ್ಲಿ, ಧ್ವನಿಯಲ್ಲಿ, ಸಿಂಹದಂತಿರುವ ಪರಮಮಂಗಳಕರರಾದ ಶ್ರೀಪಾದರಾಜರಿಗೆ ನಮಸ್ಕಾರಗಳು.

ಕಸ್ತೂರಿಕಾದಿ ಸಮಲಂಕೃತ ದಿವ್ಯದೇಹಂ
ದೃಷ್ಟ್ವಾವಿದೂಷಯತಿ ಮೂಢಜನೇ ಕ್ಷಣೇನ ।
ತತ್ತ್ಯಾಗಧಾರಿತ ತನೂಃ ಪರಿರಕ್ಷಕಾಯ
ಶ್ರೀಪಾದರಾಜ ಗುರುವೇಽಸ್ತು ನಮಶ್ಶುಭಾಯ ॥ ೧೦ ॥

ಕಸ್ತೂರಿ, ರತ್ನ, ವೈಢೂರ್ಯ ಮೊದಲಾದ ರಾಜಠೀವಿಯಿಂದ ಅಲಂಕೃತರಾದ ಈ ಯತಿವರ್ಯರನ್ನು ಕಂಡು ಮೂಢಜನರು ಇವರಿಗೆ ವೈರಾಗ್ಯವೇ ಇಲ್ಲ ಎಂದು ಮೂದಲಿಸಿದರು. ಆ ಕ್ಷಣದಲ್ಲೇ ಅವನ್ನು ತೊರೆದ ಶರೀರವನ್ನು ಪ್ರದರ್ಶಿಸಿ ಶೋಭಿಸಿದ ತಮ್ಮ ಪರಿವಾರದವರನ್ನೂ ಪರಿಪರಿಯಾಗಿ ರಕ್ಷಿಸುವ ಪರಮ ಮಂಗಳಕರರಾದ ಶ್ರೀಪಾದರಾಜರು ನಮಗೆ ಮಂಗಳ ಮಾಡಲಿ.

ಶ್ರೀಪಾದರಾಜ ನವಪದ್ಯ ಸುರತ್ನಮಾಲಾಂ
ಯೇಧಾರಯಂತ್ಯನುದಿನಂ ಭುವಿಶುದ್ಧಭಾವಾಃ ।
ವೃಂದಾವನಸ್ಯ ಪುರತಸ್ಸಕಲೇಷ್ಟದಶ್ಚ
ಶ್ರೀಪಾದರಾಜಗುರುರಾಜ ಹೃದಬ್ಜವಾಸೀ ॥ ೧೧ ॥

ಶ್ರೀ ಶ್ರೀನಿಧಿಯತಿ ವಿರಚಿತ ನವಪದ್ಯಸುರತ್ನಮಾಲಾ ಸಂಪೂರ್ಣಮ್

ಶ್ರೀಪಾದರಾಜರನ್ನು ಕುರಿತಾದ ಈ ನವರತ್ನ ಶ್ಲೋಕಮಾಲಿಕೆಯನ್ನು ವೃಂದಾವನದ ಮುಂದೆ ನಿರ್ಮಲ ಮನೋಭಾವದಿಂದ ಯಾರು ಪ್ರತಿದಿನವೂ ಪಠಿಸುವರೋ ಅವರಿಗೆ ಶ್ರೀಪಾದರಾಜರ ಹೃದಯಾಂತರ್ಯಾಮಿಯಾದ ಭಗವಂತನು ಎಲ್ಲ ಬಗೆಯ ಅಭೀಷ್ಟಗಳನ್ನು ನೀಡುವನು.

ಹೀಗೆ ಶ್ರೀ ಶ್ರೀನಿಧಿಯತಿಗಳಿಂದ ರಚಿತವಾದ ನವಪದ್ಯಸುರತ್ನಮಾಲಾ
ಎಂಬ ಸ್ತೋತ್ರವು ಮುಗಿಯಿತು.

★ ★ ★

ಶ್ರೀ ವಿಜಯೀಂದ್ರಭಿಕ್ಷುವಿರಚಿತ

ಶ್ರೀ ವ್ಯಾಸರಾಜಸ್ತೋತ್ರಮ್

ವಂದೇ ಮುಕುಂದಮರವಿಂದಭವಾದಿವಂದ್ಯಂ
ಇಂದಿಂದಿರಾಪ್ರತತಮೇಚಕಮಾಕಟಾಕ್ಷಮ್ ।
ಬಂದೀಕೃತಾಮರಮಮಂದಮತಿಂ ವಿದಧ್ಯಾ-
ದಾನಂದತೀರ್ಥಹೃದಯಾಂಬುಜಮತ್ತಭೃಂಗಃ ॥ ೧ ॥

ನಾನು ಮೋಕ್ಷಪ್ರದನಾದ ಶ್ರೀಹರಿಯನ್ನು ವಂದಿಸುತ್ತೇನೆ. ಆತನು ಕಮಲೋದ್ಭವನಾದ ಚತುರ್ಮುಖನೇ ಮೊದಲಾದ ದೇವತೆಗಳಿಂದ ವಂದ್ಯನು; ದುಂಬಿಯ ಬಣ್ಣದಂತೆ, ವಿಸ್ತಾರವಾದ ಕಪ್ಪು ಬಣ್ಣವುಳ್ಳ ಲಕ್ಷ್ಮೀಕಟಾಕ್ಷಕ್ಕೆ ಪಾತ್ರನು; ಎಲ್ಲ ದೇವತೆಗಳೂ ಅವನ ಸೇವಕರೇ ಆಗಿದ್ದಾರೆ.

ಶ್ರೀಮದಾನಂದತೀರ್ಥರ ಹೃದಯ (ಅಭಿಪ್ರಾಯ ಅಥವಾ ಮತ)ವೆಂಬ ಕಮಲದಲ್ಲಿ ಮದಿಸಿರುವ ದುಂಬಿಯಂತೆ ಮುತ್ತಿಕೊಂಡಿರುವ ಶ್ರೀವ್ಯಾಸತೀರ್ಥ ಯತಿಗಳು ನನಗೆ ದಡ್ಡತನವಿಲ್ಲದಿರುವಂತೆ ಸದ್ಬುದ್ಧಿಯನ್ನು ದಯಪಾಲಿಸಲಿ.

ಶ್ರೀವ್ಯಾಸಯೋಗೀ ಹರಿಪಾದರಾಗೀ
ಭಕ್ತಾತಿಪೂಗೀ ಹಿತದಕ್ಷಸದ್ಗೀಃ ।
ತ್ಯಾಗೀ ವಿರಾಗೀ ವಿಷಯೇಷು ಭೋಗೀ
ಮುಕ್ತೌ ಸದಾ ಗೀತಸುರೇಂದ್ರಸಂಗೀ ॥ ೨ ॥

ಲಕ್ಷ್ಮೀಶಪಾದಾಂಬುಜಮತ್ತಭೃಂಗಃ
ಸದಾ ದಶಪ್ರಜ್ಞನಯಪ್ರಸಂಗಃ ।
ಅದ್ವೈತವಾದೇ ಕೃತಮೂಲಭಂಗಃ
ಮಹಾವ್ರತೀಶೋ ವಿಷಯೇಷ್ವಸಂಗಃ ॥ ೩ ॥

ಸದಾ ಸದಾಯತ್ತಮಹಾನುಭಾವಃ
ಭಕ್ತಾಘತೂಲೋಚ್ಚಯತೀವ್ರದಾವಃ ।
ದೌರ್ಜನ್ಯವಿಧ್ವಂಸನದಕ್ಷರಾವಃ
ಶಿಷ್ಯಾಶ್ಚ ಯೋ ಯಚ್ಛತಿ ದಿವ್ಯಗಾವಃ ॥ ೪ ॥

ಅದ್ವೈತದಾವಾನಲಕಾಲಮೇಘಃ
ರಮಾರಮಸ್ನೇಹವಿದಾರಿತಾಘಃ ।
ವಾಗ್ವೈಖರೀನಿರ್ಜಿತಸಜ್ಜನೌಘಃ
ಮಾಯಾಮತವ್ರಾತಹಿಮೇ ನಿದಾಘಃ ॥ ೫ ॥

ಮಧ್ವಸಿದ್ಧಾಂತದುಗ್ಧಾಬ್ಧಿವೃದ್ಧಿ ಪೂರ್ಣಕಲಾಧರಃ ।
ವ್ಯಾಸರಾಜಯತೀಂದ್ರೋ ಮೇ ಭೂಯಾದೀಪ್ಸಿತಸಿದ್ಧಯೇ ॥ ೬ ॥

(ಶ್ರೀವ್ಯಾಸರಾಜಯತೀಶ್ವರರನ್ನು ಮುಂದಿನ 5 ಶ್ಲೋಕಗಳಿಂದ ಹೊಗಳುತ್ತಾರೆ. ಇಲ್ಲಿ ಐದು ಶ್ಲೋಕಗಳನ್ನೂ ಒಟ್ಟಾಗಿಯೇ ಸೇರಿಸಿ ತಾತ್ಪರ್ಯ ಬರೆಯಲಾಗಿದೆ.)

ಶ್ರೀವ್ಯಾಸತೀರ್ಥಯೋಗಿವರ್ಯರು ಶ್ರೀಹರಿಯ ಪಾದಗಳಲ್ಲಿಯೇ ಸದಾ ಆಸಕ್ತಿ ಹೊಂದಿದವರು; ಅವರಿಗೆ ಭಕ್ತರ ದೊಡ್ಡ ಗುಂಪೇ ಇದೆ; ಅವರು ಹಿತವಾಗಿಯೂ ಸಮರ್ಥವಾಗಿಯೂ ನುಡಿಯಬಲ್ಲರು; ಅವರು ದಾನಶೀಲರು, ವಿಷಯಸುಖಗಳಲ್ಲಿ ವೈರಾಗ್ಯ ತಾಳಿದವರು, ಮುಂದೆ ಮುಕ್ತಿಯಲ್ಲಿ ಭೋಗ ಪಡುವವರು, ಯಾವಾಗಲೂ ಗಾನಮಾಡಲ್ಪಟ್ಟ ದೇವತೆಗಳೊಡನೆ ಸಂಬಂಧವುಳ್ಳವರು; (ಭಕ್ತರಿಂದ ಸ್ತೋತ್ರ ಮಾಡಲ್ಪಡುತ್ತಿರುವ ವಿಷ್ಣು, ಬ್ರಹ್ಮ, ರುದ್ರಾದಿ ದೇವತೆಗಳೊಡನೆ ಭಕ್ತಿವ್ಯವಹಾರವುಳ್ಳವರು).

ವ್ಯಾಸರಾಜರು ಲಕ್ಷ್ಮೀಪತಿಯಾದ ಶ್ರೀಹರಿಯ ಪಾದಕಮಲಗಳಲ್ಲಿ ಆನಂದದಿಂದ ಮದಿಸಿದ ದುಂಬಿಯಂತೆ ಇರುವವರು; ಯಾವಾಗಲೂ ಅವರು ಶ್ರೀಮದಾನಂದತೀರ್ಥರು ರಚಿಸಿದ ಶಾಸ್ತ್ರಗಳ ಪಾಠಪ್ರವಚನದಲ್ಲಿ ನಿರತರಾಗಿರುವರು; ಅದ್ವೈತವಾದದ ಮೂಲವನ್ನೇ ಅವರು ನಾಶಮಾಡಿದವರು; ಯತಿಶ್ರೇಷ್ಠರಲ್ಲಿ ಅವರು ಹಿರಿಯರು; ಯಾವ ಇಂದ್ರಿಯ ಸುಖದಲ್ಲಿಯೂ ಅವರು ಆಸಕ್ತಿ ಪಡೆದವರಲ್ಲ.

ಯಾವಾಗಲೂ ಗುರುಗಳು ಸಜ್ಜನರಲ್ಲಿ ಮಹಾ ಅನುಭಾವವನ್ನು ತೋರುವರು; ಭಕ್ತರ ಪಾಪಗಳೆಂಬ ಹತ್ತಿಯ ರಾಶಿಗೆ ಅವರು ಕಾಡುಕಿಚ್ಚಿನಂತೆ ಇರುವರು; ದೌರ್ಜನ್ಯವನ್ನು ನಿರ್ಮೂಲ ಮಾಡಲು ಸಮರ್ಥವಾಗುವಂತಹ ಧ್ವನಿ ಅವರದು; ಶಿಷ್ಯರೇ! ನಿಮಗೆ ಅವರು ತಮ್ಮ ದಿವ್ಯವಾಣಿಯಿಂದ ಉಪದೇಶ ನೀಡುವರು.

ಅದ್ವೈತಸಿದ್ಧಾಂತವೆಂಬ ಕಾಡುಕಿಚ್ಚನ್ನು ನಿರ್ಮೂಲ ಮಾಡುವುದರಲ್ಲಿ ವ್ಯಾಸರಾಜರು ಕಾಲಮೇಘದಂತೆ ಇರುವರು. (ದಾವಾಗ್ನಿಯನ್ನು ಪ್ರಚಂಡವಾದ

ಮಳೆಯೇ ಶಾಂತಗೊಳಿಸಬಲ್ಲದು) ರಮಾರಮಣನಾದ ಶ್ರೀಹರಿಯ ಸ್ನೇಹವನ್ನು ಸಂಪಾದಿಸಿ ಅವರು ಎಲ್ಲ ಪಾಪಗಳನ್ನೂ ನಾಶಗೊಳಿಸಬಲ್ಲರು. ಗುರುಗಳು ತಮ್ಮ ಮಾತಿನ ಚಾತುರ್ಯದಿಂದ ಸಜ್ಜನರ ಸಮೂಹವನ್ನೇ ಗೆದ್ದು ತಮ್ಮವರನ್ನಾಗಿ ಮಾಡಿಕೊಳ್ಳುವರು. (ದುರ್ಜನರು ಎಂಥ ನಯವಾದ ಮಾತಿಗೂ ಸೋತು ಬಗ್ಗುವರಲ್ಲವಷ್ಟೆ?) ಮಾಯಾವಾದದ ನಾನಾ ಮತ (ಅಭಿಪ್ರಾಯ)ಗಳೆಂಬ ಹಿಮಕ್ಕೆ ಗುರುಗಳು ಬೇಸಿಗೆಯಂತೆ ವಿನಾಶಕರು.

ಶ್ರೀವ್ಯಾಸರಾಜಯತಿವರ್ಯರು ಮಧ್ವಮತವೆಂಬ ಕ್ಷೀರಸಮುದ್ರಕ್ಕೆ ವೃದ್ಧಿಯಿಂದ ಪೂರ್ಣಕಲಾಯುಕ್ತನಾದ ಚಂದ್ರನಂತಿದ್ದು ಆ ಮತದ ವಿಕಾಸಕ್ಕೆ ಕಾರಣರಾದರು. ಅವರು ನನ್ನ ಇಷ್ಟಾರ್ಥಗಳನ್ನು ಪೂರೈಸಲಿ.

ಯನ್ನಾಮಗ್ರಹಣಾದೇವ ಪಾಪರಾಶಿಃ ಪಲಾಯತೇ ।
ಸೋಽಯಂ ಶ್ರೀವ್ಯಾಸಯೋಗೀಂದ್ರೋ ನಿಹಂತು ದುರಿತಾನಿ ನಃ ॥ ೭ ॥

ಯಾವ ಗುರುಗಳ ಹೆಸರನ್ನು ಹೇಳಿದರೇ ಪಾಪರಾಶಿ ಓಡಿಹೋಗುವುದೋ ಅಂಥ ಶ್ರೀ ವ್ಯಾಸತೀರ್ಥರು ನಮ್ಮ ಎಲ್ಲ ಪಾಪಗಳನ್ನೂ ನಾಶಮಾಡಲಿ.

ಯನ್ಮೃತ್ತಿಕಾದರ್ಶನಮಾತ್ರಭೀತಃ
ಕ್ವಚಿತ್ಪಿಶಾಚಸ್ತದನುವ್ರತೇಭ್ಯಃ ।
ದತ್ವಾ ಧನಂ ವಾಂಛಿತಮಾಪ್ಯ ತಸ್ಯ
ತೈರ್ವಾ ಜಿತೋಽಯಾದಚಿರೇಣ ಮುಕ್ತಿಮ್ ॥ ೮ ॥

ಒಮ್ಮೆ ಶ್ರೀ ವ್ಯಾಸರಾಜರ ಮೃತ್ತಿಕೆಯನ್ನು ನೋಡಿದ ಕೂಡಲೇ ಒಂದು ಪಿಶಾಚವು ತುಂಬ ಹೆದರಿ ಅವರ ಶಿಷ್ಯರಿಗೆ ಬೇಕಾದಷ್ಟು ಹಣವನ್ನು ಸಂಪಾದಿಸಿ ಕೊಟ್ಟಿತು. ಅವರ ಶಿಷ್ಯರಿಂದ ವಾದದಲ್ಲಿ ಸೋತು ಯಥಾರ್ಥವಾದ ಸಿದ್ಧಾಂತ ವನ್ನು ಅರಿತು, ಅದು ಪಿಶಾಚ ಜನ್ಮದಿಂದ ಬಿಡುಗಡೆ ಹೊಂದಿತು!

ಯತ್ಕೌಶಿಕಾನಾಸಿಕಾಕ್ತಜಲಾನ್ನಿಃಶಂಕಿತೇ ನರೇ ।
ವ್ಯಾಘ್ರೋ ಮಹಾನಪಿ ಸ್ಪ್ರಷ್ಟುಂ ನಾಶಕತ್ತ್ವಾಮಿಹಾಶ್ರಯೇ ॥ ೯ ॥

ಗುರುಗಳೇ! ನಿಮ್ಮ ಕಮಂಡಲಿನ ಮೂತಿಯಿಂದ ಬಂದ ನೀರಿನಿಂದ ಪ್ರೋಕ್ಷಿಸಲ್ಪಟ್ಟವನಾಗಿ ಒಬ್ಬ ಮನುಷ್ಯನು ಧೈರ್ಯ ಹೊಂದಿದಾಗ (ಅವನಿಗೆ ಸಮೀಪದಲ್ಲಿ ಎದುರಾದ) ಹೆಬ್ಬುಲಿಯು ಅವನನ್ನು ಮುಟ್ಟಲಾರದೆಯೇ ಹೋಯಿತು! (ಅಂಥ ಪ್ರಭಾವಶಾಲಿಯಾದ) ನಿಮ್ಮ ಆಶ್ರಯ ಪಡೆಯುವೆ.

ದ್ವಾತ್ರಿಂಶತ್ಸಪ್ತಶತಕಮೂರ್ತೀರ್ಹನುಮತಃ ಪ್ರಭೋಃ ।
ಪ್ರತಿಷ್ಠಾಪ್ಯ ತಾ ಸ್ಮೃತಿಖ್ಯಾತಸ್ತಂ ಭಜೇ ವ್ಯಾಸಯೋಗಿನಮ್ ॥ ೧೦ ॥

ಶ್ರೀ ವ್ಯಾಸಯೋಗೀಂದ್ರರು ಪ್ರಾಣದೇವರ ೭೩೨ ಮೂರ್ತಿಗಳನ್ನು ನಾನಾ ಸ್ಥಳಗಳಲ್ಲಿ ಪ್ರತಿಷ್ಠೆ ಮಾಡಿ, ಅದರಿಂದ ಎಲ್ಲರ ನೆನಪಿನಲ್ಲಿಯೂ ಪ್ರಸಿದ್ಧರಾಗಿ ಉಳಿದರು. ಅವರನ್ನು ನಾನು ಸೇವಿಸುವೆ.

ಸೀಮಾನಂ ತತ್ರ ತತ್ರೈತ್ಯ ಕ್ಷೇತ್ರೇಷು ಚ ಮಹಾಮತಿಃ ।
ವ್ಯವಸ್ಥಾಪ್ಯಾತ್ರ ಮರ್ಯಾದಾಂ ಲಬ್ಧವಾಂಸ್ತಮಿಹಾಶ್ರಯೇ ॥ ೧೧ ॥

ಅತ್ಯಂತ ಬುದ್ಧಿವಂತರಾದ ಗುರುಗಳು ಅಲ್ಲಲ್ಲಿ ಕ್ಷೇತ್ರವಿಶೇಷಗಳಿಗೆ ಹೋದಾಗ ಗಡಿ ವಿವಾದಗಳನ್ನು ಪರಿಹರಿಸಿ ಜನರ ಮನ್ನಣೆ ಪಡೆದರು. ಅವರನ್ನು ನಾನೀಗ ಆಶ್ರಯಿಸುತ್ತೇನೆ.

(ಒಮ್ಮೆ ಗುರುಗಳು ಶ್ರೀರಂಗಕ್ಷೇತ್ರಕ್ಕೆ ಹೋದಾಗ ಅಲ್ಲಿನ ವಿಷ್ಣುದೇವಾಲಯದ ಭಕ್ತರಿಗೂ ಸಮೀಪದಲ್ಲಿನ ಜಂಬುಕೇಶ್ವರಕ್ಷೇತ್ರದ ಶಿವಭಕ್ತರಿಗೂ ದೇವಸ್ಥಾನಗಳ ಎಲ್ಲೆ ವಿಚಾರವಾಗಿ ವಿವಾದ ಏರ್ಪಟ್ಟು ಗೊಂದಲವಾಯಿತು. ಶ್ರೀವ್ಯಾಸರಾಜರು ಮಧ್ಯಸ್ಥರಾಗಿದ್ದು "ನಾನು ಶ್ರೀರಂಗನಾಥನ ದೇವಾಲಯದಿಂದ ಹೊರಟು ಉಸಿರುಕಟ್ಟಿ ಜಂಬುಕೇಶ್ವರನ ಗುಡಿಯ ದಿಕ್ಕಿನಲ್ಲಿ ಓಡುತ್ತೇನೆ. ಎಲ್ಲಿ ನನ್ನ ಉಸಿರಾಟಕ್ಕೆ ತೊಂದರೆಯಾಗಿ ನಾನು ಮತ್ತೆ ಉಸಿರೆಳೆಯುತ್ತೇನೆಯೋ ಆ ಸ್ಥಳ ಇಬ್ಬರಿಗೂ ಮೇರೆಯಾಗಲಿ" ಎಂದು ಸಲಹೆ ಕೊಟ್ಟರು. ಎರಡು ಕಡೆಯವರೂ ಒಪ್ಪಿದ ಮೇಲೆ ಗುರುಗಳು ಶ್ರೀರಂಗದೇವಾಲಯದಿಂದ ಓಡುತ್ತಾ ಸ್ವಲ್ಪವೂ ಆಯಾಸವಿಲ್ಲದೆ ಶಿವದೇವಾಲಯದ ಸಮೀಪವನ್ನು ತಲುಪಿ ಉಸಿರೆಳೆದರು. ಒಪ್ಪಂದದ ಪ್ರಕಾರ ಜಂಬುಕೇಶ್ವರನ ದೇವಸ್ಥಾನದವರೆಗೆ ಶ್ರೀರಂಗನಾಥ ದೇವಾಲಯದ ವ್ಯಾಪ್ತಿ ಸ್ಥಿರಪಟ್ಟಿತು. ಎಲ್ಲರೂ ವ್ಯಾಸರಾಜರ ಬುದ್ಧಿವಂತಿಕೆ, ಸಾಮರ್ಥ್ಯಗಳನ್ನು ಮೆಚ್ಚಿಕೊಂಡು ಅವರನ್ನು ಗೌರವಿಸಿದರು.)

ಮಧ್ವದೇಶಿಕಸಿದ್ಧಾಂತಪ್ರವರ್ತಕಶಿಖಾಮಣಿಃ ।
ಸೋಽಯಂ ಶ್ರೀ ವ್ಯಾಸಯೋಗೀಂದ್ರೋ ಭೂಯಾದೀಪ್ಸಿತಸಿದ್ಧಯೇ ॥ ೧೨ ॥

ಗುರುವರ್ಯರಾದ ಶ್ರೀಮಧ್ವಾಚಾರ್ಯರ ದ್ವೈತಸಿದ್ಧಾಂತವನ್ನು ಪ್ರಚಾರ ಮಾಡಿದವರಲ್ಲಿ ಅಗ್ರಗಣ್ಯರಾದ ಶ್ರೀವ್ಯಾಸತೀರ್ಥರು ನಮ್ಮ ಇಷ್ಟಾರ್ಥವನ್ನು ಸಾಧಿಸಿಕೊಡಲಿ.

ಭೂತಪ್ರೇತಪಿಶಾಚಾದ್ಯಾ ಯಸ್ಯ ಸ್ಮರಣಮಾತ್ರತಃ ।
ಪಲಾಯಂತೇ ಶ್ರೀನೃಸಿಂಹಸ್ಥಾನಂ ತಮಹಮಾಶ್ರಯೇ ॥ ೧೩ ॥

ಯಾವ ಗುರುಗಳನ್ನು ನೆನೆಸಿಕೊಂಡಮಾತ್ರದಿಂದಲೇ ಭೂತ ಪ್ರೇತ ಪಿಶಾಚಾದಿಗಳು ನಮ್ಮನ್ನು ಬಿಟ್ಟು ಓಡಿಹೋಗುವುವೋ ಹಾಗೆ (ಭೂತೋಚ್ಚಾಟನ ಕಾರ್ಯದಲ್ಲಿ) ನರಸಿಂಹದೇವರಂತಿರುವ ಗುರುಗಳನ್ನು ಆಶ್ರಯಿಸುತ್ತೇನೆ.

(ರಾಕ್ಷಸಾದಿಗಳ ಕಾಟದಿಂದ ಸಜ್ಜನರಿಗೆ ಒದಗಿದ ಬಾಧೆಯನ್ನು ತಪ್ಪಿಸಿದ ನರಸಿಂಹದೇವನ ಪರಮ ಭಕ್ತನಾದ ಪ್ರಹ್ಲಾದನ ಅವತಾರರಾದ ವ್ಯಾಸರಾಜ ಸ್ವಾಮಿಗಳನ್ನು ನೆನೆದರೇ ಭೂತ ಪ್ರೇತ ಪಿಶಾಚಾದಿಗಳ ತೊಂದರೆ ತಪ್ಪುವುದು ಸಹಜವೇ ಆಗಿದೆ.)

ವಾತಜ್ವರಾದಿರೋಗಾಶ್ಚ ಭಕ್ತ್ಯಾ ಯಮುಪಸೇವಿನಃ ।
ದೃಢವ್ರತಸ್ಯ ನಶ್ಯಂತಿ ಪಿಶಾಚಾಶ್ಚ ತಮಾಶ್ರಯೇ ॥ ೧೪ ॥

ಯಾವ ಗುರುಗಳನ್ನು ಭಕ್ತಿಯಿಂದ ಸೇವಿಸುತ್ತಾ ದೃಢವ್ರತವನ್ನು ಕೈಗೊಂಡ ಮನುಷ್ಯನಿಗೆ ವಾಯುರೋಗ, ಜ್ವರತಾಪ ಮುಂತಾದ ಶರೀರದ ನಾನಾ ಖಾಯಿಲೆಗಳೂ ಮನೋವಿಕಾರವನ್ನುಂಟುಮಾಡುವ ಪಿಶಾಚಾದಿಬಾಧೆಗಳೂ ನಾಶಹೊಂದುವುವೋ, ಅವರ ಆಶ್ರಯವನ್ನು ನಾನು ಪಡೆಯುವೆ.

ತಾರಪೂರ್ಣಂ ಬಿಂದುಯುಕ್ತಪ್ರಥಮಾಕ್ಷರಪೂರ್ವಕಮ್ ।
ಚತುರ್ಥ್ಯಂತಂ ಚ ತನ್ನಾಮ ನಮಃಶಬ್ದಾಂತಭೂಷಿತಮ್ ॥ ೧೫ ॥

ಓಂಕಾರವನ್ನು ಮೊದಲು ಮಾಡಿ ಗುರುಗಳ ಹೆಸರಿನ ಚತುರ್ಥೀ ವಿಭಕ್ತಿಗೆ ನಮಃ ಶಬ್ದವನ್ನು ಸೇರಿಸಿ "ಓಂ ಶ್ರೀ ವ್ಯಾಸರಾಜಾಯ ನಮಃ" ಎಂದು ಜಪಿಸಬೇಕು.

ಪಾಠಯಂತಂ ಮಧ್ವನಯಂ ಮೇಘಗಂಭೀರಯಾ ಗಿರಾ ।
ಧ್ಯಾಯನ್ನಾವರ್ತಯೇದ್ಯಸ್ತು ಭಕ್ತ್ಯಾ ಮೇಧಾಂ ಸ ವಿಂದತೇ ॥ ೧೬ ॥

ಮೋಡದಂತೆ ಗಂಭೀರವಾದ ಶಬ್ದಗಳುಳ್ಳವರಾಗಿ ಮಧ್ವಮತದ ಶಾಸ್ತ್ರ ಗ್ರಂಥಗಳನ್ನು ಶಿಷ್ಯರಿಗೆ ಪಾಠ ಹೇಳುತ್ತಿರುವ ವ್ಯಾಸಮುನಿಗಳನ್ನು ಯಾವನು ಪುನಃ ಪುನಃ ಧ್ಯಾನ ಮಾಡುತ್ತಾನೆಯೋ ಅವನು ಸದ್‌ಜ್ಞಾನವನ್ನು ಪಡೆಯುವನು.

ರತ್ನಸಿಂಹಾಸನಾರೂಢಂ ಚಾಮರೈರಭಿವೀಜಿತಮ್ ।
ಧ್ಯಾಯನ್ನಾವರ್ತತೇ ಯಸ್ತು ಮಹತೀಂ ಶ್ರಿಯಮಾಪ್ನುಯಾತ್ ॥

ರತ್ನಸಿಂಹಾಸನವನ್ನೇರಿ ಭಕ್ತರಿಂದ ಚಾಮರಗಳಿಂದ ಬೀಸಿಸಿಕೊಳ್ಳಲ್ಪಡುತ್ತಿರುವ ಗುರುಗಳ ಮೂರ್ತಿಯನ್ನು ಮತ್ತೆ ಮತ್ತೆ ಧ್ಯಾನ ಮಾಡುವವನು ಉತ್ತಮವಾದ ಸಂಪತ್ತನ್ನು ಗಳಿಸುವನು.

ಪ್ರಹ್ಲಾದಸ್ಯಾವತಾರೋಽಸಾವಿಂದ್ರಸ್ಯಾನುಪ್ರವೇಶವಾನ್ ।
ತೇನ ತತ್ಸೇವಿನಾಂ ನೃಣಾಂ ಸರ್ವಮೇತದ್ಭವೇದ್ಧ್ರುವಮ್ ॥ ೧೮ ॥

ಈ ಗುರುಗಳು ಪ್ರಹ್ಲಾದನ ಅವತಾರ ಹೊಂದಿದವರು; ಇಂದ್ರನ ಆವೇಶವೂ ಇವರಲ್ಲಿದೆ; ಆದುದರಿಂದಲೇ ಇವರ ಸೇವೆ ಮಾಡುವ ಸಜ್ಜನರಿಗೆ ಉತ್ತಮ ಜ್ಞಾನ, ಐಶ್ವರ್ಯ ಮೊದಲಾದುವೆಲ್ಲ ಖಂಡಿತವಾಗಿಯೂ ಲಭಿಸುವುವು.

ನಮೋ ವ್ಯಾಸಮುನೀಂದ್ರಾಯ ಭಕ್ತಾಭೀಷ್ಟಪ್ರದಾಯಿನೇ ।
ನಮತಾಂ ಕಲ್ಪತರವೇ ಭಜತಾಂ ಕಾಮಧೇನವೇ ॥ ೧೯ ॥

ಭಕ್ತರ ಇಷ್ಟಾರ್ಥಗಳನ್ನು ಸಲ್ಲಿಸುವ, ನಮಸ್ಕಾರ ಮಾಡುವ ಜನರಿಗೆ ಕಲ್ಪವೃಕ್ಷದಂತಿರುವ ಮತ್ತು ತಮ್ಮನ್ನು ಸೇವಿಸುವವರಿಗೆ ಕಾಮಧೇನುವಿನಂತೆ ಮನೋರಥಗಳನ್ನು ಪೂರೈಸುವ ಮುನಿಶ್ರೇಷ್ಠರಾದ ವ್ಯಾಸತೀರ್ಥರಿಗೆ ನಮಸ್ಕಾರ.

ವ್ಯಾಸರಾಜಗುರೋ ಮಹ್ಯಂ ತ್ವತ್ಪಾದಾಂಬುಜಸೇವನಾತ್ ।
ದುರಿತಾನಿ ವಿನಶ್ಯಂತು ಯಚ್ಛ ಶೀಘ್ರಂ ಮನೋರಥಾನ್ ॥ ೨೦ ॥

ಶ್ರೀವ್ಯಾಸರಾಜ ಗುರುಗಳೇ, ತಮ್ಮ ಪಾದಕಮಲಗಳ ಸೇವೆ ಮಾಡುತ್ತಿರುವ ನನ್ನ ಪಾಪಗಳೆಲ್ಲ ನಾಶಹೊಂದಲಿ; ತಾವು ಬೇಗ ನನ್ನ ಮನೋರಥಗಳನ್ನು ಪೂರೈಸಿರಿ.

ಯೋ ವ್ಯಾಸತ್ರಯಸಂಜ್ಞಕಾನ್ ದೃಢತರಾನ್ ಮಧ್ವಾರ್ಯಶಾಸ್ತ್ರಾರ್ಥಕಾನ್
ರಕ್ಷದ್ವಜ್ರಶಿಲಾಕೃತೀನ್ ಬಹುಮತಾನ್ ಕೃತ್ವಾ ಪರೈರ್ದುಸ್ತರಾನ್ ।
ಪ್ರಾಯಚ್ಛನ್ನಿಜಪಾದಪದ್ಮಸರಸೀಜಾಸಕ್ತನೃಣಾಂ ಮುದಾ
ಸೋಽಯಂ ವ್ಯಾಸಮುನೀಶ್ವರೋ ಭವತು ಮೇ ತಾಪತ್ರಯಕ್ಷಾಂತಯೇ ॥೨೧॥

ಶ್ರೀವ್ಯಾಸರಾಜರು ತಮ್ಮ ಪಾದಕಮಲಗಳಲ್ಲಿ ಆಸಕ್ತರಾದ ಭಕ್ತರ ಸಂತೋಷಕ್ಕಾಗಿ ವ್ಯಾಸತ್ರಯವೆಂದು ಪ್ರಸಿದ್ಧವಾದ ತಾತ್ಪರ್ಯಚಂದ್ರಿಕಾ, ನ್ಯಾಯಾಮೃತ, ತರ್ಕ ತಾಂಡವವೆಂಬ ಮೂರು ಸುಭದ್ರವಾದ ಗ್ರಂಥಗಳನ್ನು ರಚಿಸಿಕೊಟ್ಟರು; ಅವು ಮಧ್ವಾಚಾರ್ಯರ ಸಿದ್ಧಾಂತದ ಅರ್ಥಗಳನ್ನು ಪೋಷಿಸುವಂಥವು; ದುಷ್ಟರಿಂದ ನಮ್ಮನ್ನು ಕಾಪಾಡಿಕೊಳ್ಳಲು ಸಮರ್ಥವಾದ ವಜ್ರದ ಗಟ್ಟಿಯಂತಿರುವುವು; ಅನೇಕ ವಿದ್ವಾಂಸರಿಂದ ಮನ್ನಣೆ ಪಡೆದವು; ಇತರ ಮತಗಳನ್ನು ಪ್ರತಿಪಾದಿಸುವ ವಿದ್ವಾಂಸರಿಂದ ಖಂಡಿಸಲು ಸಾಧ್ಯವಿಲ್ಲದಂತಹವು. ಇಂಥ ಉತ್ತಮ ಗ್ರಂಥಗಳನ್ನು ರಚಿಸಿ ನಮಗೆ ಉಪಕಾರ ಮಾಡಿದ ಗುರುಗಳು ನಮ್ಮ ತಾಪತ್ರಯಗಳನ್ನು ಶಾಂತಿಗೊಳಿಸಲಿ.

ಮಧ್ವಭಕ್ತೋ ವ್ಯಾಸಶಿಷ್ಯಪೂರ್ಣಪ್ರಜ್ಞಮತಾನುಗಃ ।
ವ್ಯಾಸರಾಜಮುನಿಶ್ರೇಷ್ಠಃ ಪಾತು ನಃ ಕೃಪಯಾ ಗುರುಃ ॥ ೨೨ ॥

ಶ್ರೀಮನ್ಮಧ್ವಾಚಾರ್ಯರ ಪರಮ ಭಕ್ತರೂ, ವೇದವ್ಯಾಸರ ಪ್ರಿಯಶಿಷ್ಯರೂ ಪೂರ್ಣಪ್ರಜ್ಞರ ಮತವನ್ನು ಅವಲಂಬಿಸಿದವರೂ ಆದ ವ್ಯಾಸರಾಜರೆಂಬ ಮುನಿವರ್ಯರು ದಯೆಯಿಂದ ನಮ್ಮನ್ನು ಕಾಪಾಡಲಿ.

ವ್ಯಾಸರಾಜ ವ್ಯಾಸರಾಜ ಇತಿ ಭಕ್ತ್ಯಾ ಸದಾ ಜಪನ್ ।
ಮುಚ್ಯತೇ ಸರ್ವದುಃಖೇಭ್ಯಸ್ತದಂತರ್ಯಾಮಿಣೋ ಬಲಾತ್ ॥ ೨೩ ॥

'ವ್ಯಾಸರಾಜರು, ವ್ಯಾಸರಾಜರು' ಎಂದು ಭಕ್ತಿಯಿಂದ ಜಪಮಾಡುತ್ತಿರುವವನು ಅವರ ಅಂತರ್ಯಾಮಿಯಾದ ಶ್ರೀಹರಿಯ ಸಾಮರ್ಥ್ಯದಿಂದ ತನ್ನ ಎಲ್ಲ ಪಾಪಗಳಿಂದಲೂ ಬಿಡುಗಡೆ ಹೊಂದುತ್ತಾನೆ.

ಸ್ತುವನ್ನನೇನ ಮಂತ್ರೇಣ ವ್ಯಾಸರಾಜಾಯ ಧೀಮತೇ ।
ಅಭಿಷೇಕಾರ್ಚನಾದೀನ್ಯಃ ಕುರುತೇ ಸ ಹಿ ಮುಕ್ತಿಭಾಕ್ ॥ ೨೪ ॥

ಈ ವ್ಯಾಸರಾಜ ಮಂತ್ರದಿಂದ ("ಓಂ ಶ್ರೀವ್ಯಾಸರಾಜಾಯ ನಮಃ" ಎನ್ನುತ್ತಾ) ಪ್ರಾಜ್ಞರಾದ ಗುರುಗಳಿಗೆ ಅಭಿಷೇಕ, ಪೂಜೆ, ಮಂಗಳಾರತಿ, ನಮಸ್ಕಾರ ಮೊದಲಾದುವನ್ನು ಮಾಡುವವನು ಸಂಸಾರದ ನಾನಾ ದುಃಖಗಳಿಂದ ಮುಕ್ತಿ ಪಡೆಯುವನು.

ಗುರುಭಕ್ತ್ಯಾ ಭವೇದ್ವಿಷ್ಣುಭಕ್ತಿರವ್ಯಭಿಚಾರಿಣೀ ।
ತಯಾ ಸರ್ವಂ ಲಭೇದ್ಧೀಮಾಂಸ್ತಸ್ಮಾದೇತತ್ಸದಾ ಪಠೇತ್ ॥ ೨೫ ॥

ಗುರುಗಳಲ್ಲಿ ಭಕ್ತಿಯನ್ನು ಹೊಂದಿದ್ದರೆ, ವಿಷ್ಣುವಿನಲ್ಲಿಯೂ ಶಾಶ್ವತವಾದ ಭಕ್ತಿ ಹುಟ್ಟುವುದು, ಅದರಿಂದ ಎಲ್ಲ ಇಷ್ಟಾರ್ಥಸಿದ್ಧಿಯೂ ಆಗುವುದು. ಆದುದರಿಂದ ಈ ಗುರುಸಂಕೀರ್ತನೆಯನ್ನು ಸದಾ ಮಾಡಬೇಕು.

ಶ್ರೀಪರಮಹಂಸಪರಿವ್ರಾಜಕಾಚಾರ್ಯಾಣಾಂ ಶ್ರೀಸುರೇಂದ್ರತೀರ್ಥ
ಪೂಜ್ಯಪಾದಾನಾಂ ಶಿಷ್ಯೇಣ ವಿಜಯೀಂದ್ರಭಿಕ್ಷುಣಾ ವಿರಚಿತಂ
ಶ್ರೀ ವ್ಯಾಸರಾಜಸ್ತೋತ್ರಂ ಸಂಪೂರ್ಣಮ್

ಶ್ರೀ ವಿದ್ಯಾರತ್ನಾಕರತೀರ್ಥ ವಿರಚಿತ

ಶ್ರೀ ವ್ಯಾಸರಾಜಗುರುಸಾರ್ವಭೌಮ ಚರಿತ್ರಮ್

ಲಕ್ಷ್ಮೀಂ ವಕ್ಷಸಿ ಬಿಭ್ರತಂ ನರಹರಿಂ ದೇವಂ ಪ್ರಣಮ್ಯಾಮಿತ
ಪ್ರಜ್ಞಾದೀನ್ ಗುರುಪುಂಗವಾನಪಿ ತಥಾ ಶ್ರೀವ್ಯಾಸಯೋಗೀಶಿತುಃ ।
ಆಸಂಭೂತಿಕೃತಾನಿ ಸಂಸ್ಮೃತವತೋಽಭೀಷ್ಟಪ್ರದಾನೀಶಿತುಃ
ವಿಷ್ಣೋಃ ಪ್ರೀತಿಕೃತೇ ವದಾಮಿ ಸುಜನಾಃ ತುಷ್ಯಂತು ಬಾಲೋಕ್ತಿಭಿಃ ॥ ೧ ॥

ತನ್ನ ಎದೆಯಲ್ಲಿ ಲಕ್ಷ್ಮಿಯನ್ನು ಧರಿಸಿರುವ ದೇವನಾದ ನರಸಿಂಹನನ್ನು ನಮಸ್ಕರಿಸಿ, ಪೂರ್ಣಪ್ರಜ್ಞರೇ ಮೊದಲಾದ ಗುರುಗಳನ್ನೂ ಗೌರವದಿಂದ ವಂದಿಸಿ, ಸ್ಮರಣೆಮಾತ್ರದಿಂದಲೇ ಸಕಲ ಸಂಪತ್ತನ್ನೂ ನೀಡುವ, ಅಭೀಷ್ಟದ ಮಳೆಗರೆಯುವ ವ್ಯಾಸರಾಜರ ದಿವ್ಯಚರಿತ್ರೆಯನ್ನು ವಿಷ್ಣುಪ್ರೀತಿಗಾಗಿ ನಾನು ಸ್ತುತಿಸುವೆ. ಸಜ್ಜನರು ನನ್ನ ಬಾಲೋಕ್ತಿಗಳಿಂದ ಸಂತಸಪಡಲಿ.

ರಾಮಾಚಾರ್ಯ ಸುಧೀಮಣೇರ್ದಯಿತಯಾ ಗರ್ಭೇ ಧೃತಃ ಶ್ರೀಮತೋ
ಬ್ರಹ್ಮಣ್ಯಸ್ಯ ಯತೀಶಿತುಃ ಕರುಣಯಾ ಸಂವತ್ಸರೇಷ್ವಾದಿಮೇ ।
ವೈಶಾಖಾದಿಮಪಕ್ಷಕೇ ದಿನಮಣೇರ್ವಾರೇ ದಿನೇ ಸಪ್ತಮೇ
ಪ್ರಹ್ಲಾದೋಽವತತಾರ ಭೂಮಿವಲಯೇ ನಾಗಾಧಿಪಸ್ಯಾಂಶಭೃತ್ ॥ ೨ ॥

ಬ್ರಹ್ಮಣ್ಯತೀರ್ಥರ ಅನುಗ್ರಹದ ಆಸರೆಯಿಂದ ಜ್ಞಾನಿಗಳಾದ ರಾಮಾಚಾರ್ಯರೆಂಬುವರ ಪತ್ನೀ ಲಕ್ಷ್ಮೀದೇವಿಯಲ್ಲಿ ವೈಶಾಖಮಾಸದ ಭಾನುವಾರದಂದು ಸಪ್ತಮಿಯ ದಿನದಂದು ಪ್ರಹ್ಲಾದರಾಜರು ಭುವಿಗಿಳಿದು ಬಂದರು. ಅವರಲ್ಲಿ ಶೇಷದೇವರ ಅಂಶವೂ ಸಹ ಅಡಗಿಕೊಂಡಿತ್ತು.

ಅಬ್ದೇ ಪಂಚಮತಾಯುತೇ ವಟುರಭೂತ್ ತುರ್ಯಾಶ್ರಮಂ ಶ್ರೀಮುಖೇ
ಜಗ್ರಾಹಾಥ ಯತೀಶಿತುರ್ವಚನತೋ ಬ್ರಹ್ಮಣ್ಯನಾಮ್ನೋ ಗುರೋಃ ।
ವಿದ್ಯಾಪ್ರಾಪ್ತಿಕೃತೇ ಯತೀಶಮಗಮತ್ ಶ್ರೀಪಾದರಾಜಾಭಿದಂ
ಅಬ್ದಾನ್ ದ್ವಾದಶ ತತ್ರ ವಾಸಮಕರೋತ್ ಶೃಣ್ವನ್ಮಹೇಕ್ಷಾಗಮಮ್ ॥ ೩ ॥

ಐದನೆಯವರ್ಷಕ್ಕೆ ಉಪನಯನ ಮುಗಿಸಿಕೊಂಡ ಈ ಯತಿರಾಜನು ಬ್ರಹ್ಮಣ್ಯತೀರ್ಥರಿಂದ ಸನ್ಯಾಸಾಶ್ರಮವನ್ನು ಶ್ರೀಮುಖ ಸಂವತ್ಸರದಲ್ಲಿ ಸ್ವೀಕರಿಸಿ

ದನು. ಬ್ರಹ್ಮಣ್ಯತೀರ್ಥರ ಅನುಜ್ಞೆಯಂತೆ ವಿದ್ಯಾಪ್ರಾಪ್ತಿಗಾಗಿ ಶ್ರೀ ಶ್ರೀಪಾದರಾಜರ ಬಳಿಗೆ ಬಂದರು. ಶ್ರೀ ವ್ಯಾಸರಾಜರು ಅವರ ಬಳಿಯಲ್ಲಿ ಹನ್ನೆರಡು ವರ್ಷಗಳ ಪರ್ಯಂತ ಸಕಲಶಾಸ್ತ್ರಗಳನ್ನು ಶ್ರವಣಮಾಡಿ ಅಭ್ಯಸಿಸಿದರು.

ಅಬ್ದೇ ಸರ್ವಜಿದಾಹ್ವಯೇ ಯತಿವರಾತ್ ವೈಶಾಖಮಾಸಾಸಿತ-
ದ್ವಾದಶ್ಯಾಮಗಮದ್ಯದೂದ್ವಹಪದಾಬ್ಜಾರ್ಚಾಧಿಕಾರಂ ಮುನೇಃ ।
ಬ್ರಹ್ಮಣ್ಯಾಭಿದಯಾ ಯುತಾದಥ ತತಾನಾಯಂ ಪರೈರ್ದುಷ್ಕರಾನ್
ಗ್ರಂಥನ್ಸ್ವಾಮೃತ ತರ್ಕತಾಂಡವಮುಖಾನ್ ಅಷ್ಟೌ ಹರೇಃ ಪ್ರೀತಯೇ ॥ ೪ ॥

ಸರ್ವಜಿತ್ ಸಂವತ್ಸರದಲ್ಲಿ ವೈಶಾಖಮಾಸದ ಕೃಷ್ಣಪಕ್ಷದಲ್ಲಿ ಬ್ರಹ್ಮಣ್ಯತೀರ್ಥರು ಇವರಿಗೆ ಸಂಸ್ಥಾನಾಧಿಪತಿಯ ಪಾದಾರವಿಂದಗಳನ್ನು ಪೂಜಿಸುವ ಭಾಗ್ಯ ಕರುಣಿಸಿದರು. ಆ ಕೃಷ್ಣನ ಪೂಜಾಧಿಕಾರ ಪ್ರಾಪ್ತಿಯ ಅನಂತರದಲ್ಲಿ ಬೇರೆ ಯಾರಿಂದಲೂ ಮಾಡಲಾಗದ ನ್ಯಾಯಾಮೃತ, ತರ್ಕತಾಂಡವವೇ ಮೊದಲಾದ ಎಂಟು ಅದ್ಭುತ ಗ್ರಂಥಗಳನ್ನು ಭಗವಂತನ ಪ್ರೀತಿಗಾಗಿ ರಚಿಸಿದ ವಿದ್ವತ್ ಚೂಡಾಮಣಿಗಳೇ ಶ್ರೀ ವ್ಯಾಸರಾಜರು.

ಮೂರ್ತೀಸ್ಸಪ್ತಶತಂ, ಪ್ಲವಂಗಮಪತೇಃ ದ್ವಾತ್ರಿಂಶದಪ್ಯಂಜ
ಸೂನೋರ್ನಿರ್ಮಮ ಈಷಶತೋಃಷಣಕೃತೇ ರೌದ್ರ್ಯಾಹ್ವಮಾಬ್ದೇ ಶಕೇ ।
ಶಾಲೀವಾಹನನಾಮ್ನಿ, ಯುಗ್ಮಯುಗಳಂ ಚತ್ವಾರಿ ಚೈಕಂ ಲಿಖನ್
ಯಾಂ ಸಂಖ್ಯಾಂ ಮನಸಾ ದಧಾತಿ ತದಿಯಂ ಸಂಖ್ಯಾಯತಃ ಪೂರ್ಯತೇ ॥೫॥

ವಾಯುದೇವರ ಅವತಾರಿಗಳಾದ ಅಂಜನಾಪುತ್ರ ಹನುಮಂತದೇವರ ೭೩೨ ಪ್ರತಿಮೆಗಳನ್ನು ಹರಿಯ ಪ್ರೀತಿಗಾಗಿ ನಿರ್ಮಿಸಿ ರೌದ್ರೀ ಸಂವತ್ಸರದಲ್ಲೇ ಸಂಸ್ಥಾಪಿಸಿದ ಮಹಾಸಾಧಕರೇ ಶ್ರೀ ವ್ಯಾಸರಾಜರು ಮತ್ತೆ ಶಾಲಿವಾಹನ ಬಹುಧಾನ್ಯ ಸಂವತ್ಸರದಲ್ಲಿ ಜೋಡಿಯಾಗಿ ನಾಲ್ಕು ಕಡೆ ಪ್ರಾಣದೇವರ ಪ್ರತಿಮಾಗಳನ್ನು ಪ್ರತಿಷ್ಠಾಪಿಸಿ ೭೪೦ ಸಂಖ್ಯಾಪೂರ್ತಿಯೊಡನೆ ಜ್ಞಾನದ ಪ್ರಚಾರವನ್ನೂ ಮಾಡಿದ ವ್ಯಾಸರಾಜರು ಮಹನೀಯರು.

ಅಬ್ದೇ ತಾದೃಶಿ ಯಾವನಾಧಿಪತಿತೋ ಲೇಭೇ ಮಹಾವೈಭವಂ
ಭೇರ್ಯುಷ್ಟ್ರಾದ್ಯಮನನ್ಯಲಭ್ಯಮುರುಣಾ ತುಷ್ಟ್ಯಾನ್ಮಹಿಮ್ನಾಽಽತ್ಮನಃ ।
ಅಬ್ದೇ ವಿಕ್ರಮನಾಮಕೇಽಂತಿಮದಿನೇ ಮಾಘಸ್ಯ ಕೃಷ್ಣಾಭಿಧಂ
ಶ್ರೀಮಂತಂ ಗಜಗಹ್ವರಾವನಿಭೃತಂ ಸೋಽವ್ಯಾತ್ ಕುಹೂತ್ಥಾಪದಃ ॥ ೬ ॥

ಅದೇ ಸಂವತ್ಸರದಲ್ಲಿ ತಮ್ಮ ತಪಶ್ಶಕ್ತಿ ಸನ್ನಡತೆಗಳಿಂದ ಯವನ ರಾಜನ ಮನಸ್ಸನ್ನೇ ಗೆದ್ದು ಧ್ವಜ ಮೊದಲಾದ ಅಷ್ಟವಾದ್ಯ ಗೌರವವನ್ನು ಗಳಿಸಿಕೊಂಡ ಮಹಾನುಭಾವರು ಶ್ರೀ ವ್ಯಾಸರಾಜರು. ವಿಕ್ರಮಸಂವತ್ಸರದ ಕೃಷ್ಣಪಕ್ಷದ ಅಮಾವಾಸ್ಯೆಯಂದು ಕರಾಳವಾಗಿ ಕಾಡುತ್ತಿದ್ದ ಕುಹುಯೋಗದ ದೆಸೆಯಿಂದ ಆನೆಗೊಂದಿ ರಾಜನನ್ನು ಕಾಪಾಡಿದ ಆ ಕರುಣಾಳುಗಳು ಶ್ರೀ ವ್ಯಾಸರಾಜರು. ಅವರು ನಮ್ಮನ್ನು ಸಹ ರಕ್ಷಿಸಲಿ.

ತತ್ಸಿಂಹಾಸನಮಾರುಹನ್ ಪ್ರಚುರ ಭೂದಾನಾದಿ ಸಂಸಾಧಯನ್
ತದ್ರಾಜ್ಯಂ ಪುನರರ್ಪಯತ್ ಕ್ಷಿತಿಭೃತೇ ಕೃಷ್ಣಾಭಿಧಾನಾಯ ಸಃ ।
ತತ್ಸಂವತ್ಸರಗಾಂ ತತ್ಯಮಾಸಿಧವಳೇ ಪಕ್ಷೇ ಹರೇರ್ವಾಸರೇ
ಷ್ಟಂತೇ ವ್ಯಾಸಸಮುದ್ರನಾಮಕಮದಾತ್ ಗ್ರಾಮಂ ಸ ಚಾಸ್ಮೈನೃಪಃ ॥ ೭ ॥

ಆ ಸಿಂಹಾಸನವನ್ನು ಏರುತ್ತಾ ಭೂದಾನವೇ ಮೊದಲಾದ ಸಕಲ ಗರಿಷ್ಠ ಕರ್ಮಗಳನ್ನು ಕೆಲವೇ ಗಳಿಗೆಗಳಲ್ಲಿ ಮಾಡುತ್ತಿದ್ದು ಕೃಷ್ಣದೇವರಾಯನಿಗೆ ಕಾಲದ ಕ್ರೂರದೃಷ್ಟಿ ಕೊನೆಗೊಳ್ಳುತ್ತಿರುವಾಗಲೇ ಪ್ರಭುವಾದ ಕೃಷ್ಣದೇವರಾಯನಿಗೆ ಪುನಃ ಸಿಂಹಾಸನವನ್ನು ನೀಡಿದ ನಿಸ್ಪೃಹರು ಶ್ರೀ ವ್ಯಾಸರಾಜರು. ಅದೇ ವಿಕ್ರಮ ಸಂವತ್ಸರದ ಕೊನೆಗೆ ಶುಕ್ಲಪಕ್ಷದ ಏಕಾದಶಿಯ ದಿನದಂದು ವ್ಯಾಸಸಮುದ್ರವೆಂದು ಹೆಸರಿಸಲ್ಪಟ್ಟ ಗ್ರಾಮವನ್ನು ಕೃಷ್ಣದೇವರಾಯನೇ ವ್ಯಾಸರಾಜರಿಗೆ ಸಮರ್ಪಿಸಿ ಕೃತಾರ್ಥನಾದ. ಅವರ ಅನುಗ್ರಹದ ಮುಂದೆ ಯಾವ ದಾನ ಸರಿಸಾಟಿಯಾದೀತು!

ನಿರ್ಮಾಯಾತ್ರ ತಟಾಕಮೇಷ ಯತಿರಾಟ್ ಪ್ರತ್ಯೂಹಮಂಭಃ ಸೃತೌ
ಭೂದ್ರಂ ಕಂಚನಕಾಲ ವಾಹನ ಬೃಹಚ್ಛೃಂಗಾಗ್ರತೋಽಭೀಭಿದತ್ ।
ಏವಂ ಸ್ವಂ ಮಹಿಮಾನಮದ್ಭುತಮಿಳಾದೇವೇಷು ಸಂದರ್ಶಯನ್
ಅಧ್ಯಾಸ್ತಾವನಿಮಾವಿಳಂಬಿಶರದಂ ತ್ವಷ್ಟಾದಶಾಬ್ದಂ ಸುಧೀಃ ॥ ೮ ॥

ಅಲ್ಲಿ ದೊಡ್ಡ ಸರೋವರವನ್ನು ನಿರ್ಮಿಸಿದ್ದರೂ ಸಹ ತೂಬಿನಲ್ಲಿ ಸಿಕ್ಕಿಕೊಂಡಿದ್ದ ಬಂಡೆಗಲ್ಲು ನೀರು ಒಳಬರಲು ಅಡ್ಡಿಯಾಗಿ ನಿಂತುಕೊಂಡಿತ್ತು. ಅಲ್ಲಿದ್ದ ಶೂದ್ರವೇಷಧಾರಿ ಕನಕನನ್ನು ಕರೆಸಿ ಅವನ ಕೋಣದ ಕೊಂಬಿನ ತುದಿಯ ಏಟಿನಿಂದಲೇ ಅದನ್ನು ಸೀಳಿಸಿ ಸರೋವರ ತುಂಬಿಸಿದರು. ಹೀಗೆ ಬ್ರಾಹ್ಮಣರ ನಡುವೆ ಅನೇಕ ಮಹಿಮೆಗಳನ್ನು ಬೆಳಗುತ್ತಾ ವಿಳಂಬಿ ಸಂವತ್ಸರದ ಫಾಲ್ಗುಣ ಕೃಷ್ಣ ಚತುರ್ಥಿಯವರೆಗೂ ಭೂಮಿಯಲ್ಲೇ ಇದ್ದು ಅಂದೇ ದೇಹವನ್ನು ಬಿಟ್ಟರು.

ಶ್ರೀಮದ್ವ್ಯಾಸಯತೀಶಚಿತ್ರಚರಿತಂ ವಿದ್ಯಾದಿರತ್ನಾಕರ
ಪ್ರೋಕ್ತಂ ತತ್ಪದಪದ್ಮಸದ್ಮಹೃದಯೋ ಯಸ್ಸಂಪಠೇತ್ ಶುದ್ಧ ಧೀಃ ।
ತಸ್ಮಿನ್ನಾಮಗಿರೀಶ್ವರೋ ನರಹರಿಃ ಪ್ರೀಯೇತ ತದ್ಭಕ್ತತಾಂ
ಆಪ್ನೋತ್ಯೇಷ ಯತೀಶ್ವರೋಽಪಿ ಸುಧಿಯಂ ದದ್ಯಾದ್ದಯಾವಾರಿಧಿಃ ॥ ೬ ॥

ಇತಿ ಶ್ರೀ ವಿದ್ಯಾರತ್ನಾಕರತೀರ್ಥ ವಿರಚಿತ
ಶ್ರೀ ವ್ಯಾಸರಾಜಗುರುಸಾರ್ವಭೌಮ ಚರಿತ್ರಂ ಸಂಪೂರ್ಣಮ್

ಶ್ರೀಮತ್ ವ್ಯಾಸರಾಜರ ಅದ್ಭುತವಾದ ಈ ಚರಿತ್ರೆಯು ವಿದ್ಯಾರತ್ನಾಕರ ತೀರ್ಥರಿಂದ ವಿರಚಿಸಲ್ಪಟ್ಟಿದೆ. ವ್ಯಾಸರಾಜರ ಪಾದಕಮಲಗಳಲ್ಲಿ ಭಕ್ತಿಭಾವ ವನ್ನಿಟ್ಟು ಯಾರು ಇದನ್ನು ಶ್ರದ್ಧೆಯಿಂದ ಪಠಿಸುವರೋ ಅವರಿಗೆ ನಾಮಗಿರೀಶ್ವರ ನಾದ, ನರಹರಿಯು ಒಲಿಯುವನು ಅವನನ್ನು ತನ್ನ ಭಕ್ತನನ್ನಾಗಿ ಭಗವಂತ ಸ್ವೀಕರಿಸುವನು. ದಯಾಸಾಗರರಾದ ಯತಿಶೇಖರರಾದ ವ್ಯಾಸರಾಜರೂ ಸಹ ಅವರಿಗೆ ಒಳ್ಳೆಯ ಬುದ್ಧಿಯನ್ನು ನೀಡುವರು.

ಹೀಗೆ ಶ್ರೀವಿದ್ಯಾರತ್ನಾಕರ ತೀರ್ಥರು ರಚಿಸಿದ
ಶ್ರೀವ್ಯಾಸರಾಜ ಗುರುಸಾರ್ವಭೌಮರ ಚರಿತ್ರೆ ಎಂಬ ಸ್ತೋತ್ರವು ಮುಗಿಯಿತು.

ಶ್ರೀ ಅಪ್ಪಣಾಚಾರ್ಯ ವಿರಚಿತ

ಶ್ರೀರಾಘವೇಂದ್ರ ಗುರು ಸ್ತೋತ್ರಮ್

ಶ್ರೀಪೂರ್ಣಬೋಧಗುರುತೀರ್ಥಪಯೋಬ್ಧಿಪಾರಾ
ಕಾಮಾರಿಮಾಕ್ಷವಿಷಮಾಕ್ಷಶಿರಃಸ್ಪೃಶಂತೀ ।
ಪೂರ್ವೋತ್ತರಾಮಿತತರಂಗಚರತ್ಸುಹಂಸಾ
ದೇವಾಲಿಸೇವಿತಪದಾಂಘ್ರಿಪಯೋಜಲಗ್ನಾ ॥ ೧ ॥

ಜೀವೇಶಭೇದಗುಣಪೂರ್ತಿಜಗತ್ಸುಸತ್ತ್ವಾ
ನೀಚೋಚ್ಛಭಾವಮುಖನಕ್ರಗಣೈಃ ಸಮೇತಾ ।
ದುರ್ವಾದ್ಯಜಾಪತಿಗಿಲೈರ್ಗುರುರಾಘವೇಂದ್ರ –
ವಾಗ್ದೇವತಾಸರಿದಮುಂ ವಿಮಲೀಕರೋತು ॥ ೨ ॥

ಶ್ರೀರಾಘವೇಂದ್ರಃ ಸಕಲಪ್ರದಾತಾ
ಸ್ವಪಾದಕಂಜದ್ವಯಭಕ್ತಿಮದ್ಭ್ಯಃ ।
ಅಘಾದ್ರಿಸಂಭೇದನದೃಷ್ಟಿವಜ್ರಃ
ಕ್ಷಮಾಸುರೇಂದ್ರೋಽವತು ಮಾಂ ಸದಾಽಯಮ್ ॥ ೩ ॥

ಶ್ರೀರಾಘವೇಂದ್ರೋಹರಿಪಾದಕಂಜ-
ನಿಷೇವಣಾಲ್ಲಬ್ಧ ಸಮಸ್ತಸಂಪತ್ ।
ದೇವಸ್ವಭಾವೋ ದಿವಿಜದ್ರುಮೋಽಯಂ
ಇಷ್ಟಪ್ರದೋ ಮೇ ಸತತಂ ಸ ಭೂಯಾತ್ ॥ ೪ ॥

ಭವ್ಯಸ್ವರೂಪೋ ಭವದುಃಖತೂಲಸಂಘಾಗ್ನಿಚರ್ಯಃ ಸುಖಧೈರ್ಯಶಾಲೀ ।
ಸಮಸ್ತದುಷ್ಟಗ್ರಹನಿಗ್ರಹೇಶೋ ದುರತ್ಯಯೋಪಪ್ಲವಸಿಂಧುಸೇತುಃ ॥ ೫ ॥

ನಿರಸ್ತದೋಷೋ ನಿರವದ್ಯವೇಷಃ ಪ್ರತ್ಯರ್ಥಿಮೂಕತ್ವನಿದಾನಭಾಷಃ ।
ವಿದ್ವತ್‌ಪರಿಜ್ಞೇಯಮಹಾವಿಶೇಷೋ ವಾಗ್‌ವೈಖರೀನಿರ್ಜಿತಭವ್ಯಶೇಷಃ ॥ ೬ ॥

ಸಂತಾನಸಂಪತ್ಪರಿಶುದ್ಧ ಭಕ್ತಿವಿಜ್ಞಾನವಾಗ್ದೇಹಸುಪಾಟವಾದೀನ್ ।
ದತ್ವಾ ಶರೀರೋತ್ಥಸಮಸ್ತದೋಷಾನ್ ಹತ್ವಾ ಸ ನೋಽವ್ಯಾತ್
ಗುರುರಾಘವೇಂದ್ರಃ ॥ ೭ ॥

ಯತ್ಪಾದೋದಕಸಂಚಯಃ ಸುರನದೀಮುಖ್ಯಾಪಗಾಸಾದಿತಾ-
ಸಂಖ್ಯಾನುತ್ತಮಪುಣ್ಯಸಂಘವಿಲಸತ್ಪ್ರಖ್ಯಾತಪುಣ್ಯಾವಹಃ ।
ದುಸ್ತಾಪತ್ರಯನಾಶನೋ ಭುವಿ ಮಹಾವಂಧ್ಯಾಸುಪುತ್ರಪ್ರದೋ
ವ್ಯಂಗಸ್ವಂಗಸಮೃದ್ಧಿದೋ ಗ್ರಹಮಹಾಪಾಪಾಪಹಸ್ತಂ ಶ್ರಯೇ ॥ ೮ ॥

ಯತ್ಪಾದಕಂಜರಜಸಾ ಪರಿಭೂಷಿತಾಂಗಾ
ಯತ್ಪಾದಪದ್ಮಮಧುಪಾಯಿತಮಾನಸಾ ಯೇ ।
ಯತ್ಪಾದಪದ್ಮಪರಿಕೀರ್ತನಜೀರ್ಣವಾಚಃ
ತದ್ದರ್ಶನಂ ದುರಿತಕಾನನದಾವಭೂತಮ್ ॥ ೯ ॥

ಸರ್ವತಂತ್ರಸ್ವತಂತ್ರೋಽಸೌ ಶ್ರೀಮಧ್ವಮತವರ್ಧನಃ ।
ವಿಜಯೀಂದ್ರಕರಾಬ್ಜೋತ್ಥ ಸುಧೀಂದ್ರವರಪುತ್ರಕಃ ॥ ೧೦ ॥

ಶ್ರೀರಾಘವೇಂದ್ರೋ ಯತಿರಾಟ್ ಗುರುರ್ಮೇ ಸ್ಯಾದ್ಭಯಾಪಹಃ ।
ಜ್ಞಾನಭಕ್ತಿಸುಪುತ್ರಾಯುರ್ಯಶಃ ಶ್ರೀಪುಣ್ಯವರ್ಧನಃ ॥ ೧೧ ॥

ಪ್ರತಿವಾದಿಜಯಸ್ವಾಂತಭೇದಚಿಹ್ನಾದರೋ ಗುರುಃ ।
ಸರ್ವವಿದ್ಯಾಪ್ರವೀಣೋಽನ್ಯೋ ರಾಘವೇಂದ್ರಾನ್ನ ವಿದ್ಯತೇ ॥ ೧೨ ॥

ಅಪರೋಕ್ಷೀಕೃತಶ್ರೀಶಃ ಸಮುಪೇಕ್ಷಿತ ಭಾವಜಃ ।
ಅಪೇಕ್ಷಿತಪ್ರದಾತಾಽನ್ಯೋ ರಾಘವೇಂದ್ರಾನ್ನ ವಿದ್ಯತೇ ॥ ೧೩ ॥

ದಯಾದಾಕ್ಷಿಣ್ಯವೈರಾಗ್ಯವಾಕ್ಪಾಟವಮುಖಾಂಕಿತಃ ।
ಶಾಪಾನುಗ್ರಹಶಕ್ತೋಽನ್ಯೋ ರಾಘವೇಂದ್ರಾನ್ನ ವಿದ್ಯತೇ ॥ ೧೪ ॥

ಅಜ್ಞಾನವಿಸ್ಮೃತಿಭ್ರಾಂತಿಸಂಶಯಾಪಸ್ಮೃತಿಕ್ಷಯಾಃ ।
ತಂದ್ರಾಕಂಪವಚಃ ಕೌಂಠ್ಯಮುಖಾ ಯೇ ಚೇಂದ್ರಿಯೋದ್ಭವಾಃ ।
ದೋಷಾಸ್ತೇ ನಾಶಮಾಯಾಂತಿ ರಾಘವೇಂದ್ರಪ್ರಸಾದತಃ ॥ ೧೫ ॥

"ಶ್ರೀರಾಘವೇಂದ್ರಾಯ ನಮಃ" ಇತ್ಯಷ್ಟಾಕ್ಷರಮಂತ್ರತಃ ।
ಜಪಿತಾದ್ಭಾವಿತಾನ್ನಿತ್ಯಂ ಇಷ್ಟಾರ್ಥಾಃ ಸ್ಯುರ್ನ ಸಂಶಯಃ ॥ ೧೬ ॥

ಹಂತು ನಃ ಕಾಯಜಾನ್ ದೋಷಾನ್ ಆತ್ಮಾತ್ಮೀಯಸಮುದ್ಭವಾನ್ ।
ಸರ್ವಾನಪಿ ಪುಮರ್ಥಾಂಶ್ಚ ದದಾತು ಗುರುರಾತ್ಮವಿತ್ ॥ ೧೭ ॥

ಇತಿ ಕಾಲತ್ರಯೇ ನಿತ್ಯಂ ಪ್ರಾರ್ಥನಾಂ ಯಃ ಕರೋತಿ ಸಃ ।
ಇಹಾಮುತ್ರಾಪ್ತಸರ್ವೇಷ್ಟೋ ಮೋದತೇ ನಾತ್ರ ಸಂಶಯಃ ॥ ೧೮ ॥

ಅಗಮ್ಯಮಹಿಮಾ ಲೋಕೇ ರಾಘವೇಂದ್ರೋ ಮಹಾಯಶಾಃ ।
ಶ್ರೀಮಧ್ವಮತದುಗ್ಧಾಬ್ಧಿಚಂದ್ರೋಽವತು ಸದಾಽನಘಃ ॥ ೧೯ ॥

ಸರ್ವಯಾತ್ರಾಫಲಾವಾಪ್ತ್ಯೈ ಯಥಾಶಕ್ತಿ ಪ್ರದಕ್ಷಿಣಮ್ ।
ಕರೋಮಿ ತವ ಸಿದ್ಧಸ್ಯ ವೃಂದಾವನಗತಂ ಜಲಮ್ ।
ಶಿರಸಾ ಧಾರಯಾಮ್ಯದ್ಯ ಸರ್ವತೀರ್ಥಫಲಾಪ್ತಯೇ ॥ ೨೦ ॥

ಸರ್ವಾಭೀಷ್ಟಾರ್ಥಸಿದ್ಧ್ಯರ್ಥಂ ನಮಸ್ಕಾರಂ ಕರೋಮ್ಯಹಮ್ ।
ತವ ಸಂಕೀರ್ತನಂ ವೇದಶಾಸ್ತ್ರಾರ್ಥಜ್ಞಾನಸಿದ್ಧಯೇ ॥ ೨೧ ॥

ಸಂಸಾರೇಽಕ್ಷಯಸಾಗರೇ ಪ್ರಕೃತಿತೋಽಗಾಧೇ ಸದಾ ದುಸ್ತರೇ
ಸರ್ವಾವದ್ಯಜಲಗ್ರಹೈರನುಪಮೈಃ ಕಾಮಾದಿಭಂಗಾಕುಲೇ ।
ನಾನಾವಿಭ್ರಮದುರ್ಭ್ರಮೇಽಮಿತಭಯಸ್ತೋಮಾದಿಫೇನೋತ್ಕಟೇ
